ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಅಕ್ಟೋಬರ್ 20 ಗುರುವಾರ 2022

ಸಂಪುಟ: 43 | ಸಂಚಿಕೆ: 184 | ಪುಟಗಳು: 10

ಸುದ್ದಿ, ಫೋಟೋಗೆ: news@mysurumithra.com

₹4

ಜಾಹೀರಾತು: ad@mysurumithra.com

ಬಿಗ್ ಟೆಕ್ ಶೋ 2022ರಲ್ಲಿ ಸ್ಟಾರ್ಟ್‌ಅಪ್‌ಗಳ ಉದ್ಯಮ ಆಲೋಚನೆ ಅನಾವರಣ

ಉದ್ದಿಮೆ ಪಾಲುದಾರರು, ಹೂಡಿಕೆದಾರರು, ಸಲಹೆಗಾರರು, ಮೆಂಟರ್‌ಗಳಿಂದ ಯುವ ಉದ್ಯಮಶೀಲರ ಪ್ರಸ್ತಾವನೆ ಆಲಿಕೆ




ಮೈಸೂರಿನ ರ್‍ಯಾಡಿಸನ್ ಬ್ಲೂ ಪ್ಲಾಜಾದಲ್ಲಿ ಬುಧವಾರ ಬೆಳಗ್ಗೆ ಆರಂಭವಾದ ಬಿಗ್ ಟೆಕ್ ಶೋದಲ್ಲಿ ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಸಿಇಓ ಸಂಜೀವ್ ಗುಪ್ತ ಮಾತನಾಡಿದರು (ಎಡಚಿತ್ರ). ಶೋನಲ್ಲಿ ಭಾಗವಹಿಸಿದ್ದ ಉದ್ಯಮಿಗಳನ್ನು ಬಲಚಿತ್ರದಲ್ಲಿ ಕಾಣಬಹುದು.

ಮೈಸೂರು,ಅ.19(ಆರ್‌ಕೆ)–ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (ಕೆಡಿಇಎಂ) ವತಿಯಿಂದ ಮೈಸೂರಿನ ರ್‍ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲ್‌ನಲ್ಲಿ ಆಯೋಜಿಸಿರುವ ಎರಡು ದಿನಗಳ ಬಿಯಾಂಡ್ ಬೆಂಗಳೂರು ಬಿಗ್ ಟೆಕ್ ಶೋ–2022 ಇಂದಿನಿಂದ ಆರಂಭವಾಯಿತು.

ಮೈಸೂರು ನಗರ ಮತ್ತು ಸುತ್ತಲಿನ ಭಾಗದ ಸ್ಟಾರ್ಟ್ ಅಪ್‌ಗಳು (ಯುವ ಉದ್ಯಮಶೀಲರು) ಉದ್ದೇಶಿತ ಉದ್ಯಮಗಳ ಆಲೋಚನೆ, ವಿನ್ಯಾಸ ಆಮದು ರಫ್ತು, ಮಾರುಕಟ್ಟೆ ವ್ಯವಸ್ಥೆ ಸೇರಿದಂತೆ ಮಾಡಿಕೊಂಡಿರುವ ಪೂರ್ವಸಿದ್ಧತೆ ಕುರಿತಂತೆ ಬಿಗ್ ಟೆಕ್ ಶೋದಲ್ಲಿ ಪವರ್ ಪಾಯಿಂಟ್ ಪ್ರಸೆಂಟೇಷನ್ ಮೂಲಕ ಪ್ರಸ್ತುತಪಡಿಸಿದರು.

ಹೂಡಿಕೆದಾರರು, ಉದ್ಯಮ ಪಾಲುದಾರರು, ಮೆಂಟರ್‌ಗಳು ಹಾಗೂ ಸಲಹೆಗಾರರು, ಆಯ್ದ ಸ್ಟಾರ್ಟ್‌ಅಪ್‌ಗಳು ಪ್ರಸ್ತುತಪಡಿಸಿದ ಉದ್ಯಮ ಆರಂಭಿಸುವ ಕುರಿತಾದ ಪ್ರಸ್ತಾವನೆಗಳನ್ನು ಆಲಿಸಿದರು. ಸೈಬರ್ ಸೆಕ್ಯೂರಿಟಿ, ಸೆಮಿಕಂಡಕ್ಟರ್, ಎಲೆಕ್ಟ್ರಾನಿಕ್ ಸಿಸ್ಟಂ ಡಿಸೈನ್ ಅಂಡ್ ಮ್ಯಾನುಫ್ಯಾಕ್ಚರಿಂಗ್ (ಇಎಸ್‌ಡಿಎಂ) ಕುರಿತಂತೆ ಕಾರ್ಯಕ್ರಮದಲ್ಲಿ ಯುವ ಉದ್ಯಮಿಗಳಿಗೆ ಅಗತ್ಯ ಸಲಹೆ, ಮಾರ್ಗದರ್ಶನ ನೀಡಿ ಪ್ರೋತ್ಸಾಹಿಸಲಾಯಿತು. ಬಿಗ್ ಟೆಕ್ ಶೋ ಆರಂಭದ ಗೋಷ್ಠಿಯಲ್ಲಿ ಮೈಸೂರು ಬ್ಲೂ ಹೆಸರಿನ ಕಾರ್ಯಕ್ರಮ ನಡೆಯಿತು. ಸ್ಟಾರ್ಟ್ ಅಪ್‌ಗಳು, ಹೂಡಿಕೆದಾರರು, ವೆಂಚರ್ ಕ್ಯಾಪಿಟಲಿಸ್ಟ್‌ಗಳು ಯುವ ಉದ್ಯಮಿಗಳನ್ನು ಒಂದೇ ವೇದಿಕೆಗೆ ತಂದು ಆಮದು ರಫ್ತು ವಹಿವಾಟು ಕುರಿತು ಸಮಾಲೋಚನೆ ನಡೆಸಿ ಕ್ರಿಯಾಶೀಲ ಚಿಂತನೆಗಳನ್ನು ಹಂಚಿಕೊಳ್ಳುವುದು ಅದರ ಉದ್ದೇಶವಾಗಿದೆ.

ನಂತರ ಶಾರ್ಕ್ ಟ್ಯಾಂಕ್ ಎಂಬ ಟೆಲಿವಿಷನ್ ಸರಣಿ ಕಾರ್ಯಕ್ರಮದಲ್ಲಿ ಸ್ಟಾರ್ಟ್‌ಅಪ್‌ಗಳು ತಮ್ಮ ವಹಿವಾಟು ಐಡಿಯಾಗಳನ್ನು ಹೂಡಿಕೆದಾರರ ಮುಂದೆ ಪ್ರದರ್ಶಿಸಿದರು. ಅದೇ ರೀತಿ ಕೆ.ಸಿ.ಮಹೇಶ್ ಅವರು ಸ್ಥಾಪಿಸಿರುವ ಇ ಅಕ್ರಿಶ್ಯ ಇನ್ನೋವೇಷನ್ ಮೂಲಕವೂ ಉದ್ಯಮಶೀಲರು ತಮ್ಮ ಆಲೋಚನೆಗಳನ್ನು ಪ್ರಸ್ತುತಪಡಿಸಿದರು.

ಪಿಸಿ ಮಾರ್ಕೆಟ್, ಸೆಕೆಂಡ್ ಹ್ಯಾಂಡ್ ಎಲೆಕ್ಟ್ರಾನಿಕ್ಸ್, ಹ್ಯಾಂಡ್ಲಿಂಗ್ ಮಾರುಕಟ್ಟೆ ತಂತ್ರಗಳು, ಸವಾಲುಗಳು ಹಾಗೂ ಪರಿಹಾರೋಪಾಯಗಳ ಬಗ್ಗೆಯೂ ನುರಿತ ಉದ್ಯಮಿಗಳ ಬಗ್ಗೆಯೂ ಹೊಸಬರಿಗೆ ಇದೇ ವೇಳೆ ಮನವರಿಕೆ ಮಾಡಿಕೊಟ್ಟರು. ಮಧ್ಯಾಹ್ನದ ನಂತರ ವಿಮೆನ್ ಅಟ್ ವರ್ಕ್ ಗೋಷ್ಠಿ ನಡೆಯಿತು. ಕೈಗಾರಿಕೆ, ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಮಹಿಳಾ ವೃತ್ತಿಪರರು ತಮ್ಮ ಅನುಭವಗಳನ್ನು ಹಂಚಿಕೊಂಡರು. ಮೈಸೂರು ಹಾಗೂ ಸುತ್ತಮುತ್ತಲಿನ ಜಿಲ್ಲೆಗಳಿಂದ 50ಕ್ಕೂ ಹೆಚ್ಚು ನ್ಯೂ ಎಂಟರ್‌ಪ್ರಿನರ್‌ಗಳು ಭಾಗವಹಿಸಿದ್ದ ಬಿಗ್ ಟೆಕ್ ಶೋನಲ್ಲಿ ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗುಪ್ತ ಅವರು ಕಾರ್ಯಕ್ರಮದ ಧ್ಯೇಯೋದ್ದೇಶಗಳ ಬಗ್ಗೆ ಮಾತನಾಡಿದರು.

ಮೈಸೂರಲ್ಲಿ ಸೈಬರ್ ಭದ್ರತೆಯ ಉದ್ಯಮಗಳ ಸ್ಥಾಪನೆಗೆ ನೆರವು

ಕಾರ್ಯಕ್ರಮದಲ್ಲಿ ರಾಜವಂಶಸ್ಥೆ ತ್ರಿಷಿಕಾಕುಮಾರಿ ಒಡೆಯರ್ ಅಭಿಮತ



ಮೈಸೂರಿನ ರ್‍ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲಿನಲ್ಲಿ ಬುಧವಾರ ಆರಂಭವಾದ ಬಿಗ್ ಟೆಕ್ ಶೋ ಕಾರ್ಯಕ್ರಮದಲ್ಲಿ 'ವಿಮೆನ್ ಅಟ್ ವರ್ಕ್' ಸಂವಾದದಲ್ಲಿ ರಾಜವಂಶಸ್ಥೆ ತ್ರಿಷಿಕಾ ಕುಮಾರಿ ಒಡೆಯರ್ ಪಾಲ್ಗೊಂಡಿದ್ದರು. (ಎಡದಿಂದ) ವಿಪಿ ಗ್ಲೋಬಲ್ ಡೆಲಿವರಿ ಅಟ್ ಐಸಾಕ್ರೇಟ್ಸ್‌ನ ಅಶ್ವಿನಿ ತಿಮ್ಮಯ್ಯ, ಐಬಿಎಂ ಕನ್ಸಲ್ಟಿಂಗ್‌ನ ಉಷಾ ಶ್ರೀಕಾಂತ್, ಕೆಡಿಇಎಂಸಿ ಇಓ ಸಂಜೀವ್ ಗುಪ್ತ, ವಿಎಂ ವೇತನ್ ಮಧು ಬಿಂಡಿಗನವಲೆ, ಸುಪ್ರಿಯಾ ಥಾಂಡೆ, ಟಿ.ಕೆ.ಅನುರಾಧ, ಸಬ್ ಕರೀಂ, ಸುಚಿತ್ರ ರಾಯರೋತ್ ಹಾಗೂ ಅಮಿತ್ ಶರ್ಮಾ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು: ಮೈಸೂರಲ್ಲಿ ಸೈಬರ್ ಭದ್ರತೆಯ ಉದ್ಯಮಗಳ ಸ್ಥಾಪನೆಗೆ ಅಗತ್ಯ ನೆರವು ನೀಡುವುದಾಗಿ ರಾಜವಂಶಸ್ಥೆ ತ್ರಿಷಿಕಾ ಕುಮಾರಿ ಒಡೆಯರ್ ಇಂದಿಲ್ಲಿ ತಿಳಿಸಿದ್ದಾರೆ.

ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್(ಕೆಡಿಇಎಂ) ವತಿಯಿಂದ ಬಿಯಾಂಡ್ ಬೆಂಗಳೂರು ಅಭಿಯಾನದಡಿ ಮೈಸೂರಿನ ರ್‍ಯಾಡಿಸನ್ ಬ್ಲೂ ಪ್ಲಾಜಾ ಹೋಟೆಲಿನಲ್ಲಿ ಆಯೋಜಿಸಿದ್ದ ಬಿಗ್ ಟೆಕ್ ಶೋ ಕಾರ್ಯಕ್ರಮ 'ವಿಮೆನ್ ಅಟ್ ವರ್ಕ್' ಸಂವಾದದಲ್ಲಿ ಮಾತನಾಡಿದ ಅವರು, ಮೈಸೂರನ್ನು ಜಾಗತಿಕ ಸೈಬರ್ ಭದ್ರತಾ ಕೇಂದ್ರವಾಗಿ ರೂಪಿಸುವ ಸಲುವಾಗಿ ನಾವು ತಂತ್ರಜ್ಞಾನ ಕ್ಷೇತ್ರದಿಂದ ಬಂದವರಲ್ಲವಾದರೂ ಪತಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಜೊತೆಗೂಡಿ ಬೇರುಂಡ ಪ್ರತಿಷ್ಠಾಪನದ ಮೂಲಕ ಸೈಬರ್ ಭದ್ರತೆಯ ಉದ್ಯಮಗಳ ಸ್ಥಾಪನೆಗೆ ನೆರವಾಗುತ್ತಿದ್ದೇವೆ ಎಂದರು.

ಮೈಸೂರು ಸಂಸ್ಥಾನದ ರಾಜಮಾತೆಯರಾದ ಕೆಂಪನಂಜಮ್ಮಣಿ, ಲಕ್ಷಮ್ಮಣಿ ಅವರು ದಡಾರಕ್ಕೆ ಲಸಿಕೆ ಹಾಕಿಸಿ, ಮಾರಿ ಕಣಿವೆ ಜಲಾಶಯ, ಶಿವನಸಮುದ್ರ ಜಲವಿದ್ಯುತ್ ಕಾರ್ಯಾಗಾರ ಸ್ಥಾಪಿಸಿದ್ದರಲ್ಲದೆ, ಶಿಕ್ಷಣ, ಆರೋಗ್ಯ, ಕೃಷಿ, ಕೈಗಾರಿಕಾ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅವುಗಳು ಸೈಬರ್‌ವರ್ಸ್ ಫೌಂಡೇಷನ್ ಸ್ಥಾಪಿಸಲು ನಮಗೆ ಪ್ರೇರಣೆ ನೀಡಿವೆ ಎಂದು ನುಡಿದರು.

ಸ್ಟಾರ್ಟ್‌ಅಪ್‌ಗಳಿಗೆ ಪ್ರೋತ್ಸಾಹ ನೀಡಲೆಂದು ಕೆಡಿಇಎಂ ಮೈಸೂರು ಕ್ಲಸ್ಟರ್‌ನಲ್ಲಿ 23 ಕಂಪನಿಗಳನ್ನು ಆರಂಭಿಸಲಾಗಿದೆ. ಶೇ.5ರ ಬಡ್ಡಿ ದರದಲ್ಲಿ ಮಹಿಳಾ ಉದ್ಯಮಿಗಳಿಗೆ ಸಾಲ ನೀಡುವ ಮೂಲಕ ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಲಾಗುತ್ತಿದೆ ಎಂದು ಕೆಡಿಇಎಂ ಸಿಇಓ ಸಂಜೀವ್ ಗುಪ್ತಾ ತಿಳಿಸಿದರೆ, ಮೆಟಾವರ್ಸ್ ಮತ್ತು ಎಲೆಕ್ಟ್ರಾನಿಕ್ಸ್ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಮಹಿಳಾ ಉದ್ಯಮಿಗಳು ಮುಂದೆ ಬರಬೇಕೆಂದು ಸಲಹೆ ನೀಡಿದರು.

ಯಶಸ್ವಿ ಚಿತ್ರ ಕಾಂತಾರದ ಪ್ರಮುಖ ಆಕರ್ಷಣೆ ಭೂತಕೋಲಾ ಚರ್ಚಾಸ್ಪದ

● ನಟ ಚೇತನ ಮುನ್ನುಡಿ; ಭೂತಕೋಲಾ ಹಿಂದೂ ಧರ್ಮದ ಆಚರಣೆ ಅಲ್ಲ ● ಅದು ನಮ್ಮ ಮೂಲ ನಿವಾಸಿಗಳ 75 ಸಾವಿರ ವರ್ಷದ ಆಚರಣೆ ● ಅದನ್ನು ವಾಸ್ತವಿಕ ನೆಲಗಟ್ಟಿನಲ್ಲೇ ಪ್ರದರ್ಶಿಸಬೇಕಾಗುತ್ತದೆ



ಬೆಂಗಳೂರು, ಅ.19–ನಟ ರಿಷಬ್ ಶೆಟ್ಟಿ ಅವರ 'ಕಾಂತಾರ' ವಿಶ್ವಾದ್ಯಂತ ತೆರೆ ಕಂಡು ಯಶಸ್ವಿ ಪ್ರದರ್ಶನ ಕಾಣುತ್ತಿದೆ. ಅದೇ ವೇಳೆ ಈ ಚಿತ್ರದ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿರುವ ನಟ ಚೇತನ್ ಅಹಿಂಸಾ ಅವರು, ಚಿತ್ರದಲ್ಲಿ ಮೂಲನಿವಾಸಿಗಳ ಆರಾಧನೆಯಾಗಿರುವ ಭೂತಕೋಲವನ್ನು ಹಿಂದೂ ಧರ್ಮದ ಭಾಗ ಎಂಬಂತೆ ಬಿಂಬಿಸಿರುವುದು ವೈಚಾರಿಕ ತಪ್ಪು ಎಂದು ಹೇಳಿದ್ದಾರೆ.

ಈ ಸಂಬಂಧ ಇಂದು ಸುದ್ದಿಗೋಷ್ಠಿ ನಡೆಸಿದ ಅವರು, ಬೆಂಗಳೂರಿನ ಅಂಬೇಡ್ಕರ್ ಅಧ್ಯಯನ ಕೇಂದ್ರದಲ್ಲಿ ತಾನು 2017ರಲ್ಲಿ 'ಪಂಬದ' ಎಂಬ ಕೃತಿಯನ್ನು ಬಿಡುಗಡೆ ಮಾಡಿದ್ದೆ. ಈ ಕೃತಿ ಆದಿವಾಸಿ ಸಮುದಾಯಕ್ಕೆ ಸೇರಿದ್ದು. ಈ ಸಮುದಾಯಗಳ ಸಂಸ್ಕೃತಿ ಮತ್ತು ವೈಶಿಷ್ಟ್ಯಗಳಿಗೆ ನಮ್ಮ ಮೂಲ ನಿವಾಸಿ ಪರಂಪರೆಯಿದ್ದು, ಅದಕ್ಕೆ 75 ಸಾವಿರ ವರ್ಷಗಳ ಇತಿಹಾಸವಿದೆ ಎಂಬುದು.

ಕಾಂತಾರ ಚಿತ್ರದ ಬಹು ಮುಖ್ಯ ಅಂಶ ಭೂತಕೋಲದ್ದು ಎಂದಿರುವ ಅವರು,



ಈ ಭೂತಕೋಲವು ಹಿಂದೂ ಸಂಸ್ಕೃತಿಗೆ ಸೇರಿದ್ದು ಎಂದು ರಿಷಬ್ ಶೆಟ್ಟಿ ಹೇಳಿರುವುದನ್ನು ಒಪ್ಪಲು ಸಾಧ್ಯವಿಲ್ಲ, ಅದು ನಿಜವೂ ಅಲ್ಲ. ಪಂಪದ, ನಲಿಕೆ, ಪರವರ ಇವುಗಳು ಬಹುಜನ ಸಂಪ್ರದಾಯಗಳು. ವೈದಿಕ ಬ್ರಾಹ್ಮಣ್ಯದ ಹಿಂದೂ ಧರ್ಮಕ್ಕೆ ಸೇರಿದ್ದಲ್ಲ. ಹಿಂದೂ ಧರ್ಮವು ಕೇವಲ 3500 ವರ್ಷಗಳಿಂದ ಮಾತ್ರ ಇದೆ. ಆದರೆ ನಮ್ಮ ಮೂಲನಿವಾಸಿ ಪರಂಪರೆ 75 ಸಾವಿರ ವರ್ಷಗಳ ಇತಿಹಾಸ ಹೊಂದಿದೆ. ಅಂತಹ ಮೂಲವಾಸಿಗಳ ಆಚರಣೆಯನ್ನು ಪರದೆಯ ಮೇಲಾಗಲೀ ಅಥವಾ ಹೊರಗಡೆಯಾಗಲೀ ಸತ್ಯ ಸಂಗತಿಗಳೊಂದಿಗೆ ತೋರಿಸಬೇಕು ಎಂದರು.



ಮೂರೂವರೆ ವರ್ಷಗಳ ಹಿಂದೆ ಭಾರತಕ್ಕೆ ವಲಸೆ ಬಂದ ಆರ್ಯನ್ನರು ಇಲ್ಲಿನ ಬಹು ಜನರ ಮೇಲೆ ವೈದಿಕ, ಬ್ರಾಹ್ಮಣ್ಯದ ಪರಂಪರೆಯ ವೇದ, ಉಪನಿಷತ್ತು, ಸಂಸ್ಕೃತ, ಚಾತುರ್ವರ್ಣ ಹೀಗೆ ಹಲವು ಆಚರಣೆಗಳನ್ನು ಹೇರಿದರು. ನಂತರ ವೈದಿಕ, ಬ್ರಾಹ್ಮಣ್ಯದ ಪರಂಪರೆಯ ಹಿಂದೂ ಧರ್ಮ ಅಸ್ತಿತ್ವಕ್ಕೆ ಬಂದು ಬಹು ಜನರ ಆಚರಣೆ ಮತ್ತು ಸಂಸ್ಕೃತಿಯನ್ನು ಕ್ರಮೇಣವಾಗಿ ಆಚರಿಸಿಕೊಂಡು ಅದನ್ನೂ ಹಿಂದೂ ಆಚರಣೆಗಳೆಂದು ಬಿಂಬಿಸಲಾಯಿತು ಎಂದು ಹೇಳಿದರು. ನಮ್ಮ ಮೂಲನಿವಾಸಿಗಳು 75 ಸಾವಿರ ವರ್ಷಗಳಿಂದ ಭೂತಕೋಲ ಮತ್ತು ಪಂಜುರ್ಲಿಯಾ ಆರಾಧನೆ ನಡೆಸಿಕೊಂಡು ಬಂದಿದ್ದಾರೆ.

ಕಾಡು ಹಂದಿಯನ್ನು ಪಂಜುರ್ಲಾ ರೂಪದಲ್ಲಿ ಪೂಜಿಸುತ್ತಾರೆ. ಆದರೆ ಕಾಂತಾರ ಚಿತ್ರದಲ್ಲಿ ಅದೇ ಹಂದಿಗೆ ವರಾಹ ಎಂಬ ಪದ ಬಳಸಿ, ವಿಷ್ಣುವಿನ ರೂಪ ನೀಡ ಲಾಗಿದೆ. ಈ ಮೂಲಕ ಬ್ರಾಹ್ಮಣ್ಯದ ಹೇರಿಕೆ ಮಾಡಲಾಗಿದೆ. ವೈದಿಕ ಪರಂಪರೆ ಮತ್ತು ಮೂಲ ನಿವಾಸಿಗಳ ಆಚರಣೆ ನಡುವಿನ ವ್ಯತ್ಯಾಸವನ್ನು ಹೇಳದೇ ಹೋದರೆ ಆದಿವಾಸಿಗಳ ಭಾಷೆ, ಸಂಸ್ಕೃತಿ, ಆಚರಣೆ ಎಲ್ಲವೂ ಮಾಯವಾಗುತ್ತದೆ. ಹೀಗಾಗಿ ಅದರ ಬಗ್ಗೆ ಎಚ್ಚರ ವಹಿಸಬೇಕು ಎಂದು ಹೇಳಿದರು.

ಚೇತನ್ ಅವರ ಹೇಳಿಕೆಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಕೆಲವರು ನೀವು ಹೇಳುತ್ತಿರುವುದು ಸತ್ಯ, ಭೂತಕೋಲಾ ಹಿಂದೂ ಧರ್ಮಕ್ಕೂ ಮುಂಚೆ ಇದ್ದ ಆಚರಣೆ ಎಂದರೆ ಮತ್ತೆ ಕೆಲವರು ನೀವೇಕೆ ಚಿತ್ರವೊಂದನ್ನು ಮಾಡಿ ಮೂಲನಿವಾಸಿಗಳ ಆಚರಣೆ ಎಂದರೇನು, ಅದು ಹೇಗಿತ್ತು ಎಂಬುದನ್ನು ಜನತೆಗೆ ತಿಳಿಸಬಾರದು ಎಂದು ಚೇತನ್ ಅವರ ಕಾಲೆಳೆದಿದ್ದಾರೆ.

> ❝ ನನಗೆ ಸರಿಯಾಗಿ ಕಂಡದ್ದನ್ನು ಕಾಂತಾರ ಚಿತ್ರದಲ್ಲಿ ಹೇಳಿದ್ದೇನೆ. ಹೀಗಿರುವಾಗ ಬೇರೆ ಯಾರೋ ಒಬ್ಬರ ಅಭಿಪ್ರಾಯಕ್ಕೆ ನಾನ್ಯಾಕೆ ಪ್ರತಿಕ್ರಿಯೆ ನೀಡಬೇಕು.
> –ರಿಷಬ್‌ಶೆಟ್ಟಿ, ನಟ–ನಿರ್ದೇಶಕ

ಮೂರು ದಿನಗಳ ಪ್ರಥಮ ಚಿಕಿತ್ಸೆ ತರಬೇತಿ ಶಿಬಿರಕ್ಕೆ ಚಾಲನೆ

ಮೈಸೂರು,ಅ.19(ಪಿಎಂ)– ವೈದ್ಯರಲ್ಲದಿದ್ದರೂ ಪ್ರಥಮ ಚಿಕಿತ್ಸೆಯ ಕೌಶಲ್ಯ ಅರಿತರೆ ತುರ್ತು ಸಂದರ್ಭದಲ್ಲಿ ಜೀವ ಉಳಿಸುವ ಮಹತ್ಕಾರ್ಯ ನಿರ್ವಹಿಸಬಹುದು ಎಂದು ಪ್ರಾದೇಶಿಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ತರಬೇತಿ ಕೇಂದ್ರದ ಪ್ರಾಂಶುಪಾಲರಾದ ಡಾ.ಎಸ್. ಮಹೇಶ್ವರಿ ತಿಳಿಸಿದರು.

ಮೈಸೂರಿನ ಮೇಟಗಳ್ಳಿಯ ಕೆಆರ್‌ಎಸ್ ರಸ್ತೆಯಲ್ಲಿರುವ ತರಬೇತಿ ಕೇಂದ್ರದಲ್ಲಿ ಕೆಎಸ್‌ಆರ್‌ಟಿಸಿ ಮತ್ತು ಸಂಚಾರ ಪೊಲೀಸ್ ಸಿಬ್ಬಂದಿಗೆ ಹಮ್ಮಿಕೊಂಡಿರುವ ಮೂರು ದಿನಗಳ ಪ್ರಥಮ ಚಿಕಿತ್ಸೆ ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಂಗಳವಾರ ಮಾತನಾಡಿದ ಅವರು, ತುರ್ತು ಪರಿಸ್ಥಿತಿಯಲ್ಲಿ ಜೀವ ಉಳಿಸಲು ವೈದ್ಯರೇ ಬೇಕೆಂದಿಲ್ಲ. ಪ್ರಥಮ ಚಿಕಿತ್ಸೆ ಕೌಶಲ್ಯದ ತರಬೇತಿ ಪಡೆದವರೂ ಜೀವ ಉಳಿಸಬಹುದು ಎಂದರು.

ಹೃದಯಾಘಾತ, ಬೆಂಕಿ ಅವಘಡ, ರಸ್ತೆ ಅಪಘಾತ ಸೇರಿದಂತೆ ಮೊದಲಾದ ತುರ್ತು ಪರಿಸ್ಥಿತಿ ನಿಭಾಯಿಸುವ ಕುರಿತು



ಕೆಎಸ್‌ಆರ್‌ಟಿಸಿ, ಸಂಚಾರ ಪೊಲೀಸ್ ಸಿಬ್ಬಂದಿ ಸೇರಿದಂತೆ ಒಟ್ಟು 150 ಮಂದಿಗೆ ಈ ತರಬೇತಿ ಶಿಬಿರ ನಡೆಯಲಿದೆ. ಪ್ರಥಮ ಚಿಕಿತ್ಸೆ ಮೂಲಕ ಜೀವ ಉಳಿಸುವ ಹಾಗೂ ತುರ್ತಾಗಿ ಆಸ್ಪತ್ರೆಗೆ ದಾಖಲಿಸುವ ಕುರಿತು ತರಬೇತಿ ನೀಡಲಾಗುತ್ತದೆ. 150 ಮಂದಿಯನ್ನು ಮೂರು ತಂಡಗಳಾಗಿ ವಿಭಾಗಿಸಿದ್ದು, ಒಂದೊಂದು ದಿನ ಒಂದೊಂದು ತಂಡಕ್ಕೆ ತರಬೇತಿ ನಡೆಯಲಿದೆ.

ವೈದ್ಯರಾದ ಡಾ.ಸುರೇಶ್, ಡಾ.ಮಂಜುನಾಥ್, ಡಾ.ಕಿರಣ್‌ಕುಮಾರ್, ಸಂಪನ್ಮೂಲ ವ್ಯಕ್ತಿಗಳಾದ ಎಸ್.ಶರತ್, ಎನ್.ಆರ್.ಶಿವಶಂಕರ್, ಎಸ್.ಆರ್.ಅರುಣ್‌ಕುಮಾರ್ ತರಬೇತಿ ನೀಡಲಿದ್ದಾರೆ. ಅ.20ರಂದು ತರಬೇತಿ ಶಿಬಿರ ಕೊನೆಗೊಳ್ಳಲಿದೆ. ವಿಭಾಗೀಯ ಸಹ ನಿರ್ದೇಶಕಿ ಡಾ.ರಾಜೇಶ್ವರಿ ದೇವಿ ತರಬೇತಿ ಶಿಬಿರ ಉದ್ಘಾಟಿಸಿದರು.

ನಿಪುಣ್ಯ ಕೌಶಲ್ಯ ವಿಭಾಗದ ಸಿಬ್ಬಂದಿ ಹಾಗೂ ಆರೋಗ್ಯ ಇಲಾಖೆ ಸಿಬ್ಬಂದಿ ಶಿಬಿರದಲ್ಲಿ ಪಾಲ್ಗೊಂಡಿದ್ದರು.

ಅ.21, 22ರಂದು ಡಿಸಿಇಟಿ ಪರೀಕ್ಷೆಗೆ ತರಬೇತಿ

ಮೈಸೂರು,ಅ.19(ಪಿಎಂ)–ತಾಂಡವಪುರದ ಎಂಐಟಿ ಕಾಲೇಜಿನಲ್ಲಿ (ಮಹಾರಾಜ ತಾಂತ್ರಿಕ ಮಹಾವಿದ್ಯಾಲಯ) ಅ.21 ಮತ್ತು 22ರಂದು ಡಿಪ್ಲೊಮಾ ವಿದ್ಯಾರ್ಥಿಗಳಿಗೆ ಡಿಸಿಇಟಿ (ಡಿಪ್ಲೊಮಾ ಕಾಮನ್ ಎಂಟ್ರೆನ್ಸ್ ಟೆಸ್ಟ್) ಪರೀಕ್ಷೆಯ ತರಬೇತಿ ಶಿಬಿರ ಆಯೋಜಿಸಲಾಗಿದೆ ಎಂದು ಕಾಲೇಜಿನ ಇ ಅಂಡ್ ಇ ವಿಭಾಗದ ಮುಖ್ಯಸ್ಥ ಡಾ.ಎಂ.ಜಿ.ಶ್ರೀನಿವಾಸ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿಪ್ಲೊಮಾ ಮುಗಿಸಿದ ನಂತರ ಇಂಜಿನಿಯರಿಂಗ್ ಪ್ರವೇಶಕ್ಕೆ ಡಿಸಿಇಟಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವುದು ಅಗತ್ಯ. ಇಂಜಿನಿಯರಿಂಗ್ ಶಿಕ್ಷಣದ ಆಕಾಂಕ್ಷೆ ಹೊಂದಿರುವ ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಲು ಈ ತರಬೇತಿ ಶಿಬಿರ ಆಯೋಜಿಸಲಾಗಿದೆ. ಶಿಬಿರದಲ್ಲಿ ಉಪನ್ಯಾಸದ ಜೊತೆಗೆ ಅಧ್ಯಯನ ಸಾಮಗ್ರಿ ನೀಡಲಾಗುವುದು ಎಂದರು. ಶಿಬಿರ ಉಚಿತವಿದ್ದು, ನೋಂದಣಿಗೆ ಮಾತ್ರ 100 ರೂ. ಶುಲ್ಕ ನಿಗದಿ ಮಾಡಲಾಗಿದೆ. ಮೈಸೂರು, ನಂಜನಗೂಡು, ಚಾಮರಾಜನಗರ, ಮಳವಳ್ಳಿ, ಬನ್ನೂರು, ಪಾಂಡವಪುರ, ಶ್ರೀರಂಗಪಟ್ಟಣ, ಗುಂಡ್ಲುಪೇಟೆ, ಸರಗೂರು ಮತ್ತು ಹೆಚ್‌ಡಿ ಕೋಟೆಯಿಂದ ತರಬೇತಿ ಪಡೆಯಲಿಚ್ಛಿಸುವವರ ಅನುಕೂಲಕ್ಕಾಗಿ ಉಚಿತ ಬಸ್ ವ್ಯವಸ್ಥೆ ಮಾಡಲಾಗಿದೆ. ಆಸಕ್ತರು ವಿವರಗಳಿಗೆ ಮೊ.ಸಂ. 95380 25079 ಅನ್ನು ಸಂಪರ್ಕಿಸಬಹುದು. ಅಲ್ಲದೆ, ನವೆಂಬರ್ ಎರಡನೇ ವಾರದಲ್ಲಿ ಎಂಬಿಎ ಆಕಾಂಕ್ಷಿಗಳಿಗಾಗಿ ಪಿಜಿಸಿಇಟಿ ಪರೀಕ್ಷೆಯ ಉಚಿತ ತರಬೇತಿ ಶಿಬಿರ ಆಯೋಜಿಸಲಾಗುವುದು ಎಂದರು. ಕಾಲೇಜಿನ ಪ್ರಾಧ್ಯಾಪಕ ಪ್ರೊ.ಸಾಯಿದತ್ ಸುದ್ದಿಗೋಷ್ಠಿಯಲ್ಲಿದ್ದರು.

ಮೈಸೂರಲ್ಲಿ ಮತ್ತೆ ಭಾರೀ ಮಳೆ

ಮೈಸೂರು, ಅ.19(ಎಸ್‌ಬಿಡಿ)– ಮೈಸೂರಿನಲ್ಲಿ ಬುಧವಾರ ಸಂಜೆಯಿಂದ ರಾತ್ರಿ ಬಹುಹೊತ್ತಿನವರೆಗೂ ಎಡೆಬಿಡದೆ ಧಾರಾಕಾರ ಮಳೆ ಸುರಿಯಿತು.



ಒಂದೆರಡು ದಿನ ಬಿಡುವು ನೀಡಿದ್ದ ಮಳೆ ಇಂದು ಮತ್ತೆ ಆರ್ಭಟಿಸಿತು. ಸಂಜೆ ವೇಳೆಗೆ ಕಾರ್ಮೋಡ ಆವರಿಸಿ ಗುಡುಗು ಮಿಂಚು ಸಹಿತ ಮಳೆ ಶುರುವಾಯಿತು. ಸಂಜೆ 6.40ರ ಸುಮಾರಿಗೆ ಆರಂಭಗೊಂಡ ಮಳೆ ರಾತ್ರಿ ಬಹುಹೊತ್ತಿನವರೆಗೂ ಎಡೆಬಿಡದೆ ಸುರಿಯಿತು. ಪರಿಣಾಮ ದ್ವಿಚಕ್ರ ವಾಹನ ಸವಾರರು, ಪಾದಚಾರಿಗಳು, ಬೀದಿ ಬದಿ ವ್ಯಾಪಾರಿಗಳು ಹೈರಾಣಾದರು. ಕೆಲಸ ಮುಗಿಸಿ ಮನೆಗೆ ವಾಪಸ್ಸಾಗಲು ಹರಸಾಹಸಪಟ್ಟರು.

ಮಳೆಯ ಆರ್ಭಟದಿಂದ ರಸ್ತೆಗಳು, ವೃತ್ತಗಳೆಲ್ಲಾ ಜಲಾವೃತವಾಗಿದ್ದವು. ತಗ್ಗು ಪ್ರದೇಶ ಕೆರೆಯಂತಾಗಿತ್ತು. ಚರಂಡಿಗಳೆಲ್ಲಾ ತುಂಬಿ ಹರಿಯುತ್ತಿದ್ದವು. ಕೆಲವೆಡೆ ಒಳಚರಂಡಿಯಲ್ಲಿ ನೀರಿನ ಪ್ರಮಾಣ ಹೆಚ್ಚಾಗಿ ಮ್ಯಾನ್‌ಹೋಲ್‌ಗಳ ಮೂಲಕ ಉಕ್ಕುತ್ತಿತ್ತು. ತಗ್ಗು ಪ್ರದೇಶದ ಮನೆಗಳ ನಿವಾಸಿಗಳಂತೂ ತೀವ್ರ ತೊಂದರೆ ಅನುಭವಿಸಿದರು. ಒಟ್ಟಾರೆ ಬಿಡುವು ನೀಡದೆ ಸುರಿದ ಮಳೆಯಿಂದ ಜನಜೀವನ ಅಸ್ತವ್ಯಸ್ತವಾಗಿತ್ತು. ಚರಂಡಿ ಬಂದ್ ಆಗಿದ್ದರಿಂದ ಕಲ್ಯಾಣಗಿರಿನಗರದ ಹಲವು ಮನೆಗಳಿಗೆ ನೀರು ನುಗ್ಗಿತ್ತು. ಈ ಬಗ್ಗೆ ದೂರು ಬಂದ ಹಿನ್ನೆಲೆಯಲ್ಲಿ ಅಭಯ 3ನೇ ತಂಡದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ, ಮನೆಗಳಿಗೆ ನುಗ್ಗಿದ್ದ ನೀರು ಹೊರಹಾಕಿ ಚರಂಡಿಯಲ್ಲಿದ್ದ ತಡೆಯನ್ನು ತೆರವು ಮಾಡಿದರು. ಹಾಗೆಯೇ ಸಿದ್ಧಾರ್ಥನಗರದಲ್ಲಿ ದೊಡ್ಡ ಮೋರಿ ಬಂದ್ ಆಗಿ ಅವಾಂತರವಾಗಿತ್ತು. ಪಾಲಿಕೆ ತಂಡ ಜೆಸಿಬಿ ಮೂಲಕ ಕಾರ್ಯಾಚರಣೆ ನಡೆಸಿ ಸರಾಗವಾಗಿ ನೀರು ಹರಿಯಲು ಅನುವು ಮಾಡಿಕೊಟ್ಟರು.

ಸಿದ್ದರಾಮಯ್ಯ ವಿರುದ್ಧದ ಬಿಜೆಪಿ ನಾಯಕರ ಆರೋಪ ಶುದ್ಧ ಸುಳ್ಳು

● ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್ ಪ್ರತಿದಾಳಿ ● ಅಕ್ರಮಗಳ ಬಗ್ಗೆ ತನಿಖೆಗೆ ಸವಾಲು

ಮೈಸೂರು,ಅ.19(ಎಂಟಿವೈ)–ರಾಜ್ಯದ ಜನತೆ ಬಿಜೆಪಿ ಸರ್ಕಾರದ ಭ್ರಷ್ಟಾಚಾರದಿಂದ ಬೇಸತ್ತಿದ್ದು, ಕಾಂಗ್ರೆಸ್ ಪರ ಒಲವು ಹೆಚ್ಚಾಗುತ್ತಿರುವುದನ್ನು ಸಹಿಸದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಸುಳ್ಳು ಆರೋಪ ಮಾಡುವ ಮೂಲಕ ಜನರ ಗಮನ ಬೇರೆಡೆ ಸೆಳೆಯುವ ಯತ್ನ ನಡೆಸುತ್ತಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್ ಆರೋಪಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬೀದರ್‌ನಲ್ಲಿ ನಡೆದ ಜನಸಂಕಲ್ಪ ಯಾತ್ರೆಯಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ವಿರುದ್ಧ ಇಲ್ಲಸಲ್ಲದ ಆರೋಪ ಮಾಡಿದ್ದಾರೆ. ಒಂದು ವೇಳೆ ಸಿದ್ದರಾಮಯ್ಯ ಅವರು ಅಕ್ರಮವೆಸಗಿದ್ದರೆ ಇದುವರೆಗೆ ಯಾಕೆ ತನಿಖೆ ಮಾಡಿಸಲಿಲ್ಲ. ಸಿದ್ದರಾಮಯ್ಯ ಅವಧಿಯ ಅಕ್ರಮಗಳ ಪಟ್ಟಿಯನ್ನು ರಾಹುಲ್ ಗಾಂಧಿ ಅವರಿಗೆ ಕಳುಹಿಸುತ್ತೇನೆ ಎಂದಿರುವ ಉದ್ದೇಶವಾದರೂ



ಏನು? ಕೇಂದ್ರ ಹಾಗೂ ರಾಜ್ಯದಲ್ಲೂ ಬಿಜೆಪಿ ಸರ್ಕಾರವಿದೆ. ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಒಂದೇ ಒಂದು ಅಕ್ರಮ ನಡೆದಿದ್ದರೆ ತನಿಖೆ ನಡೆಸಿ ಸತ್ಯ ಹೊರ ಬರಲಿ ಎಂದು ಸವಾಲು ಹಾಕಿದರು.


ಭಾರತ್ ಜೋಡೋ ಯಾತ್ರೆಯ ಯಶಸ್ಸನ್ನು ಕಂಡು ಬಿಜೆಪಿಗೆ ನಡುಕ ಶುರುವಾಗಿದೆ. ಐಕ್ಯತಾ ಯಾತ್ರೆಗೆ ದೊರೆಯುತ್ತಿರುವ ಬೆಂಬಲ ಸಹಿಸದೆ ಬಾಲಿಶ ಹೇಳಿಕೆ ನೀಡುತ್ತಿದ್ದಾರೆ. ರಾಹುಲ್‌ಗಾಂಧಿ ಬೇಲ್ ಮೇಲಿದ್ದಾರೆ ಎನ್ನುವ ಬಿಜೆಪಿ ನಾಯಕರು, ಜೈಲಿಗೆ ಹೋಗಿ ಬಂದವರನ್ನು ತಮ್ಮ ಪಕ್ಷದ ಸಂಸದೀಯ ಮಂಡಳಿ ಸದಸ್ಯರನ್ನಾಗಿ ಮಾಡಿಕೊಂಡಿದ್ದಾರೆ. ಅವರ ಮಗನಿಗೆ ರಾಜ್ಯ ಉಪಾಧ್ಯಕ್ಷ ಸ್ಥಾನ ನೀಡಿದ್ದಾರೆ. ಇಂತಹವರಿಗೆ ಕಾಂಗ್ರೆಸ್ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ ಎಂದು ಹೆಚ್.ಎ.ವೆಂಕಟೇಶ್ ಕಿಡಿಕಾರಿದರು.

ಸರ್ಕಾರ ಟೇಕಾಫ್ ಆಗುತ್ತಿದೆ: ಇನ್ನು ಎರಡು ತಿಂಗಳಲ್ಲಿ ಚುನಾವಣಾ ಪ್ರಕ್ರಿಯೆಗಳು ಆರಂಭವಾಗುವ ಸಮಯದಲ್ಲಿ ಸಿಎಂ ಬೊಮ್ಮಾಯಿ ನೇತೃತ್ವದ ಸರ್ಕಾರ ಟೇಕಾಫ್ ಆಗಲು ಹವಣಿಸುತ್ತಿದೆ. ಅಧಿಕಾರಿಗಳ ಮೇಲೆ ಸಿಎಂಗೆ ಹಿಡಿತವಿಲ್ಲ. ಸಚಿವರನ್ನು ನಿಯಂತ್ರಿಸಲು ಸಾಧ್ಯವಾಗಿಲ್ಲ. ನೆರೆ ಹಾಗೂ ಬರದಿಂದ ತತ್ತರಿಸಿರುವ ಜನರಿಗೆ ನೆರವು ನೀಡಲು ಆಗುತ್ತಿಲ್ಲ. ಉಸ್ತುವಾರಿ ಸಚಿವರು ಕಾಣೆಯಾಗಿದ್ದಾರೆ. ತಪ್ಪನ್ನು ಮುಚ್ಚಿಕೊಳ್ಳಲು ಅಧಿಕಾರಿಗಳ ಮೇಲೆ ಹರಿಹಾಯುತ್ತಿದ್ದಾರೆ. ಜನ ಸಂಕಷ್ಟದಲ್ಲಿದ್ದರೂ ಅವರ ನೆರವಿಗೆ ನಿಲ್ಲದೆ ಸಂಕಲ್ಪ ಯಾತ್ರೆ ಮಾಡುತ್ತಿದ್ದಾರೆ. ಮುಂದಿನ ಚುನಾವಣೆಯಲ್ಲಿ ಬಿಜೆಪಿ ಪತನವಾಗಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಗ್ಯಾರಂಟಿ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಗೋಷ್ಠಿಯಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಮೈಸೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಮಾಜಿ ಸದಸ್ಯ ಎನ್.ಗೋಪಿನಾಥ್, ಸೇವಾದಳದ ನಗರ ಘಟಕದ ಅಧ್ಯಕ್ಷ ಗಿರೀಶ್ ಇದ್ದರು.

ಜೋಡೋ ಯಾತ್ರೆ ಕುರಿತು ಪುಸ್ತಕ ತರಲು ಚಿಂತನೆ

> ❝ ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆಯುತ್ತಿರುವ ಭಾರತ್ ಜೋಡೋ ಯಾತ್ರೆಗೆ ಅಭೂತಪೂರ್ವ ಯಶಸ್ಸು, ಎಲ್ಲೆಡೆ ವ್ಯಾಪಕ ಬೆಂಬಲ ದೊರೆಯುತ್ತಿದೆ. ರಾಜ್ಯದಲ್ಲಿ 21 ದಿನ ಭಾರತ ಐಕ್ಯತಾ ಯಾತ್ರೆ ಸಾಗಿದೆ. ಇದೊಂದು ಐತಿಹಾಸಿಕ ಪಾದಯಾತ್ರೆಯಾಗಿದ್ದು, ದೇಶದ ಚರಿತ್ರೆಯ ಪುಟದಲ್ಲಿ ಸೇರ್ಪಡೆಗೊಳ್ಳಲಿದೆ. ಈ ಪಾದಯಾತ್ರೆ ಕುರಿತಂತೆ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಕೃತಿ ತರುವ ಚಿಂತನೆಯಿದೆ. ಪಾದಯಾತ್ರೆಯಲ್ಲಿ ಭಾಗವಹಿಸಿದವರ ಸಂದರ್ಶನ, ರಾಹುಲ್‌ಗಾಂಧಿಯವರ ಭಾಷಣ ಸೇರಿದಂತೆ ಅಪರೂಪದ ಕ್ಷಣಗಳ ಚಿತ್ರಣ ಪುಸ್ತಕದಲ್ಲಿರಲಿದೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ ಅವರೊಂದಿಗೆ ಚರ್ಚಿಸಿ ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು.
> –ಹೆಚ್.ಎ.ವೆಂಕಟೇಶ್, ಕೆಪಿಸಿಸಿ ವಕ್ತಾರ

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.10.2022 ಗುರುವಾರ, ಮಳೆ ನಕ್ಷತ್ರ: ಚಿತ್ತ 11.10.2022 ರಿಂದ 23.10.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಆಶ್ವಯುಜ ಮಾಸ, ಕೃಷ್ಣ ಪಕ್ಷ,
ತಿಥಿ: ದಶಮಿ, ನಕ್ಷತ್ರ : ಆಶ್ಲೇಷ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆವರೆಗೆ

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ:** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10ರಿಂದ.

■ **ಗೊಂಬೆಗಳ ಪ್ರದರ್ಶನ:** ಕೆ.ಎಸ್.ರಾಘವೇಂದ್ರ ಅವರು ಕೈಯಿಂದ ಮಾಡಿರುವ 170 ಬೊಂಬೆಗಳ ಪ್ರದರ್ಶನ. ಸ್ಥಳ: ಇಂಚರ ಕಲಾ ಕ್ಷೇತ್ರ, ವಿಜಯನಗರ. ಬೆಳಗ್ಗೆ 10 ಗಂಟೆಯಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಮಧುಮೇಹ ತೊಂದರೆಗೆ ಚಿಕಿತ್ಸಾ ಶಿಬಿರ. ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ. ಬೆಳಗ್ಗೆಯಿಂದ.

■ **ವಿದ್ಯಾವಿಕಾಸ ನರ್ಸಿಂಗ್ ಕಾಲೇಜು :** ಇಂಟರ್‌ನ್ಯಾಷನಲ್ ಓಸ್ಟೋಪೊರಿಸಿಸ್ ಡೇ, ಮುಖ್ಯ ಅತಿಥಿಗಳು : ಡಾ. ಎಂ.ಎಸ್. ಮೃತ್ಯುಂಜಯ, ಅಧ್ಯಕ್ಷತೆ : ವಿದ್ಯಾ ವಿಕಾಸ ಎಜುಕೇಷನಲ್ ಟ್ರಸ್ಟ್ ಕಾರ್ಯದರ್ಶಿ ವಿ.ಕವೀಶ್‌ಗೌಡ, ಸ್ಥಳ: ಲಲಿತ ಸ್ಮಾರಕ ಭವನ, ಕಾಲೇಜು ಆವರಣ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ–ಬಾನುಲಿ ಸರಣೀ, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ–ಗಾಯನ–ಎಂ.ಎ. ಶೋಭಾ, ಅಮೃತಾ ನಿತಿನ್ ಶಾಸ್ತ್ರಿ, ವ್ಯಾಖ್ಯಾನ–ಡಾ.ಬೋರೇಗೌಡ ಚಿಕ್ಕಮರಳ್ಳಿ, 10.00 ಓಲೇಟಿ ವೆಂಕಟೇಶ್ವರುಲು–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರನಾಮ, 12.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ್ ಮತ್ತು ಕೆ.ಬಿ.ಮೀನಾ, 1.20 ಭಾವಗೀತೆ–ಡಿ.ಕುಮಾರದಾಸ, ಕೆ.ಆರ್. ಸವಿತ, 4.00 ಜನಪದ ಸಂಗೀತ–ಡಾ.ಪಿ.ಕೆ.ರಾಜಶೇಖರ್ ಮತ್ತು ತಂಡ, 6.50 ಕೃಷಿರಂಗ–ಕಿಸಾನ್ ವಾಣಿ, ಸಮಗ್ರ ಕೃಷಿಯಲ್ಲಿ ಸಂತೃಪ್ತ ಬದುಕು ಕುರಿತು ಕೃಷಿಕ ದಂಪತಿ ಸಿ.ಪಿ.ಕೃಷ್ಣ ಮತ್ತು ವಿ.ಬಿ.ಮಂಜುಳಾ ಅವರೊಂದಿಗೆ ಮಾತುಕತೆ–ಭಾಗ–1, 9.00 ಯುವವಾಣಿ, 10.00 ನಾಟಕ, 10.30 ಸವಿನೆನಪು

■ **ಮಹಾಜನ ಪ್ರಥಮ ದರ್ಜೆ ಕಾಲೇಜು :** ಆತ್ಮನಿರ್ಭರ್ ಭಾರತ್ ಅಭಿಯಾನ : ಅವಕಾಶಗಳು ಮತ್ತು ಸವಾಲುಗಳು ಕುರಿತು ವೆಬಿನಾರ್, ಪ್ರಾಸ್ತಾವಿಕ ಭಾಷಣ : ಅರ್ಥಶಾಸ್ತ್ರಜ್ಞ ಡಾ. ಸಿ.ಕೆ. ರೇಣುಕಾರ್ಯ, ಸಂಪನ್ಮೂಲ ವ್ಯಕ್ತಿಗಳು : ಪ್ರೊ. ಮುಜಾಫಿರ್ ಹೆಚ್. ಅಸ್ಸಾದಿ, ಡಾ. ಬಿ. ಗೋಪಾಲ್ ಸಿಂಗ್, ಸ್ಥಳ: ಎವಿಸಿ ಸಭಾಂಗಣ, ಬೆಳಗ್ಗೆ 11.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ನೃತ್ಯಗಿರಿ (ಪ್ರದರ್ಶನ ಕಲೆಗಳ ಸಂಶೋಧನಾ ಕೇಂದ್ರ, ಮೈಸೂರು):** ನೃತ್ಯ ಸಪ್ತಾಹ, ಬೆಳ್ಳಿಹಬ್ಬದ ಸಂಭ್ರಮ, ಗುರುವಂದನಾ ಕಾರ್ಯಕ್ರಮ, ಕುಮಾರಿ ವಿಶ್ರುತ ಎ. ಅವರಿಂದ ಗುರುವಂದನಾ ಕಾರ್ಯಕ್ರಮ, ಅಧ್ಯಕ್ಷತೆ: ಎಸ್‌ಜೆಸಿಇ ಇ ಅಂಡ್ ಸಿ ವಿಭಾಗದ ಡಾ. ಎಂ.ಜಿ. ವೀಣಾ, ಮುಖ್ಯ ಅತಿಥಿಗಳು : ವಿವಿಎಸ್ ಬಿ.ಎಂ.ಶ್ರೀ ಶಿಕ್ಷಣ ಸಂಸ್ಥೆ ಪ್ರಿನ್ಸಿಪಾಲ್ ಎನ್. ರಮೇಶ್, ಸ್ಥಳ: ವೀಣೆಶೇಷಣ್ಣ ಭವನ, ಗಾನ ಭಾರತಿ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ. ಸಂಜೆ 6 ಗಂಟೆಯಿಂದ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಅಕ್ಟೋಬರ್ 20 ಗುರುವಾರ 2022

ಸಂಪುಟ: 43 | ಸಂಚಿಕೆ: 184 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



‖ಜಾತ್ಯಾತೀತ ಜನತಾದಳ ಅಧಿಕಾರಕ್ಕೆ ತಂದರೆ ಉಚಿತ ಶಿಕ್ಷಣ, ಆರೋಗ್ಯ ‖ರೈತರಿಗೆ ವಿಶೇಷ ಕಾರ್ಯಕ್ರಮ ‖ ಪ್ರತಿ ಕುಟುಂಬಕ್ಕೆ ಉದ್ಯೋಗ ‖ಮನೆ ಖಾತರಿಯ ಪಂಚರತ್ನ ಯೋಜನೆ

ಜನತೆಗೆ ಮನದಟ್ಟು ಮಾಡಿಕೊಡಲು

ರಾಜ್ಯಾದ್ಯಂತ ನ.1ರಿಂದ 'ಪಂಚರತ್ನ ರಥಯಾತ್ರೆ'

●ಮಾಜಿ ಪ್ರಧಾನಿ ದೇವೇಗೌಡರ ಮಹತ್ವಾಕಾಂಕ್ಷಿ ಜನಸ್ನೇಹಿ ಯೋಜನೆ ●ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಘೋಷಣೆ ●ಮೈಸೂರಲ್ಲಿ ಸಂಭವನೀಯ ಅಭ್ಯರ್ಥಿಗಳಿಗೆ ಕಾರ್ಯಾಗಾರ

ಮೈಸೂರು, ಅ.19(ಆರ್‌ಕೆಬಿ)– ಮಾಜಿ ಪ್ರಧಾನಿ ಹಾಗೂ ಜೆಡಿಎಸ್ ಹಿರಿಯ ನಾಯಕ ಹೆಚ್.ಡಿ.ದೇವೇಗೌಡರ ನೇತೃತ್ವದಲ್ಲಿ ಜೆಡಿಎಸ್‌ನ ಐದು ವಿಶಿಷ್ಟ ಜನಸ್ನೇಹಿ ಕಾರ್ಯ ಕ್ರಮಗಳನ್ನು ಒಳಗೊಂಡ 'ಪಂಚರತ್ನ ರಥ ಯಾತ್ರೆ'ಗೆ ನ.1ರ ಕನ್ನಡ ರಾಜ್ಯೋತ್ಸವ ದಿನದಂದು ಕೋಲಾರ ಜಿಲ್ಲೆಯ ಮುಳಬಾಗಿಲುವಿನಲ್ಲಿ ಚಾಲನೆ ದೊರೆಯಲಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಇಂದಿಲ್ಲಿ ತಿಳಿಸಿದರು.

ಮೈಸೂರಿನ ಹೊರವಲಯದ ಹೂಟಗಳ್ಳಿ ಬಳಿಯ ಖಾಸಗಿ ರೆಸಾರ್ಟ್‌ನಲ್ಲಿ ಆಯೋಜಿಸಿದ್ದ ಎರಡು ದಿನಗಳ ಜೆಡಿಎಸ್‌ನ ಸಂಭವನೀಯ ಅಭ್ಯರ್ಥಿಗಳು ಮತ್ತು ಪ್ರಮುಖರ ಸಮಾಲೋಚನಾ ಕಾರ್ಯಾಗಾರಕ್ಕೂ ಮುನ್ನ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಉಚಿತ ಶಿಕ್ಷಣ, ಉಚಿತ ಆರೋಗ್ಯ, ರೈತರಿಗೆ ವಿಶೇಷ ಕಾರ್ಯಕ್ರಮಗಳು, ಪ್ರತಿ ಕುಟುಂಬಕ್ಕೆ ಉದ್ಯೋಗ, ಪ್ರತಿ ಕುಟುಂಬಕ್ಕೆ ಮನೆ ನೀಡುವುದು ಪಕ್ಷ ರೂಪಿಸಿರುವ 'ಪಂಚರತ್ನ'ಗಳಾಗಿವೆ. ಈ ಯೋಜನೆಗಳನ್ನು ನಾಡಿನ

▶ 8ನೇ ಪುಟಕ್ಕೆ



ಮೈಸೂರಲ್ಲಿ ಪಂಚರತ್ನ ರಥಯಾತ್ರೆ ಜಿ.ಟಿ.ದೇವೇಗೌಡರ ನೇತೃತ್ವದಲ್ಲೇ ನಡೆಯಲಿದೆ: ಕುಮಾರಸ್ವಾಮಿ ಸ್ಪಷ್ಟನೆ

ಮೈಸೂರು, ಅ.19(ಆರ್‌ಕೆಬಿ)–ಮೈಸೂರು ಜಿಲ್ಲೆಯಲ್ಲಿ ಪಂಚರತ್ನ ಯಾತ್ರೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕರೂ, ಹಿರಿಯ ಮುಖಂಡರಾದ ಜಿ.ಟಿ.ದೇವೇಗೌಡರ ನೇತೃತ್ವದಲ್ಲಿ ನಡೆಯಲಿದೆ.

ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಮೈಸೂರಿನಲ್ಲಿ ಯಾವುದೇ ಗೊಂದಲ ಇಲ್ಲ. ಶಾಸಕ ಸಾ.ರಾ.ಮಹೇಶ್, ಸಿ.ಎಸ್.ಪುಟ್ಟರಾಜು ಇನ್ನಿತರರು ಜಿ.ಟಿ.ದೇವೇಗೌಡರ ಸಂಪರ್ಕದಲ್ಲಿದ್ದಾರೆ. ಎಲ್ಲವನ್ನು ಬಗೆಹರಿಸಿದ್ದಾರೆ. ಜಿ.ಟಿ.ದೇವೇಗೌಡರು ಬೇರೆ ಕಾರ್ಯಕ್ರಮ ಇದ್ದುದರಿಂದ ಅನುಮತಿ ಪಡೆದೇ ಹೋಗಿದ್ದಾರೆ. ಅವರು ಕಾರ್ಯಕ್ರಮಕ್ಕೆ ಗೈರು ಹಾಜರಾಗಿಲ್ಲ. ಮೈಸೂರಿನಲ್ಲಿ ಅರಂಭಗೊಳ್ಳಲಿರುವ 2ನೇ ಹಂತದ ಪಂಚರತ್ನ ಯಾತ್ರೆ ಅವರದ್ದೇ ನೇತೃತ್ವದಲ್ಲಿ ನಡೆಯಲಿದೆ ಎಂದು ಹೇಳಿದರು.

ಅಖಿಲ ಭಾರತ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ

ಎಂ.ಮಲ್ಲಿಕಾರ್ಜುನ ಖರ್ಗೆ ಜಯಭೇರಿ

●ಚಲಾವಣೆಯಾದ 9500 ಮತಗಳಲ್ಲಿ ಖರ್ಗೆ ಅವರು ಗಳಿಸಿದ್ದು 7897 ಮತ ●ಪ್ರತಿಸ್ಪರ್ಧಿ ಶಶಿ ತರೂರ್‌ಗೆ ಕೇವಲ 1,072 ಮತ; 6,897 ಮತಗಳ ಅಂತರದಿಂದ ಖರ್ಗೆ ಜಯ ●ಮತ್ತೊಮ್ಮೆ ಕರ್ನಾಟಕದ ಹಿರಿಯ ರಾಜಕೀಯ ಮುತ್ಸದ್ದಿಗೆ ಒಲಿದ ಕಾಂಗ್ರೆಸ್ ಅತ್ಯುನ್ನತ ಸ್ಥಾನ

ಬೆಂಗಳೂರು, ಅ.19(ಕೆಎಂಶಿ)– ಕಾಂಗ್ರೆಸ್ ಪಕ್ಷದ ನೂತನ ಅಧ್ಯಕ್ಷರಾಗಿ ರಾಜ್ಯ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ಆಯ್ಕೆಯಾಗಿದ್ದಾರೆ. ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕಾಗಿ ಕಳೆದ 17 ರಂದು ನಡೆದ ಚುನಾವಣೆಯ ಮತ ಎಣಿಕೆ ಇಂದು ನಡೆದು ಖರ್ಗೆ ಅವರಿಗೆ 7,897 ಮತಗಳು ಬಿದ್ದಿವೆ. ಅವರ ಪ್ರತಿಸ್ಪರ್ಧಿ ಕೇರಳದ ಶಶಿ ತರೂರ್ ಅವರಿಗೆ ಕೇವಲ 1,072 ಮತಗಳು ಬಿದ್ದಿವೆ. 416 ಮತಗಳು ತಿರಸ್ಕೃತಗೊಂಡ ನಂತರ 6897 ಮತಗಳ ಅಂತರದಲ್ಲಿ ಖರ್ಗೆ ಜಯ ಗಳಿಸಿದ್ದಾರೆ. 22 ವರ್ಷಗಳ ಬಳಿಕ ನೆಹರು–ಗಾಂಧಿ ಕುಟುಂಬದ

▶ 8ನೇ ಪುಟಕ್ಕೆ

ಅನಗತ್ಯ ವಿವಾದಗಳನ್ನು ಕೊನೆಗೊಳಿಸಿ ಮುಂದೆ ಸಾಗೋಣ: ಪರಾಜಿತ ಅಭ್ಯರ್ಥಿ ಶಶಿ ತರೂರ್



ನವದೆಹಲಿ, ಅ.19– ಎಐಸಿಸಿ ಅಧ್ಯಕ್ಷ ಸ್ಥಾನ ಮಲ್ಲಿಕಾರ್ಜುನ ಖರ್ಗೆಯವರಿಗೆ ಒಲಿಯುತ್ತಿದ್ದಂತೆ ಸೋನಿಯಾ ಗಾಂಧಿಗಿಂತಲೂ ಮೊದಲೇ ಅವರ ಮನೆಗೆ ಭೇಟಿ ನೀಡಿ, ಅಭಿನಂದನೆ ಸಲ್ಲಿಸಿದ ಪರಾಜಿತ ಅಭ್ಯರ್ಥಿ

▶ 8ನೇ ಪುಟಕ್ಕೆ



ಖರ್ಗೆ ನಿವಾಸಕ್ಕೇ ಬಂದು ಅಭಿನಂದಿಸಿದ ಸೋನಿಯಾ

ನವದೆಹಲಿ, ಅ.19– ಕಾಂಗ್ರೆಸ್ ಹಂಗಾಮಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಪಕ್ಷದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ನಿವಾಸಕ್ಕೇ ಆಗಮಿಸಿ, ಅವರನ್ನು ಅಭಿನಂದಿಸಿದರು. ಸೋನಿಯಾ ಗಾಂಧಿ ಜೊತೆ ಅವರ ಪುತ್ರಿ ಹಾಗೂ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು ಸಹ ನೂತನ ಅಧ್ಯಕ್ಷ ಖರ್ಗೆ ಅವರನ್ನು ಅಭಿನಂದಿಸಿದರು. ಈ ವೇಳೆ ಮಲ್ಲಿಕಾರ್ಜುನ ಖರ್ಗೆ ಅವರ ಪತ್ನಿ ಹಾಗೂ ಅವರ ಪುತ್ರ ಪ್ರಿಯಾಂಕ್ ಖರ್ಗೆ ಇದ್ದರು.

ಖರ್ಗೆ ಅವರು ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾದ ಕೂಡಲೇ ಸೋನಿಯಾ ಗಾಂಧಿ ಅವರ 10, ಜನ್‌ಪಥ್ ನಿವಾಸಕ್ಕೆ ತೆರಳಿ ಅವರ ಭೇಟಿ ಮಾಡಲು ನಿರ್ಧರಿಸಿದ್ದರು.ಈ ಭೇಟಿಗಾಗಿ ಅವರು ಅಪಾಯಿಂಟ್‌ಮೆಂಟ್‌ಗೆ ವಿನಂತಿಸಿದರೂ ಸಿಗಲಿಲ್ಲ. ಆದರೆ ಕಾಂಗ್ರೆಸ್ ಯೋಜನೆ ಬೇರೆಯಾಗಿತ್ತು. ಅದೇನೆಂದರೆ ಸೋನಿಯಾಗಾಂಧಿ ಅವರ ಮನೆಗೆ ಖರ್ಗೆ ಭೇಟಿ ನೀಡುವ ಬದಲು ಸೋನಿಯಾ ಗಾಂಧಿ ಅವರೇ ಖರ್ಗೆ ಅವರ 10, ರಾಜಾಜಿ ಮಾರ್ಗದಲ್ಲಿರುವ ಮನೆಗೆ ಭೇಟಿ ನೀಡಿದ್ದರು. ಈ ಮೂಲಕ ಸೋನಿಯಾ ಗಾಂಧಿ ಇಲ್ಲಿಯವರೆಗೆ ನಡೆದು ಬರುತ್ತಿದ್ದ ಕಾಂಗ್ರೆಸ್ 'ಸಂಪ್ರದಾಯವನ್ನು' ಮುರಿದಿದ್ದಾರೆ.

ಬಿಗ್ ಟೆಕ್ ಶೋ 2022ರಲ್ಲಿ ಸ್ಟಾರ್ಟ್‌ಅಪ್‌ಗಳ ಉದ್ಯಮ ಆಲೋಚನೆ ಅನಾವರಣ

ಪುಟ–2



ಮೈಸೂರು–ಕುಶಾಲನಗರ ರೈಲು ಮಾರ್ಗ

ಮೈಸೂರಿಂದ ಕಂಪಲಾಪುರವರೆಗೆ ಸರ್ವೇ ಕಾರ್ಯ ಪೂರ್ಣ

ಮಡಿಕೇರಿ,ಅ.19– ಮೈಸೂರು–ಬೆಳಗೊಳ–ಕುಶಾಲನಗರವರೆಗಿನ ರೈಲ್ವೇ ಮಾರ್ಗದ ಅಂತಿಮ ಹಂತದ ಸರ್ವೆ ಕಾರ್ಯ ಮೈಸೂರಿಂದ ಕಂಪಲಾಪುರವರೆಗೆ ಪೂರ್ಣಗೊಂಡಿದೆ. ಮೈಸೂರು–ಕೊಪ್ಪವರೆಗಿನ 87.2 ಕಿ.ಮೀ ಸರ್ವೇ ಕಾರ್ಯದ ಪೈಕಿ ಪಿರಿಯಾಪಟ್ಟಣದ ಕಂಪಲಾಪುರವರೆಗೆ ಸರ್ವೇ ಕಾರ್ಯ ಮುಕ್ತಾಯಗೊಂಡಿದೆ.

ಒಟ್ಟು 1854.62 ಕೋಟಿ ರೂ. ವೆಚ್ಚದ ಉದ್ದೇಶಿತ ರೈಲ್ವೇ ಯೋಜನೆಗೆ 2019ರ ಫೆಬ್ರವರಿ 27ರಂದು ರೈಲ್ವೇ ಸಚಿವಾಲಯ ಅನುಮೋದನೆ ನೀಡಿತ್ತು. ಈ ನಡುವೆ 2020ರ ಅಕ್ಟೋಬರ್ ತಿಂಗಳಲ್ಲಿ ನೈರುತ್ಯ ರೈಲ್ವೆಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ(ನಿರ್ಮಾಣ) ಮೈಸೂರು–ಬೆಳಗೊಳ–ಕುಶಾಲನಗರ 'ಬ್ರಾಡ್‌ಗೇಜ್' ರೈಲ್ವೇ ಮಾರ್ಗದ ಸರ್ವೆಗೆ ಸೂಚನೆ ನೀಡಿದ್ದರು.

ಈ ರೈಲ್ವೇ ಯೋಜನೆಗೆ ಖರ್ಚಾಗುವ ಹಣದ ಪೈಕಿ 2022–23ನೇ ಸಾಲಿನ ಕೇಂದ್ರ ಬಜೆಟ್‌ನಲ್ಲಿ ಸಾವಿರ ಕೋಟಿ ರೂ.ಗಳನ್ನು ಮಂಜೂರು ಮಾಡಲಾಗಿದೆ. ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಈ ಯೋಜನೆ ಜಾರಿಗೆ ಒತ್ತಾಸೆಯಾಗಿದ್ದು, ಹಿಂದಿನ ರೈಲ್ವೇ ಸಚಿವ ಪಿಯೂಷ್ ಗೋಯೆಲ್ ಈ ಮಾರ್ಗವನ್ನು ಮಂಜೂರು ಮಾಡಿದ್ದಾರೆ. ಮಾತ್ರವಲ್ಲದೇ 2018–19ರಲ್ಲಿ ರೈಲ್ವೇ ಇಲಾಖೆಯ 'ಪಿಂಕ್ ಬುಕ್'ನಲ್ಲಿ ಯೋಜನೆಯನ್ನು ದಾಖಲಿಸಲಾಗಿದೆ. 2021ರ ಆಗಸ್ಟ್

ನವೆಂಬರ್ ಅಂತ್ಯಕ್ಕೆ ಅಂತಿಮ ವರದಿ ಸಲ್ಲಿಕೆ



ತಿಂಗಳಲ್ಲಿ ಈ ರೈಲ್ವೇ ಮಾರ್ಗದ ಸರ್ವೇ ನಡೆಸಲು ಬೆಂಗಳೂರು ಮೂಲದ 'ಸಿಪ್ರಂ ಸಿಸ್ಟಂ ಪ್ರೈವೇಟ್ ಲಿಮಿಟೆಡ್' ಕಂಪನಿಗೆ 1.26 ಕೋಟಿ ವೆಚ್ಚದಲ್ಲಿ ಟೆಂಡರ್ ನೀಡಲಾಗಿದೆ. ಮಂಡ್ಯದ ಶ್ರೀರಂಗಪಟ್ಟಣದಿಂದ ಆರಂಭವಾಗಲಿರುವ ಈ ರೈಲ್ವೇ ಲೈನ್ ಇಲವಾಲ– ಬಿಳಿಕೆರೆ–ಉದ್ದೂರು–ಹುಣಸೂರು–ಪಿರಿಯಾಪಟ್ಟಣ–ದೊಡ್ಡಹೊನ್ನೂರು ಮಾರ್ಗವಾಗಿ ಕುಶಾಲನಗರ ಸಮೀಪದ ಕೊಪ್ಪ ಬಳಿ ಅಂತಿಮವಾಗಲಿದೆ.

ಪ್ರಯಾಸದ ಸರ್ವೇ: ರೈಲ್ವೇ ಮಾರ್ಗದ ಸರ್ವೇ ನಡೆಸುತ್ತಿರುವ ಸಂಸ್ಥೆಯ ಸರ್ವೇ ಅಧಿಕಾರಿ ರಾಮಯ್ಯ ನೀಡಿದ ಮಾಹಿತಿ ಪ್ರಕಾರ ಈಗಾಗಲೇ ಭೂ ಸ್ವಾಧೀನ ಸರ್ವೇ, ರೈಲ್ವೇ ಹಳಿ ಸರ್ವೇ, ರೈಲು ಹಾದು ಹೋಗುವ ಪ್ರದೇಶದ ಸರ್ವೇಯನ್ನು ಪೂರ್ಣಗೊಳಿಸಲಾಗಿದೆ. ಇದೀಗ ಯಾವುದೇ ರೈಲು ಮಾರ್ಗ ನಿರ್ಮಾಣ ಮಾಡುವ ಮುನ್ನ

▶ 8ನೇ ಪುಟಕ್ಕೆ

ತಿಂಗಳಲ್ಲಿ ಬಗರ್‌ಹುಕುಂ ಸಾಗುವಳಿ ಪತ್ರ

ಬೆಂಗಳೂರು ಅ.19(ಕೆಎಂಶಿ)–ಬಗರ್‌ಹುಕುಂ ಸಮಿತಿ ಮಂಜೂರು ಮಾಡಿದ ಸಾಗುವಳಿದಾರರಿಗೆ ಮಂಜೂರಾತಿ ಪತ್ರವನ್ನು ತಿಂಗಳೊಳಗೆ ನೀಡುವಂತೆ ಹಾಗೂ ಸಾಗುವಳಿ ಪತ್ರ ನೀಡಿದ ಮಾಹಿತಿಯನ್ನು ವಾರದೊಳಗೆ ಇಲಾಖೆಗೆ ಸಲ್ಲಿಸುವಂತೆ ಸಮಾಜ ಕಲ್ಯಾಣ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ತಾಲೂಕು ಬಗರ್‌ಹುಕುಂ ಸಮಿತಿ ಈಗಾಗಲೇ ಅರ್ಹರಿಗೆ ಭೂಮಿ ಮಂಜೂರಾತಿ ನೀಡಿದೆ. ಸ್ವಾಧೀನದಲ್ಲಿರುವವರಲ್ಲಿ ಶೋಷಿತ ಸಮುದಾಯದವರೇ ಹೆಚ್ಚು ಸಾಗುವಳಿದಾರರಾಗಿದ್ದಾರೆ. ಆದರೂ ಕೆಲವು ತಹಸೀಲ್ದಾರ್ ಸಾಗುವಳಿ ಪತ್ರ ನೀಡದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಸಚಿವರು, ಈಗಾಗಲೇ ಸ್ಥಳ ಪರಿಶೀಲನೆ ನಡೆಸಿರುವ ಪ್ರಕರಣಗಳಲ್ಲಿ ಎಲ್ಲರಿಗೂ ಸಾಗುವಳಿ ಪತ್ರ ನೀಡಬೇಕು. ತಿಂಗಳೊಳಗೆ ಈ ಪ್ರಕ್ರಿಯೆ ಪೂರ್ಣಗೊಳಿಸಿ ವಾರದೊಳಗೆ ಎಷ್ಟು ಪ್ರಕರಣಗಳು ಇತ್ಯರ್ಥವಾಗಿವೆ ಎಂದು ವರದಿ ಸಲ್ಲಿಸಬೇಕೆಂದು ಸೂಚಿಸಿದರು.



ಕೆಎಸ್‌ಆರ್‌ಟಿಸಿ ಸಿಬ್ಬಂದಿಗೆ 50 ಲಕ್ಷದ ಅಪಘಾತ ವಿಮಾ ಸೌಲಭ್ಯ

●ಮೃತರಾದರೆ, ಶಾಶ್ವತ, ಭಾಗಶಃ ಅಂಗವೈಕಲ್ಯತೆಗೆ ಪರಿಹಾರ ●ಎಸ್‌ಬಿಐನೊಂದಿಗೆ ಕೆಎಸ್‌ಆರ್‌ಟಿಸಿ ಒಡಂಬಡಿಕೆ

ಬೆಂಗಳೂರು ಅ.19(ಕೆಎಂಶಿ)–ಇದೇ ಮೊದಲ ಬಾರಿಗೆ ಕೆಎಸ್‌ಆರ್‌ಟಿಸಿ ಸಿಬ್ಬಂದಿಗಳಿಗೆ ರೂ. 50 ಲಕ್ಷ ಅಪಘಾತ ವಿಮಾ ಯೋಜನೆ ಸೌಲಭ್ಯವನ್ನು ಸರ್ಕಾರ ಜಾರಿಗೆ ತಂದಿದೆ.

ಇದುವರೆಗೂ ನಿಗಮದ ಸಿಬ್ಬಂದಿ ಅಪಘಾತದಲ್ಲಿ ಮೃತಪಟ್ಟರೆ ಅಥವಾ ಶಾಶ್ವತ, ಭಾಗಶಃ ಅಂಗವೈಕಲ್ಯಕ್ಕೆ ತುತ್ತಾದರೆ ಯಾವುದೇ ದೊಡ್ಡ ಮೊತ್ತದ ಪರಿಹಾರದ ಹಣ ಅವರ ಅವಲಂಬಿತರಿಗಾಗಲೀ ಅಥವಾ ಅವರಿಗಾಗಲೀ ಲಭಿಸುತ್ತಿರಲಿಲ್ಲ.

ಸಿಬ್ಬಂದಿಗಳು ಸಂಸ್ಥೆಗಾಗಿ ಹಗಲಿರುಳು ದುಡಿಯುತ್ತಾರೆ. ಅವರ ಆಕಸ್ಮಿಕ ಅಗಲಿಕೆಯು ಅಥವಾ ಅಂಗವೈಕಲ್ಯತೆಯು ಅವರ ಪರಿವಾರದವರನ್ನು ಮತ್ತಷ್ಟು ಸಂಕಷ್ಟಕ್ಕೆ ದೂಡಬಾರದೆಂಬ ಕಾರಣದಿಂದ ಅವರ ಅವಲಂಬಿತರ ಹಿತ ಕಾಪಾಡುವ ಈ ಅಪಘಾತ ವಿಮಾ ಪ್ಯಾಕೇಜ್ ಯೋಜನೆಯ ಒಡಂಬಡಿಕೆಯನ್ನು ಇಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದೊಂದಿಗೆ, ನಿಗಮ ಮಾಡಿಕೊಂಡಿದೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ತಮ್ಮ ವೇತನ ಖಾತೆಯನ್ನು ಹೊಂದಿರುವ ನಿಗಮದ ನೌಕರರಿಗೆ "ಪ್ರೀಮಿಯಂ ರಹಿತ" ವೈಯಕ್ತಿಕ ಅಪಘಾತ ವಿಮೆಯನ್ನು ಒಳಗೊಂಡಿದೆ.

ವೈಯಕ್ತಿಕ ವಿಮಾ ಯೋಜನೆಯಿಂದ ಪಾಲಿಸಿದಾರರು ಅಪಘಾತದಲ್ಲಿ ಮೃತಪಟ್ಟಲ್ಲಿ ಅವರ ಅವಲಂಬಿತರಿಗೆ ರೂ. 50 ಲಕ್ಷಗಳ ಪರಿಹಾರದ ಹಣ ಕೂಡಲೇ ದೊರೆಯಲಿದೆ. ಅಪಘಾತದಲ್ಲಿ ಸಿಬ್ಬಂದಿ ಶಾಶ್ವತವಾಗಿ ಪೂರ್ಣ ಅಂಗವೈಕಲ್ಯಕ್ಕೆ ತುತ್ತಾದಲ್ಲಿ ರೂ. 20 ಲಕ್ಷಗಳ ಹಣ ಹಾಗೂ ಶಾಶ್ವತ ಭಾಗಶಃ ಅಂಗವೈಕಲ್ಯ ಉಂಟಾದಲ್ಲಿ ರೂ. 10 ಲಕ್ಷಗಳ ವಿಮಾ ಪರಿಹಾರ ದೊರೆಯಲಿದೆ.


ಇಂದು ಯುವ ಉದ್ಯಮಿ ಸಾಗರ್ ಅಂತ್ಯಕ್ರಿಯೆ



ಮೈಸೂರು, ಅ.19–ಕಳೆದ ಸೋಮವಾರ ಮೈಸೂರು–ಟಿ.ನರಸೀಪುರ ರಸ್ತೆಯಲ್ಲಿ, ವರಕೋಡು ಗೇಟ್ ಬಳಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಅಸುನೀಗಿದ್ದ ಕೆ.ಸಿ.ನಗರ ನಿವಾಸಿ, ಯುವ ಉದ್ಯಮಿ ಸಾಗರ್ ಅವರ ಅಂತ್ಯಕ್ರಿಯೆ ನಾಳೆ (ಗುರುವಾರ) ಸಂಜೆ 4 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನ ಚಿತಾಗಾರದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಅವರ ಸಹೋದರಿ ಅಮೆರಿಕಾದಿಂದ ನಾಳೆ ಬೆಳಗ್ಗೆ ಆಗಮಿಸುತ್ತಿದ್ದಾರೆ. ನಂತರ ಮಧ್ಯಾಹ್ನ 3 ಗಂಟೆಗೆಲ್ಲಾ ಅಂತ್ಯಕ್ರಿಯೆ ವಿಧಿ–ವಿಧಾನಗಳು ಆರಂಭವಾಗಲಿದ್ದು, 4 ಗಂಟೆಗೆ ಅಂತಿಮ ಕ್ರಿಯೆ ನೆರವೇರಲಿದೆ. ಸಾಗರ್ ಅವರ ಕಣ್ಣುಗಳನ್ನು ಈಗಾಗಲೇ ದಾನ ಮಾಡಲಾಗಿದೆ ಎಂದು ಕುಟುಂಬದ ಮೂಲಗಳು ಹೇಳಿವೆ. ಕಳೆದ ಸೋಮವಾರ ಮಧ್ಯಾಹ್ನ ಪಿಲ್ಲಹಳ್ಳಿಯಲ್ಲಿನ ತಮ್ಮ ಪೌಲ್ಟ್ರಿ ಫಾರಂನಿಂದ ವಾಪಸ್ಸಾಗುತ್ತಿದ್ದಾಗ ಸಾಗರ್ ಅವರು ಚಾಲನೆ ಮಾಡುತ್ತಿದ್ದ ಕಾರಿಗೆ ಖಾಸಗಿ ಬಸ್ ಡಿಕ್ಕಿ ಹೊಡೆದು, ಅವರು ಸ್ಥಳದಲ್ಲೇ ಸಾವಿಗೀಡಾಗಿದ್ದರು.

ನ.11ರಂದು ಪ್ರಧಾನಿ ಮೋದಿ ಅವರಿಂದ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ

ನಾಡಪ್ರಭು ಕೆಂಪೇಗೌಡರ 108 ಅಡಿ ಕಂಚಿನ ಪ್ರತಿಮೆ ಲೋಕಾರ್ಪಣೆ





●ರಾಜ್ಯಾದ್ಯಂತ ಅ.21ರಿಂದ ಮೃತ್ತಿಕಾ ಸಂಗ್ರಹಣಾ ಅಭಿಯಾನ ●ಮುಖ್ಯಮಂತ್ರಿ ಬೊಮ್ಮಾಯಿ ಅವರಿಂದ 20 ನಾಡಪ್ರಭು ಕೆಂಪೇಗೌಡ ರಥಕ್ಕೆ ಚಾಲನೆ

ಬೆಂಗಳೂರು ಅ.19(ಕೆಎಂಶಿ)–ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರಧಾನಿ ನರೇಂದ್ರ ಮೋದಿಯವರು 108 ಅಡಿ ಎತ್ತರದ ನಾಡಪ್ರಭು ಕೆಂಪೇಗೌಡರ ಕಂಚಿನ ಪ್ರತಿಮೆಯನ್ನು ನ.11ರಂದು ಲೋಕಾರ್ಪಣೆ ಮಾಡಲಿದ್ದಾರೆ ಎಂದು ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವಥ್ ನಾರಾಯಣ ಇಂದಿಲ್ಲಿ ತಿಳಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅ.21ರಿಂದ ನ.7ರವರೆಗೆ ರಾಜ್ಯಾದ್ಯಂತ ಪವಿತ್ರ ಮೃತ್ತಿಕಾ ಸಂಗ್ರಹಣಾ ಅಭಿಯಾನ ನಡೆಯಲಿದೆ. ಇದಕ್ಕೆ ಸಿದ್ಧವಾಗಿರುವ 20 'ನಾಡಪ್ರಭು ಕೆಂಪೇಗೌಡ ರಥ'ಗಳಿಗೆ ಇದೇ 21ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಧಾನಸೌಧದ ಮುಂಭಾಗದಿಂದ ಚಾಲನೆ ನೀಡಲಿದ್ದಾರೆ ಎಂದರು.

ಇದಕ್ಕಾಗಿ ಜಿಲ್ಲಾ ಮಟ್ಟದಲ್ಲಿ ಸಮಿತಿಗಳನ್ನು ರಚಿಸಲಾಗಿದೆ. ಈ ರಥಗಳು ಆಯಾಯ ಪ್ರದೇಶ, ಜಿಲ್ಲೆಗಳನ್ನು ಪ್ರವೇಶಿಸಿದಾಗ ಪೂರ್ಣಕುಂಭ ಸ್ವಾಗತದೊಂದಿಗೆ ಬರಮಾಡಿಕೊಳ್ಳಲಾಗುವುದು ಎಂದರು.

ಅಭಿಯಾನದ ಅಂಗವಾಗಿ ರಾಜ್ಯದ ಪ್ರತಿಯೊಂದು



ಗ್ರಾಮದ ಕೆರೆಕಟ್ಟೆ, ಕಲ್ಯಾಣಿ, ನದಿ, ಪುಷ್ಕರಿಣಿ, ಪುಣ್ಯ ಪುರುಷರ ಸಮಾಧಿ ಸ್ಥಳಗಳಿಂದ ಪವಿತ್ರವಾದ ಮಣ್ಣನ್ನು ಸಂಗ್ರಹಿಸಲಾಗುವುದು. ಪ್ರತಿಯೊಂದು ರಥದ ಮಾರ್ಗನಕ್ಷೆಯನ್ನೂ ಸಿದ್ಧಪಡಿಸಲಾಗಿದೆ. ಆಯಾಯ ಜಿಲ್ಲೆಗಳಲ್ಲಿ ಧಾರ್ಮಿಕ ಮುಖಂಡರು, ಚುನಾಯಿತ ಪ್ರತಿನಿಧಿಗಳು, ಸಾಹಿತಿಗಳು, ಪ್ರಗತಿಪರ ರೈತರು, ಸ್ವಸಹಾಯ ಸಂಘಗಳ ಸದಸ್ಯರು, ಹಿರಿಯ ನಾಗರಿಕರು, ಹಾಲು ಉತ್ಪಾದಕರ ಒಕ್ಕೂಟಗಳು, ಕೈಗಾರಿಕಾ ಸಂಘಗಳು ಇದರಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲಿದ್ದಾರೆ ಎಂದು ಅವರು ವಿವರಿಸಿದರು. ಪವಿತ್ರ ಮೃತ್ತಿಕೆಯನ್ನು ವಿಮಾನ ನಿಲ್ದಾಣ ಆವರಣದಲ್ಲಿ ಅಭಿವೃದ್ಧಿಪಡಿಸುತ್ತಿರುವ 23 ಎಕರೆ ವಿಶಾಲವಾದ ಕೆಂಪೇಗೌಡ ಥೀಮ್ ಪಾರ್ಕ್‌ನಲ್ಲಿ ಬಳಸಿಕೊಳ್ಳಲಾಗುವುದು. ಇಡೀ ಕಾರ್ಯಕ್ರಮ ಮತ್ತು ಅಭಿಯಾನಗಳು ಪಕ್ಷಾತೀತವಾದ ಕಾರ್ಯಕ್ರಮವಾಗಿರಲಿದೆ. ಇಂಥದೊಂದು ಭವ್ಯ ಪ್ರತಿಮೆಯನ್ನು ಸ್ಥಾಪಿಸಬೇಕು ಎನ್ನುವ ಬೇಡಿಕೆ ಹಲವು ವರ್ಷಗಳಿಂದ ಇತ್ತು ಎಂದು ಅವರು ನುಡಿದರು. ಅಭಿಯಾನವನ್ನು ಯಶಸ್ವಿಯಾಗಿ ನಡೆಸುವ ಸಂಬಂಧ ಈಗಾಗಲೇ ಜಿಲ್ಲಾಧಿಕಾರಿಗಳು ಸೇರಿದಂತೆ ಸಂಬಂಧಿಸಿದ ಎಲ್ಲರಿಗೂ ಅಗತ್ಯ ಸಲಹೆ, ಸೂಚನೆಗಳನ್ನು ಕೊಡಲಾಗಿದೆ. ಇದಕ್ಕೆ ಜಿಪಂ ಸಿಇಒಗಳು ನೋಡಲ್ ಅಧಿಕಾರಿಗಳಾಗಿರುತ್ತಾರೆ. ಕೆಂಪೇಗೌಡರು ಕಟ್ಟಿದ ಬೆಂಗಳೂರು ಇಂದು ಜಾಗತಿಕ ಮಟ್ಟದಲ್ಲಿ ಗಮನ ಸೆಳೆದಿದೆ. ಅವರಿಗಿದ್ದ ದೂರದೃಷ್ಟಿಯನ್ನು ಗೌರವಿಸಿ, 108 ಅಡಿ ಎತ್ತರದ ಪ್ರತಿಮೆಗೆ 'ಪ್ರಗತಿ ಪ್ರತಿಮೆ' ಎಂದು ನಾಮಕರಣ ಮಾಡಲಾಗಿದೆ. ಜಗತ್ತಿನ ಯಾವ ನಗರದ ವಿಮಾನ ನಿಲ್ದಾಣದಲ್ಲೂ ಅಲ್ಲಿಯ ಸಂಸ್ಥಾಪಕರ ಪ್ರತಿಮೆ ಇಲ್ಲ. ಇನ್ನು ಮುಂದೆ, ಬೆಂಗಳೂರು ವಿಮಾನ ನಿಲ್ದಾಣ ಸಮುಚ್ಚಯದಲ್ಲಿ ಕೆಂಪೇಗೌಡರ ಪ್ರತಿಮೆ ಆಕರ್ಷಣೆಯ ಕೇಂದ್ರವಾಗಲಿದೆ ಎಂದು ಅವರು ಹೇಳಿದರು.

ನಕ್ಕರೆ ಅದೇ ಸ್ವರ್ಗ

ಅತ್ತೆ : ಹಾಲು ಉಕ್ಕಿ ಚೆಲ್ಲುತ್ತಿದ್ದರೂ ಸುಮ್ನೆ ನೋಡ್ತಿದ್ದೀಯಲ್ಲ?
ಸೊಸೆ : ಹಾಲು ಉಕ್ಕುತ್ತೆ, ನೋಡ್ತಾ ಇರು ಅಂತ ನೀವೇ ಹೇಳಿದ್ರಲ್ಲ ಅತ್ತೆ!

ಮೈಸೂರು ಮಿತ್ರ

ಗುರುವಾರ, 20 ಅಕ್ಟೋಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಬೇಸರಿಸದ ಎಚ್ಚರದ ದುಡಿಮೆಯಿಂದ ಯಾವುದೇ
ವೃತ್ತಿಯಲ್ಲಿ ಖಂಡಿತಾ ಯಶಸ್ಸು ಸಾಧ್ಯ – ವೆಬ್ಸ್

ವೇದ ಸುಳ್ಳಾದರೂ
ಗಾದೆ ಸುಳ್ಳಾಗದು

{ ನಡೀತಾ ಇದ್ರೆ ನಂಟು,
ಬೆಳಗ್ತಾ ಇದ್ರೆ ಕಂಚು

ನಿಮ್ಮ ಪತ್ರಗಳು

ಚರಂಡಿ ನೀರು, ಮಳೆ ನೀರು ಸೇರಿಕೊಂಡು ದುರ್ವಾಸನೆ !



ಮಾನ್ಯರೇ,

ಮೈಸೂರಿನ ಜಯಲಕ್ಷ್ಮೀಪುರಂ 1ನೇ ಬ್ಲಾಕ್ (ಪ್ರೀಮಿಯರ್ ಸ್ಟುಡಿಯೋ ಹಿಂಭಾಗ) ನಲ್ಲಿ ಮಳೆ ನೀರು ಹಾಗೂ ಚರಂಡಿ ನೀಡು ಹರಿಯುತ್ತಿದ್ದು, ನೀರು ಕಟ್ಟಿಕೊಂಡು ದುರ್ವಾಸನೆ ಬರುತ್ತಿದೆ. ನಗರಪಾಲಿಕೆ ಸದಸ್ಯರು ನೋಡಿಯೂ ನೋಡದೇ ಇರುವ ಹಾಗೆ ಇರುವುದು ನಿಜವಾಗಿಯೂ ವಿಪರ್ಯಾಸವೇ ಸರಿ. ಇಲ್ಲಿನ ಸುತ್ತಮುತ್ತಲು ವಾಸಿಸುವ ಜನರು ಮೂಗು ಮುಚ್ಚಿಕೊಂಡೇ ತಿರುಗುತ್ತಿದ್ದಾರೆ. ಆದ ಕಾರಣ ಮ್ಯಾನ್‌ಹೋಲ್ ಹತ್ತಿರ ಲಾರಿ ಬರುವ ಹಾಗೆ ಮಾಡಿ ಯುಜಿಡಿ ಜೆಟ್ಟಿಂಗ್ ಮೆಷಿನ್‌ನಲ್ಲಿ ಕಟ್ಟಿಕೊಂಡಿರುವ ನೀರನ್ನು ಸ್ವಚ್ಛಗೊಳಿಸಬೇಕು ಮತ್ತು ಪೈಪ್ ಮೂಲಕ ನೀರು ಹರಿಯುವಂತೆ ಮಾಡಬೇಕು. ನಮ್ಮ ವಾರ್ಡಿನ ನಗರಪಾಲಿಕೆ ಸದಸ್ಯರು ಈ ಕೂಡಲೇ ಕ್ರಮ ಕೈಗೊಂಡು ಸೂಕ್ತವಾದ ಕೆಲಸ ಮಾಡಬೇಕಿದೆ. ಸ್ವಚ್ಛ ನಗರ ಮೈಸೂರು ಬಿರುದು ಹೇಗೆ ಬಂತು? ಎಂದು ಒಮ್ಮೆ ಇಲ್ಲಿನ ಪರಿಸ್ಥಿತಿ ನೋಡಿದರೆ ತಿಳಿಯುತ್ತದೆ.

–ಹೆಚ್.ಪಿ.ರಾಮಣ್ಣ, ಸಮಾಜ ಸೇವಕರು, ಜಯಲಕ್ಷ್ಮಿಪುರಂ, ಮೈಸೂರು

ಇದು ಒಂದು ರೀತಿಯ ಹಗಲು ದರೋಡೆಯಲ್ಲವೇ?

ಮಾನ್ಯರೆ,

ಮೈಸೂರಿನ ನಗರ ಸಾರಿಗೆ ಬಸ್‌ಗಳಲ್ಲಿ ದಿನದ ಬಸ್ ಪಾಸ್ ದರವನ್ನು ರೂ. 60ರೂ.ಗಳಿಂದ ರೂ. 80ರೂ.ಗಳಿಗೆ ಏರಿಸಲಾಗಿದೆ. ದಿನದ ಪಾಸು ಪಡೆದು ತಮ್ಮ ತಮ್ಮ ಕಾರ್ಯಗಳಿಗೆ ತೆರಳುತ್ತಿದ್ದ ಹಿರಿಯ ನಾಗರಿಕರು, ಗಾರ್ಮೆಂಟ್ಸ್ ಕಾರ್ಮಿಕರು ಇತರ ಪ್ರಯಾಣಿಕರಿಗೆ ತೊಂದರೆ ಆಗಿದೆ. ಸಂಬಂಧಪಟ್ಟ ಅಧಿಕಾರಿಗಳು ಇದರ ಬಗ್ಗೆ ಗಮನಹರಿಸಿ ಹಳೆಯ ಬಸ್ ಪಾಸ್ ದರ 60ರೂ. ನಿಗದಿಪಡಿಸಬೇಕೆಂದು ಮನವಿ.

–ನೊಂದ ಪ್ರಯಾಣಿಕರು, ಮೈಸೂರು.

ಅಪರೂಪದಲ್ಲಿ ಅಪರೂಪದ ಚಲನಚಿತ್ರ 'ಕಾಂತಾರ'!

ಮಾನ್ಯರೆ,



ರಿಷಬ್ ಶೆಟ್ಟಿ ನಟಿಸಿ ನಿರ್ದೇಶನ ಮಾಡಿರುವ "ಕಾಂತಾರ" ಕನ್ನಡದ ಚಲನಚಿತ್ರವು ಭಾರತಾದ್ಯಂತ ಭರ್ಜರಿ ಪ್ರದರ್ಶನ ಕಂಡಿದ್ದು, ಗಲ್ಲಾ ಪೆಟ್ಟಿಗೆಯಲ್ಲಿ ದಿನದಿಂದ ದಿನಕ್ಕೆ ಪ್ರಖ್ಯಾತಿ ಗಳಿಸಿ ಮುನ್ನುಗ್ಗುತ್ತಿದೆ. ಕನ್ನಡ ಚಿತ್ರರಂಗದಲ್ಲಿ ಏನಾದರೂ ಹೊಸತನದ ಮೂಲಕ ವಿಭಿನ್ನ ರೀತಿಯಲ್ಲಿ ಚಿತ್ರವನ್ನು ನಿರ್ಮಿಸಿ ಪ್ರೇಕ್ಷಕರನ್ನು ಆಕರ್ಷಣೆ ಮಾಡಬೇಕು ಎಂಬ ಉದ್ದೇಶದಿಂದ ರಿಷಬ್ ಶೆಟ್ಟಿಯವರು ಚಿಂತಿಸಿ ಕರ್ನಾಟಕದ ದಕ್ಷಿಣ ಕರಾವಳಿಯ ಒಂದು ದಂತ ಕಥೆಯಾದ "ಕಾಂತಾರ" ಎಂಬ ಚಿತ್ರವನ್ನು ನಿರ್ಮಿಸಿ ಎಲ್ಲರ ಮನ ಗೆದ್ದಿದ್ದಾರೆ. ವಿಶೇಷವೆಂದರೆ ಸ್ವತಃ ದೈವ ನರ್ತಕರಾಗಿ ಚಿತ್ರದಲ್ಲಿ ಬಣ್ಣ ಹಚ್ಚಿ ಬಹಳ ಅದ್ಭುತವಾಗಿ ನಟಿಸಿ ಸೈ ಎನಿಸಿಕೊಂಡಿದ್ದಾರೆ. ಚಿತ್ರವು ವಿಶ್ವದೆಲ್ಲೆಡೆ ಅಭೂತಪೂರ್ವ ಪ್ರತಿಕ್ರಿಯೆಯು ವ್ಯಕ್ತವಾಗಿದ್ದು ತೆಲುಗು, ತಮಿಳು, ಹಿಂದಿ ಇನ್ನು ಇತರೆ ಭಾಷೆಗಳಲ್ಲಿ ಡಬ್ ಆಗಿ ಪ್ರದರ್ಶನಗೊಂಡು ದಾಖಲೆ ಯುತ್ತ ಮುನ್ನುಗ್ಗುತ್ತಿದೆ. ಈ ಸಿನಿಮಾ ಗ್ರಾಮ್ಯ ಭಾಷೆ, ಸೊಗಡು, ಕರಾವಳಿ ಸಂಸ್ಕೃತಿಯ ಚಿತ್ರಣ, ಅರಣ್ಯ ಜನರ ಜೀವನದ ಜಾತಿ, ನಂಬಿಕೆ, ಆಚಾರ–ವಿಚಾರಗಳು, ಸಂಪ್ರದಾಯ, ಮಾನವನ ನಡುವಿನ ಹೋರಾಟದ ವಿಶಿಷ್ಟ ಕಥಾಹಂದರವುಳ್ಳ, ಆಹಾರ ಪದ್ಧತಿ ಸೇರಿದಂತೆ ಕರಾವಳಿಯ ವಿವಿಧ ವಿಚಾರಗಳನ್ನು ಕುರಿತು ಅತ್ಯದ್ಭುತವಾಗಿ ದೃಶ್ಯವನ್ನು ಕಣ್ಮುಂದೆ ಬರುವಂತೆ ಚಿತ್ರಿಸಿದ್ದಾರೆ. ಕೌತುಕತೆ, ಭಾವನಾತ್ಮಕ, ದೈವಕತೆಯಿಂದ ಕೂಡಿರುವ ಚಿತ್ರ ಇದಾಗಿದೆ. ಕಾಡಿನ ರಮಣಿಯ ದೃಶ್ಯಗಳನ್ನು ಸೆರೆಹಿಡಿದು ಮನ ಸೂರೆಗೊಳ್ಳು ವಂತೆ ಮಾಡಿರುವುದು ಅದ್ಭುತವಾಗಿದೆ. ಭಾರತದಲ್ಲಿ ಅತೀ ಹೆಚ್ಚು ರೇಟಿಂಗ್ ಪಡೆದ ಸಿನಿಮಾವಾಗಿ ಹೊರಹೊಮ್ಮಿದೆ. ಕಾಂತಾರ, ಭಾರತೀಯ ಸಿನಿಮಾರಂಗ ದಲ್ಲಿ ಈಗ ಕಾಂತಾರ ಸಿನಿಮಾದೇ ಹವಾ, ಕನ್ನಡದ ಕಾಂತಾರ ಅಬ್ಬರ ಬಾಲಿವುಡ್ ಮಂದಿಯನ್ನು ನಿದ್ದೆಗೆಡಿಸಿರುವುದಂತು ಕಟು ಸತ್ಯವಾಗಿದೆ.

– ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾ.

ವೈಜ್ಞಾನಿಕವಾಗಿ ಗುಣಮಟ್ಟದ ರಸ್ತೆಗಳನ್ನು ನಿರ್ಮಿಸಿ

ಮಾನ್ಯರೇ,

ಬನ್ನೂರು ಪುರಸಭೆ ಮುಖ್ಯಮಂತ್ರಿ ನಗರೋತ್ಥಾನ ಯೋಜನೆಯಡಿ ಬನ್ನೂರು ಪಟ್ಟಣದ ಸುಭಾಷ್ ನಗರ ಕಾಲೋನಿಯಲ್ಲಿ ಹಲವಾರು ವರ್ಷಗಳಿಂದ ದುಸ್ಥಿತಿಯಲ್ಲಿದ್ದ ರಸ್ತೆಗೆ ಸಿ.ಸಿ ರಸ್ತೆ, ಚರಂಡಿ ಮತ್ತು ಒಳಚರಂಡಿ ಕಾಮಗಾರಿಗಳನ್ನು ಪ್ರಾರಂಭಿಸಿರುವುದು ಸ್ವಾಗತಾರ್ಹ, ಆದರೆ ಸಿ.ಸಿ ರಸ್ತೆ ಮತ್ತು ಒಳಚರಂಡಿ ಕಾಮಗಾರಿಗಳನ್ನು ಏಕಕಾಲದಲ್ಲಿ ಪ್ರಾರಂಭಿಸಿ, ಇಲ್ಲಿನ ಕಾಲೋನಿಗೆ ನಾಲ್ಕು ರಸ್ತೆಗಳ ಪೈಕಿ ಮೂರು ರಸ್ತೆಗಳನ್ನು ಬಂದ್ ಮಾಡಿದೆ. ಉಳಿದ ಒಂದು ರಸ್ತೆಯೂ ಕೂಡ ಮಳೆಯಿಂದಾಗಿ ತೀರಾ ಹದಗೆಟ್ಟಿದ್ದರಿಂದ ಬರಿಗಾಲಿನಲ್ಲೂ ನಡೆಯಲಾಗದ ಪರಿಸ್ಥಿತಿ ನಿರ್ಮಾಣವಾಗಿರುವುದರಿಂದ ಇಲ್ಲಿನ ಸಾರ್ವಜನಿಕರಿಗೆ ಅದರಲ್ಲೂ ವೃದ್ಧರಿಗೆ, ಮಹಿಳೆಯರಿಗೆ, ವಿಶೇಷಚೇತನರಿಗೆ, ರೋಗಿಗಳಿಗೆ ಓಡಾಡಲು ರಸ್ತೆಯಿಲ್ಲದೆ ಪರದಾಡುವಂತಾಗಿದೆ.

ಕಾಮಗಾರಿ ನಡೆಯುವ ವೇಳೆ ರಸ್ತೆ ಬದಿಗಳಲ್ಲಿ ಸೂಚನಾ ಫಲಕಗಳನ್ನು ಅಳವಡಿಸದ ಕಾರಣ ಒಳಚರಂಡಿ ಪೈಪ್ ಸಂಪರ್ಕಕ್ಕೆ ಹಳ್ಳ ಕೊರೆದ ನಂತರ ಮಣ್ಣು ಮುಚ್ಚಿ ಮಳೆ ಸುರಿದ ಕಾರಣ ಕಾರಿನ ಚಕ್ರ ಸಿಲುಕಿ ರಾತ್ರಿಯಿಡೀ ಕಾರನ್ನು ಅಲ್ಲಿಯೇ ಬಿಟ್ಟು ತೆರಳುವಂತಾಗಿ ಸಾರ್ವಜನಿಕರಿಗೆ ಅಡಚಣೆ ಉಂಟಾಯಿತು. ಇದೇ ರೀತಿ ತುರ್ತು ಪರಿಸ್ಥಿತಿ ಏನಾದರೂ ಉಂಟಾದಾಗ ಆಂಬುಲೆನ್ಸ್‌ಗಳಿಗೆ ಸಮಸ್ಯೆಯಾಗಿ ರೋಗಿಗಳಿಗೆ ಅಥವಾ ಗರ್ಭಿಣಿಯರಿಗೆ ತೊಂದರೆ ಉಂಟಾಗುವ ಸಂಭವವಿರುವುದರಿಂದ ಸಾರ್ವಜನಿಕರು ಮತ್ತು ವಾಹನಗಳು ಓಡಾಡಲು ಅನಾನುಕೂಲ ಮಾಡದೆ ಕಾಮಗಾರಿಗಳನ್ನು ನಡೆಸಬೇಕೆಂದು ಮನವಿ. ದಯಮಾಡಿ ಸಂಬಂಧಿಸಿದ ಅಧಿಕಾರಿಗಳು ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ವೈಜ್ಞಾನಿಕವಾಗಿ ಉತ್ತಮ ಗುಣಮಟ್ಟದಲ್ಲಿ ರಸ್ತೆಗಳನ್ನು ನಿರ್ಮಿಸಬೇಕೆಂದು ಇಲ್ಲಿನ ಪ್ರಜ್ಞಾವಂತ ಯುವಕರ ಜಾಗೃತಿ ಸಮಿತಿ ಮನವಿ ಮಾಡಿದೆ.

–ಪ್ರಜ್ಞಾವಂತ ಯುವಕರ ಜಾಗೃತಿ ಸಮಿತಿ, ಸುಭಾಷ್ ನಗರ, ಬನ್ನೂರು



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಪಂಡಿತರತ್ನಂ ವಿದ್ವಾನ್ ಕೆ.ಎಸ್. ವರದಾಚಾರ್ಯರು

ಸಂಸ್ಕೃತ ಪಾಂಡಿತ್ಯವೇ ವಿರಳವಾಗುತ್ತಿರುವ ಈ ಕಾಲದಲ್ಲಿ ಋಷಿತುಲ್ಯ ಜ್ಞಾನವನ್ನೂ ಗುರುಗಳ ಅಂತಃಸತ್ತ್ವವನ್ನೂ ಆಚಾರ್ಯರ ತೇಜಸ್ಸನ್ನೂ ಹೊಂದಿದ್ದು ಎಲೆ ಮರೆಯ ಕಾಯಿಯಂತೆ ಯಾರ ಕಣ್ಣಿಗೂ ಬೀಳದೆ ಆಧ್ಯಾತ್ಮಿಕ ಸಾಧನೆಯನ್ನು ಮಾಡುತ್ತಿದ್ದ ಮಹಾವಿದ್ವಾಂಸರು ಪಂಡಿತರತ್ನಂ ವಿದ್ವಾನ್ ಕೋತ್ತಮಂಗಲಂ ವರದಾಚಾರ್ಯರು. ಈಗ್ಗೆ ಒಂದು ಶತಮಾನದ ಹಿಂದೆ ತಮಿಳುನಾಡಿನ ಕೋತ್ತಮಂಗಲಂನಲ್ಲಿ ಸುಂದರರಾಜಾಚಾರ್ ಮತ್ತು ಶ್ರೀರಂಗಮ್ಮ ದಂಪತಿಗಳ ಮಗನಾಗಿ 1922ನೆಯ ಇಸವಿಯಲ್ಲಿ ನರಕಚತುರ್ದಶಿಯ ಶುಭದಿನ ಜನಿಸಿದರು. ತಂದೆಯಿಂದಲೇ ವೇದಗಳನ್ನೂ, ಸಂಸ್ಕೃತ ವ್ಯಾಕರಣವನ್ನೂ ಕಲಿತ ಅವರು ಅನಂತರ ಚೆನ್ನೈ, ತಿರುಪತಿ ಮುಂತಾದ ಸ್ಥಳಗಳಲ್ಲಿಯೂ ವಿದ್ಯಾಭ್ಯಾಸವನ್ನು ಮಾಡಿದ್ದರು. ನೂರಾರು ಮೈಲಿ ದೂರವನ್ನು ಕಾಲು ನಡಿಗೆಯಿಂದಲೇ ಸವೆಸಿ ಅವರು ವಿದ್ಯೆಗಾಗಿ ಮೈಸೂರಿನವರೆಗೂ ಬಂದರು.

ಆ ಕಾಲದಲ್ಲಿ ಮೈಸೂರು ಸಂಸ್ಕೃತ ಶಾಸ್ತ್ರ ವಿದ್ಯೆಯ ತವರು ಮನೆಯಾಗಿತ್ತು. ಶ್ರೀಮನ್ಮಹಾರಾಜ ಸಂಸ್ಕೃತ ಪಾಠಶಾಲೆಯಲ್ಲಿ ಪಂಡಿತ ದಿಗ್ಗಜರು ಶೋಭಿಸುತ್ತಿದ್ದರು. ವ್ಯಾಕರಣ, ಸಾಹಿತ್ಯ, ನ್ಯಾಯ, ಜ್ಯೋತಿಷ್ಯ, ವೇದಾಂತ ಮುಂತಾದ ಶಾಸ್ತ್ರಗಳಲ್ಲಿ ನಿಷ್ಣಾತರಾಗಿದ್ದ ವಿದ್ವಜ್ಜನರುಗಳು ಪಾಠ ಮಾಡುತ್ತಿದ್ದುದು ವಿಶೇಷ ಪ್ರಶಂಸೆಗೆ ಪಾತ್ರವಾಗಿತ್ತು. ಅಲ್ಲಿದ್ದ ಅಧ್ಯಾಪಕರು ಸಂಸ್ಕೃತದಲ್ಲೂ, ಕನ್ನಡದಲ್ಲೂ ಅದ್ಭುತ ಗ್ರಂಥಗಳನ್ನು ರಚಿಸಿ ವಿಖ್ಯಾತರಾಗಿದ್ದರು. ಹಿಂದೂ ದರ್ಶನಸಾರ, ದರ್ಶನೋದಯ, ಮಾನಮೇಯರಹಸ್ಯ ಶ್ಲೋಕವಾರ್ತಿಕಮ್ ಮುಂತಾದ ಗ್ರಂಥಗಳನ್ನು ರಚಿಸಿದ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯ, ಮೇಘಪ್ರತಿ ಸಂದೇಶ ಇತ್ಯಾದಿ ಸಂಸ್ಕೃತ ಕಾವ್ಯಗಳನ್ನು ಬರೆದ ಮಂಡಿಕಲ್ ರಾಮಶಾಸ್ತ್ರಿಗಳು, ಸೀತಾರಾವಣ ಸಂವಾದಝರಿ ಎಂಬ ಚಿತ್ರಕಾವ್ಯವನ್ನು ರಚಿಸಿದ ಚಾಮರಾಜನಗರ ರಾಮಶಾಸ್ತ್ರಿ ಮುಂತಾದ ಹೆಸರಾಂತ ವಿದ್ವಾಂಸರು, ಕವಿವರೇಣ್ಯರು ಇದ್ದ ವಿದ್ವತ್ಸಮೃದ್ಧಿಯ ಕಾಲ ಅದು–ಹಾಗಿದ್ದ ಮೈಸೂರು ಕೆ.ಎಸ್. ವರದಾಚಾರ್ಯರನ್ನು ಆಕರ್ಷಿಸಿದ್ದರಲ್ಲಿ ಆಶ್ಚರ್ಯವಿಲ್ಲ.

ಪರಕಾಲ ಮಠ: ಮೈಸೂರಿನಲ್ಲಿರುವ ಪರಕಾಲ ಮಠದ ಗುರುಪರಂಪರೆ ವಿದ್ಯಾ ವೈಭವಕ್ಕೆ ಪ್ರಸಿದ್ಧವಾದುದು. ಇಲ್ಲಿದ್ದ ಯತಿವರೇಣ್ಯರು ಅನೇಕ ಗ್ರಂಥಗಳನ್ನು ಲೋಕಕ್ಕೆ ಅನುಗ್ರಹಿಸಿದ್ದಾರೆ. ಶ್ರೀ ಕೃಷ್ಣ ಬ್ರಹ್ಮತಂತ್ರ ಪರಕಾಲ ಸ್ವಾಮಿಗಳು ಅಲಂಕಾರ ಮಣಿಹಾರ ಎಂಬ ಗ್ರಂಥವನ್ನು ರಚಿಸಿದರು. ಅದರ ಪದ್ಯಗಳ ಸೌಂದರ್ಯ ಕಾಳಿದಾಸನ ಕಾವ್ಯಗಳನ್ನು ನೆನಪಿಗೆ ತರುತ್ತದೆ. 20ನೆಯ ಶತಮಾನದಲ್ಲಿ ಶ್ರೀಮದಭಿನವ ರಂಗನಾಥ ಸ್ವಾಮಿಗಳು ಪರಕಾಲ ಮಠಾಧೀಶರಾಗಿ ದಾರ್ಶನಿಕ ಪಾಂಡಿತ್ಯದ ಮೇರು ಪರ್ವತದಂತೆ ಶೋಭಿಸಿದರು. ಅವರ ಸನ್ನಿಧಿಯಲ್ಲಿ ನಡೆಯುತ್ತಿದ್ದ ವಿದ್ವದ್ಗೋಷ್ಠಿಗಳನ್ನು ನಾನು ಕಂಡಿದ್ದೇ ಕೆ.ಎಸ್.ವರದಾಚಾರ್ಯರು ಮೈಸೂರು ನಗರಕ್ಕೆ ಬರುವುದಕ್ಕೆ ಮತ್ತು ಅನಂತರ ಸರ್ವಶಾಸ್ತ್ರ ಪಾರಂಗತರಾಗುವುದಕ್ಕೆ ಅವರು ಕಾರಣವೆನ್ನಬಹುದು. ಆಗ ವಿದ್ವತ್ಪ್ರಪಂಚದಲ್ಲಿ ಮೂವರು ವರದಾಚಾರ್ಯರು ಹೆಸರನ್ನು ಗಳಿಸಿದ್ದರು. ನೈಯಾಯಿಕ ಕೆ.ಎಸ್. ವರದಾಚಾರ್ಯರು, ಮೀಮಾಂಸಕ ಇ.ಎಸ್.ವರದಾಚಾರ್ಯರು ಮತ್ತು ವೈಯಾಕರಣ ಎಸ್.ಎಂ.ಎಸ್. ವರದಾಚಾರ್ಯರು. ಇವರನ್ನು ವಿದ್ವಾಂಸರು ವರದತ್ರಯ ಎಂದು ಕರೆಯುವ ರೂಢಿ ಇತ್ತು ಎಲ್ಲರಿಗೂ ವಿಶಿಷ್ಟಾದ್ವೈತ ವೇದಾಂತದಲ್ಲಿ ಪರಿಣತಿಯಂತೂ ಇದ್ದೇ ಇತ್ತು. ಶಾಸ್ತ್ರ ವಾಕ್ಯಾರ್ಥ ಸಭೆಗಳಲ್ಲಿ ಇವರ ವಾದವೈಖರಿ ಆಕರ್ಷಕವಾಗಿತ್ತು.

ವಿದ್ವಾನ್ ಕೆ.ಎಸ್.ವರದಾಚಾರ್ಯರು ಮೊದಲು ಸ್ವಲ್ಪ ಕಾಲ ಶ್ರೀಮನ್ಮಹಾರಾಜ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಅಧ್ಯಾಪಕರಾಗಿ ಸೇರಿ ಅನಂತರ ಪ್ರಾಚ್ಯ ವಿದ್ಯಾ ಸಂಶೋಧನಾಲಯದಲ್ಲಿ ಸಂಶೋಧಕರಾಗಿ ಸೇವೆಯನ್ನು ಸಲ್ಲಿಸಿದರು. ಆಗ ಅವರು ಸಂಶೋಧಿಸಿ ಹೊರತಂದ ನ್ಯಾಯಮಂಜರಿ ಜಯಂತ ಭಟ್ಟನ ಮೇರುಕೃತಿ. ಇದು ಕಾಶ್ಮೀರದಲ್ಲಿ ಕ್ರಿ.ಶ. 10ನೆಯ ಶತಮಾನದಲ್ಲಿ ರಚಿತವಾದ ಗ್ರಂಥ. ಇದಕ್ಕೆ ಶ್ರೀ ವರದಾಚಾರ್ಯರು ನ್ಯಾಯಸೌರಭ ಎಂಬ ಪಾಂಡಿತ್ಯ ಪೂರ್ಣ ಟಿಪ್ಪಣಿಯನ್ನು ಬರೆದಿದ್ದಾರೆ. ವಿಜಯನಗರ ಸಾಮ್ರಾಜ್ಯವನ್ನು ಆಳಿದ ಪ್ರೌಢ ದೇವರಾಯನ ಬ್ರಹ್ಮಸೂತ್ರ ವೃತ್ತಿಯನ್ನು ಅವರೇ ಸಂಪಾದಿಸಿ ಪ್ರಕಟಿಸಿದರು.



ವಾಲ್ಮೀಕಿ ರಾಮಾಯಣದ ಅಮೃತಕತಕ ಎಂಬ ವ್ಯಾಖ್ಯಾನವನ್ನು ಕೆ.ಎಸ್. ವರದಾಚಾರ್ಯರು ಬೆಳಕಿಗೆ ತಂದರು.

ವಿಶ್ವವಿದ್ಯಾನಿಲಯದ ಸೇವೆಯಿಂದ ನಿವೃತ್ತರಾದ ಮೇಲೆ ಅವರು ಸರಸ್ವತೀ ಸೇವೆಯನ್ನು ನಿಲ್ಲಿಸಲಿಲ್ಲ. ಅವರ ಮನೆಯೇ ಒಂದು ಗುರುಕುಲವಾಯಿತು. ಅಲ್ಲಿ ಎಷ್ಟು ಜನ ಅವರ ಶಿಷ್ಯರಾಗಿ ವಿದ್ಯೆಯನ್ನು ಪಡೆದರು ಎಂದು ಹೇಳಲು ಅಸಾಧ್ಯ. ಈಗ ಸ್ವರ್ಣವಲ್ಲೀ ಮಹಾಸಂಸ್ಥಾನದ ಪೀಠಾಧಿಪತಿಗಳಾಗಿ ವಿರಾಜಮಾನರಾಗಿರುವ ಪರಮ ಪೂಜ್ಯ ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳವರೂ ಶ್ರೀ ವರದಾಚಾರ್ಯರಿಂದ ನ್ಯಾಯಶಾಸ್ತ್ರವನ್ನು ಕಲಿತಿದ್ದರು ಎಂಬುದೇ ಸಾಕು ಅವರ ಪಾಂಡಿತ್ಯದ ಔನ್ನತ್ಯವನ್ನು ಅರಿಯಲು. ಕೇವಲ ಕರ್ನಾಟಕದವರೇ ಅಲ್ಲ, ಗುಜರಾತಿನ ಅನೇಕ ಸನ್ಯಾಸಿಗಳೂ ವಿದ್ವಾಂಸರೂ ಶ್ರೀ ವರದಾಚಾರ್ಯರ ಶಿಷ್ಯರಾಗಿ ವಿದ್ಯೆಯನ್ನು ಗಳಿಸಿಕೊಳ್ಳಲು ಮೈಸೂರಿಗೆ ಬಂದು ನೆಲೆಸಿದ್ದರು.

ಮೇಲುಕೋಟೆಯ ಸಂಸ್ಕೃತ ಸಂಶೋಧನಾ ಸಂಸ್ಥೆಗೂ ವಿದ್ವಾನ್ ಕೆ.ಎಸ್. ವರದಾಚಾರ್ಯರು ಅಪಾರ ಸೇವೆಯನ್ನು ಸಲ್ಲಿಸಿದರು. ರಾಮಾನುಜ ದರ್ಶನದ ಪ್ರಮೇಯಗಳನ್ನು ತಿಳಿದುಕೊಳ್ಳಲು ಅವರ ಸಾಹಿತ್ಯ ಆಕರವಾಗಿದೆ. ಅನ್ನಂಭಟ್ಟನ ತರ್ಕಸಂಗ್ರಹಕ್ಕೆ ಅವರು ರಚಿಸಿರುವ ವ್ಯಾಖ್ಯಾನ ತರ್ಕಶಾಸ್ತ್ರದ ವಿದ್ಯಾರ್ಥಿಗಳಿಗೆ ಅತ್ಯಂತ ಉಪಯೋಗಿಯಾಗಿದೆ.

ತತ್ತ್ವಮುಕ್ತಾಕಲಾಪ

ಕ್ರಿ.ಶ. 13ನೆಯ ಮತ್ತು 14ನೆಯ ಶತಮಾನಗಳಲ್ಲಿ (1268–1368) ಜೀವಿಸಿದ್ದ ಶತಾಯುಷಿ, ಕವಿತಾರ್ಕಿಕಸಿಂಹ ವೆಂಕಟನಾಥರು ವೇದಾಂತ ದೇಶಿಕರೆಂದು ಖ್ಯಾತರಾಗಿದ್ದಾರೆ. ಶತಾಧಿಕ ಪ್ರಬಂಧ ಕರ್ತೃಗಳಾಗಿದ್ದ ಅವರ ಶ್ರೇಷ್ಠ ಕೃತಿ ತತ್ತ್ವ ಮುಕ್ತಾ ಕಲಾಪ. ಐನೂರು ಪದ್ಯಗಳು ಅದರಲ್ಲಿ ಸ್ರಗ್ಧರಾಛಂದಸ್ಸಿನಲ್ಲಿ ರಚಿತವಾಗಿವೆ. ವಿಶಿಷ್ಟಾದ್ವೈತ ವೇದಾಂತದ ಸಮಸ್ತ ಪ್ರಮೇಯಗಳೂ ಅದರಲ್ಲಿ ಅಡಕವಾಗಿವೆ. ವೇದಾಂತ ದೇಶಿಕರೇ ಅದರ ಮೇಲೆ ಸರ್ವಾರ್ಥಸಿದ್ಧ ಎಂಬ ವ್ಯಾಖ್ಯಾನವನ್ನು ರಚಿಸಿದ್ದಾರೆ.

ವಿದ್ವಾನ್ ಕೆ.ಎಸ್. ವರದಾಚಾರ್ಯರು ತತ್ತ್ವಮುಕ್ತಾ ಕಲಾಪವನ್ನು ಆಮೂಲಾಗ್ರವಾಗಿ ಅಭ್ಯಾಸ ಮಾಡಿ ಅದಕ್ಕೆ ಕುಲಕಂಠಾಭ ಎಂಬ ವ್ಯಾಖ್ಯಾನವನ್ನು ರಚಿಸಿ ಶಿಷ್ಯರಿಗೂ ಜಿಜ್ಞಾಸುಗಳಿಗೂ ಮಹೋಪಕಾರವನ್ನು ಮಾಡಿದ್ದಾರೆ. ಈ ಗ್ರಂಥ ಅವರ ಕೀರ್ತಿಯನ್ನು ಅಜರಾಮರವಾಗಿ ಮಾಡಿದೆ.

ಪ್ರಭಾವ ಬೀರಿದ ಮಹಾನುಭಾವರು

ಪಂಡಿತರತ್ನಂ ಕೆ.ಎಸ್.ವರದಾಚಾರ್ಯರು ತಮ್ಮ ಆಧ್ಯಾತ್ಮಿಕ ಬದುಕನ್ನು ರೂಪಿಸಿಕೊಳ್ಳುವುದರಲ್ಲಿ ಮೂವರ ದಟ್ಟ ಪ್ರಭಾವವನ್ನು ಗುರುತಿಸಬಹುದು. ಶ್ರೀ ರಾಮಕೃಷ್ಣ ಪರಮಹಂಸರು, ಶ್ರೀರಂಗ ಮಹಾ ಗುರುಗಳು ಮತ್ತು ಮಹಾತ್ಮಾ ಗಾಂಧಿ. ಈ ಮೂವರನ್ನೂ ವರದಾಚಾರ್ಯರು ಪದೇ ಪದೇ ಸ್ಮರಿಸಿಕೊಳ್ಳುತ್ತಿದ್ದರು. ಪರಸ್ಪರ ವಿರುದ್ಧವೆಂದು ಕಾಣಿಸುವ ನಾನಾ ದರ್ಶನ ಸಿದ್ಧಾಂತಗಳಲ್ಲಿ ಸಮನ್ವಯವನ್ನು ಕಾಣಬೇಕು, ಬೇರೆ ಬೇರೆ ದೃಷ್ಟಿಕೋಣಗಳಿಂದ ಒಂದೇ ವಸ್ತು ಅನೇಕ ವಿಧವಾಗಿ ಕಾಣುತ್ತದೆ. ಅದಕ್ಕಾಗಿ ನಾವು ಜಗಳವಾಡಬೇಕಾಗಿಲ್ಲ ಎಂದು ಅವರು ಸದಾ ನಿರೂಪಿಸುತ್ತಿದ್ದರು. ಶ್ರೀರಂಗ ಮಹಾಗುರುಗಳು ಎಲ್ಲ ವಿಷಯಗಳನ್ನೂ ವೈಜ್ಞಾನಿಕವಾಗಿ ಅನುಭವಾಧಾರಿತವಾಗಿ ಪ್ರತಿಪಾದಿಸುತ್ತಿದ್ದುದರಿಂದ ಅವರು ಅನುಸರಣೀಯರಾಗಿದ್ದರು. ಮೈಸೂರಿನಿಂದ ಪುತ್ತೂರಿನವರೆಗೆ ಹೋಗಿ 'ಅಜ್ಜನ' ದರ್ಶನವನ್ನು ಪಡೆದು ಅವರೊಡನೆ ಮಾತನಾಡಿ ಹಿಂದಿರುಗುತ್ತಿದ್ದರು.

ಪ್ರಶಸ್ತಿಗಳು: ಪಂಡಿತರತ್ನಂ ವರದಾಚಾರ್ಯರು ಯಾವ ಪ್ರಶಸ್ತಿಯನ್ನೂ ಅಪೇಕ್ಷಿಸಿದವರಲ್ಲ. ಸಮ್ಮಾನ ಎಂದರೆ ದೂರವಿರುತ್ತಿದ್ದರು. ಆದರೂ ಅವರ ವಿದ್ಯೆಗೆ ಸಮಾಜವು ಗೌರವವನ್ನು ನೀಡಲು ಅಪೇಕ್ಷಿಸುವುದು ಸಹಜವೇ. ಕಾಂಚೀಪುರದ ಶಂಕರ ಮಠದ ಶ್ರೀ ಚಂದ್ರಶೇಖರ ಸರಸ್ವತೀ ಸ್ವಾಮಿಗಳು ಶ್ರೀ ಕೆ.ಎಸ್.ವರದಾಚಾರ್ಯರು ತರುಣರಾಗಿದ್ದಾಗಲೇ– ಅವರ ವಿದ್ವತ್ಪ್ರೌಢಿಮೆಯನ್ನು ಗುರುತಿಸಿ ಪಂಡಿತ ರತ್ನಂ ಎಂಬ ಪ್ರಶಸ್ತಿ ನೀಡಿದರು. ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರು ರಾಷ್ಟ್ರಪತಿಗಳಾಗಿದ್ದಾಗ ಭಾರತ ಸರ್ಕಾರದಿಂದ ರಾಷ್ಟ್ರಪತಿ ಸಮ್ಮಾನವೂ ವರದಾಚಾರ್ಯರನ್ನು ಹುಡುಕಿಕೊಂಡು ಬಂದಿತು. ಇನ್ನೂ ಅನೇಕ ಪ್ರಶಸ್ತಿಗಳು ಬಂದಿದ್ದರೂ ಅವರು ಅವುಗಳ ಬಗೆಗೆ ಎಲ್ಲೂ ಹೇಳಿಕೊಳ್ಳುತ್ತಿರಲಿಲ್ಲ.

ಸಮನ್ವಯವರದ

ಈ ದೀಪಾವಳಿಗೆ ಪಂಡಿತರತ್ನಂ ಕೆ.ಎಸ್. ವರದಾಚಾರ್ಯರಿಗೆ ನೂರು ವರ್ಷ ತುಂಬಿರುತ್ತಿತ್ತು ಎಂಬ ದೃಷ್ಟಿಯಿಂದ ಅವರ ಶಿಷ್ಯರೂ ಅಭಿಮಾನಿಗಳೂ ಸೇರಿ ಶತಮಾನೋತ್ಸವವನ್ನು ಆಚರಿಸಲು ನಿರ್ಧರಿಸಿದ್ದಾರೆ. 22 ಮತ್ತು 23ನೆಯ ತಾರೀಖುಗಳಂದು ಶಾರದಾ ವಿಲಾಸ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಅನೇಕ ಮಠಾಧೀಶ್ವರರ ಸಾನ್ನಿಧ್ಯದಲ್ಲಿ ಸಮಾರಂಭಗಳೂ ವಿದ್ವದ್‌ಗೋಷ್ಠಿಗಳೂ ನಡೆಯುವುವು. ಈ ಸಂದರ್ಭದಲ್ಲಿ ವರದಾಚಾರ್ಯರ ನೆನಪು ಶಾಶ್ವತವಾಗಿರಲು ಸಮನ್ವಯವರದ ಎಂಬ ಸಂಸ್ಮರಣ ಗ್ರಂಥದ ಲೋಕಾರ್ಪಣೆಯೂ ಜರುಗಲಿದೆ. ದೇಶದ ಎಲ್ಲೆಡೆ ಹರಡಿಕೊಂಡಿರುವ ವರದಾಚಾರ್ಯ ಶಿಷ್ಯರು ಕನ್ನಡ, ಸಂಸ್ಕೃತ, ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಲೇಖನಗಳನ್ನು ಬರೆದಿದ್ದಾರೆ. ವರದಾಚಾರ್ಯರ ಜೀವನದ ವಿವಿಧ ಮಜಲುಗಳನ್ನು ಬಿಂಬಿಸುವ ಭಾವಚಿತ್ರಗಳನ್ನು ಸಂಸ್ಮರಣ ಗ್ರಂಥವು ಒಳಗೊಂಡಿದೆ. ವೇದಶಾಸ್ತ್ರಗಳ ನಾಲ್ವರು ವಿದ್ವಾಂಸರಿಗೆ ಉಚಿತ ಪ್ರಶಸ್ತಿಗಳನ್ನು ನೀಡಿ ಸಮ್ಮಾನಿಸಲಾಗುತ್ತಿದೆ.

ಪ್ರೇರಣೆ

ಸಂಸ್ಮರಣ ಗ್ರಂಥವನ್ನು ಹೊರತರಲು ಮತ್ತು ಅದ್ದೂರಿಯ ಶತಮಾನೋತ್ಸವವನ್ನು ನಡೆಸಲು ಮೂಲಪ್ರೇರಣೆ ಬಂದುದು ಶ್ರೀ ಸೋಂದಾಸ್ವರ್ಣವಲ್ಲಿ ಮಹಾಸಂಸ್ಥಾನ ಪೀಠಾಧೀಶ್ವರರಾದ ಪರಮ ಪೂಜ್ಯ ಜಗದ್ಗುರು ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳವರಿಂದ. ಅವರ ಮಾರ್ಗದರ್ಶನದಲ್ಲಿ ಬ್ರಾಹ್ಮಣ ಸಮಾಜದ ಮುಖಂಡರಾದ ಶ್ರೀ ಹೆಚ್.ವಿ. ರಾಜೀವ್, ಶ್ರೀ ಡಿ.ಟಿ. ಪ್ರಕಾಶ್, ಶ್ರೀ ಬಿ.ವಿ. ಇಳೈ ಆಳ್ವಾರ್ ಸ್ವಾಮೀಜಿ ಮುಂತಾದವರು ಮಹತ್ತಾದ, ಋಷಿಋಣವನ್ನು ತೀರಿಸುವ ಒಂದು ಪ್ರಕಾರವಾದ ಈ ಸಮಾರಂಭವನ್ನು ನಡೆಸುವ ಭಾರವನ್ನು ಹೊತ್ತಿದ್ದಾರೆ.

ಗುರುವೆ ವರದಾಚಾರ್ಯ ನಿಮ್ಮಡಿಯ ಸೇವೆಯನು
ಪರಮಾತ್ಮ ಶುಶ್ರೂಷೆಯೆಂದು ಮಾಡುವೆವು
ವರವ ನೀಡುತ್ತೆಮಗೆ ಶಕ್ತಿಯನು ತುಂಬಿರೈ
ಚಿರಕೀರ್ತಿಯನು ಪಡೆದು ಬೆಳಗಿ ನೀವು.

ಜಿಲ್ಲಾಡಳಿತದ ವತಿಯಿಂದ 67ನೇ ಕನ್ನಡ ರಾಜ್ಯೋತ್ಸವ

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್‌ರಿಂದ ಧ್ವಜಾರೋಹಣ: ಜಿಲ್ಲಾಧಿಕಾರಿ



ಮೈಸೂರು, ಅ.19– ಈ ಬಾರಿಯ ಕನ್ನಡ ರಾಜ್ಯೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಗುವುದೆಂದು ಜಿಲ್ಲಾಧಿಕಾರಿಗಳಾದ ಬಗಾದಿ ಗೌತಮ್ ಹೇಳಿದರು.

ಇಂದು ಜಿಲ್ಲಾಡಳಿತ ಭವನದಲ್ಲಿ ನಡೆದ ಕರ್ನಾಟಕ ರಾಜ್ಯೋತ್ಸವ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಕಳೆದೆರಡು ವರ್ಷಗಳಲ್ಲಿ ಕೊರೊನಾದಿಂದಾಗಿ ರಾಜ್ಯೋತ್ಸವವನ್ನು ಸರಳವಾಗಿ ಆಚರಿಸಲಾಗಿತ್ತು. ಈ ಬಾರಿ ಅತ್ಯಂತ ಸಡಗರ ಹಾಗೂ ವಿಜೃಂಭಣೆಯಿಂದ ಆಚರಿಸಲಾಗುವುದು ಎಂದರು.

ನವೆಂಬರ್ 1 ರ ಬೆಳಿಗ್ಗೆ 8.30 ಘಂಟೆಗೆ ಅರಮನೆ ಆವರಣದಲ್ಲಿರುವ ಭುವನೇಶ್ವರಿ ದೇವಿಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರು ಪೂಜೆ ಸಲ್ಲಿಸಲಿದ್ದು, ಬೆಳಿಗ್ಗೆ 9 ಗಂಟೆಗೆ ಧ್ವಜಾರೋಹಣ ನೆರವೇರಲಿದೆ. ನಂತರ ಪೊಲೀಸ್ ಆಯುಕ್ತರ ಅಧ್ಯಕ್ಷತೆಯಲ್ಲಿ ಪರೇಡ್ ಮೆರವಣಿಗೆ, ಕಾರ್ಯಕ್ರಮ ಸ್ಥಳದಿಂದ ಕೆ.ಆರ್ ವೃತ್ತ, ಸಯ್ಯಾಜಿರಾವ್ ರಸ್ತೆ, ಇರ್ವಿನ್ ರಸ್ತೆ ಮಾರ್ಗವಾಗಿ ವಾಪಸ್ ಕಾರ್ಯಕ್ರಮ ಸ್ಥಳ ತಲುಪುವುದು. ಮೆರವಣಿಗೆಯಲ್ಲಿ ಕಲಾತಂಡಗಳು, ಪೊಲೀಸ್ ಬ್ಯಾಂಡ್, ಮೌಂಟೆಡ್ ಪೊಲೀಸ್, ಹಾಗೂ ಸ್ತಬ್ಧ ಚಿತ್ರಗಳು ಇರಲಿವೆ ಹಾಗೂ ಮೆರವಣಿಗೆಯಲ್ಲಿ ಶಾಲಾ,ಕಾಲೇಜು ವಿದ್ಯಾರ್ಥಿಗಳು, ಎನ್.ಎಸ್.ಎಸ್. ವಿದ್ಯಾರ್ಥಿಗಳು, ಕನ್ನಡಪರ ಸಂಘಟನೆಗಳು, ಮಹಿಳಾ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ಕಾರ್ಯಕ್ರಮದ ನಂತರ ಶಾಲಾ ವಿದ್ಯಾರ್ಥಿಗಳಿಗೆ ಉಪಾಹಾರದ ವ್ಯವಸ್ಥೆ ಇರಲಿದೆ ಎಂದರು.

ಜಿಲ್ಲಾ ಪಂಚಾಯಿತಿ, ಕೆಎಸ್‌ಆರ್‌ಟಿಸಿ ನೌಕರರ ಸಂಘ, ಕಂದಾಯ ಇಲಾಖೆ, ಬಿಇಎಂಎಲ್ ಕನ್ನಡ ಸಂಘ, ಕನ್ನಡ ಸಂಘ ಸಂಸ್ಥೆಗಳು, ಹಾಗೂ ಮಹಿಳಾ ಸಂಘಟನೆ ವತಿಯಿಂದ ತಲಾ ಒಂದೊಂದು ಸ್ತಬ್ಧ ಚಿತ್ರ ಇರಲಿವೆ, ಅಂದು ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕಲಾಮಂದಿರದಲ್ಲಿ ಸಂಜೆ 5.30ಕ್ಕೆ ಆಯೋಜಿಸಲಾಗಿದ್ದು, ಜಿಲ್ಲಾಮಟ್ಟದಲ್ಲಿ ಸಾಧನೆಗೈದ ವಿವಿಧ ಕ್ಷೇತ್ರಗಳ 5 ರಿಂದ 10 ಜನರನ್ನು ಸನ್ಮಾನಿಸಲಾಗುವುದೆಂದರು.

ಕನ್ನಡಪರ ಸಂಘಟನೆಗಳ ಪದಾಧಿಕಾರಿಗಳು ಮಾತನಾಡಿ, ರಾಜ್ಯೋತ್ಸವ ದಿನದಂದು ಮನೆ ಮನೆಗಳಲ್ಲಿ ಕನ್ನಡ ಬಾವುಟ ಹಾರಿಸಲು ಜಿಲ್ಲಾಧಿಕಾರಿಗಳು ಆದೇಶಿಸಬೇಕೆಂದರು, ಜಿಲ್ಲಾಧಿಕಾರಿಗಳು ಪ್ರತಿಕ್ರಿಯಿಸಿ ಆದೇಶ ಬೇಡ, ಕನ್ನಡ ಬಾವುಟ ಹಾರಿಸುವಂತೆ ಪ್ರೇರೇಪಿಸೋಣ ಎಂದರು. ಮಾಲ್‌ಗಳಲ್ಲಿ ಶಾಪಿಂಗ್ ಕಾಂಪ್ಲೆಕ್ಸ್‌ಗಳಲ್ಲಿ ಕನ್ನಡದ ಅಕ್ಷರಗಳೇ ಕಾಣದಾಗಿದ್ದು, ಅವರಿಗೆ ನೋಟಿಸ್ ನೀಡಿ ಕನ್ನಡ ಫಲಕಗಳನ್ನು ಹಾಕುವಂತೆ ಸೂಚಿಸಬೇಕೆಂದು ಕನ್ನಡ ಸಂಘಟನೆಗಳ ಪದಾಧಿಕಾರಿಗಳು ಆಗ್ರಹಿಸಿದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್, ಜಿ.ಪಂ. ಸಿಇಓ ಬಿ.ಆರ್. ಪೂರ್ಣಿಮ, ಅಪರ ಜಿಲ್ಲಾಧಿಕಾರಿ ಮಂಜುನಾಥ ಸ್ವಾಮಿ, ಕನ್ನಡ ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ್, ವಿವಿಧ ಕನ್ನಡ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಕನ್ನಡ ಕಾವಲು ಸಮಿತಿ ಪದಾಧಿಕಾರಿಗಳು, ಜಿಲ್ಲಾಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ನಾಳೆ ಪೊಲೀಸ್ ಹುತಾತ್ಮರ ದಿನಾಚರಣೆ

ಮೈಸೂರು, ಅ.19– ಸಹಾಯಕ ಪೊಲೀಸ್ ಆಯುಕ್ತರ ಕಚೇರಿಯ ವತಿಯಿಂದ ಅಕ್ಟೋಬರ್ 21 ರಂದು ಬೆಳಿಗ್ಗೆ 8 ಗಂಟೆಗೆ ಮೈಸೂರು ಜಿಲ್ಲಾ ಪೊಲೀಸ್ ಕಚೇರಿಯ ಪಕ್ಕದಲ್ಲಿರುವ ಹುತಾತ್ಮರ ಸ್ಮಾರಕ ಮೈದಾನದಲ್ಲಿ ಪೊಲೀಸ್ ಹುತಾತ್ಮರ ದಿನಾಚರಣೆಯನ್ನು ಆಚರಿಸಲು ತೀರ್ಮಾನಿಸಿದ್ದು, ಕಾರ್ಯಕ್ರಮದಲ್ಲಿ ಹಲವಾರು ಗಣ್ಯರು ಪಾಲ್ಗೊಳ್ಳುವರು. ಕಾರ್ಯಕ್ರಮದಲ್ಲಿ ಪೊಲೀಸ್ ಕವಾಯತು, ವಾಲಿಫೈರಿಂಗ್ ಹಾಗೂ ಬ್ಯಾಂಡ್ ತಂಡಗಳಿಂದ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದ್ದು, ಪೊಲೀಸರ ತ್ಯಾಗ, ಬಲಿದಾನವನ್ನು ಮತ್ತು ಸೇವೆಯನ್ನು ಪ್ರತಿಬಿಂಬಿಸುವ ಕಾರ್ಯಕ್ರಮವಾಗಿದೆ ಎಂದು ಸಹಾಯಕ ಪೊಲೀಸ್ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರಿನಲ್ಲಿ ಅತ್ಯಾಧುನಿಕ ಸೆಮಿ ಕಂಡಕ್ಟರ್ ಉದ್ದಿಮೆ ಸ್ಥಾಪನೆ ಪ್ರಗತಿಯಲ್ಲಿದೆ

ಉನ್ನತ ಶಿಕ್ಷಣ, ಐಟಿ-ಬಿಟಿ ಸಚಿವ ಡಾ.ಸಿ.ಎನ್.ಅಶ್ವಥ್ ನಾರಾಯಣ್ ಸ್ಪಷ್ಟನೆ



ಮೈಸೂರು, ಅ.19(ಜಿಎ)– ವಿಶ್ವದ ಯಾವುದೇ ದೇಶಕ್ಕಿಂತ ಭಾರತ ದೇಶವು ಅತೀ ವೇಗವಾಗಿ ಪ್ರತಿಯೊಂದು ಕ್ಷೇತ್ರದಲ್ಲಿ ಡಿಜಿಟಲೀಕರಣಗೊಳ್ಳುತ್ತಿದ್ದು, ಇದರೊಟಿಗೆ ಸೈಬರ್ ಭದ್ರತೆಯನ್ನು ಒದಗಿಸಲಾಗುತ್ತಿದೆ ಎಂದು ಉನ್ನತ ಶಿಕ್ಷಣ ಹಾಗೂ ಐಟಿ ಬಿಟಿ ಸಚಿವ ಡಾ.ಸಿ.ಎನ್. ಅಶ್ವಥ್ ನಾರಾಯಣ್ ತಿಳಿಸಿದರು.

ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (ಕೆಡಿಇಎಂ), ವತಿಯಿಂದ ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿರುವ 'ಬಿಗ್ ಟೆಕ್ ಶೋ' 2ನೇ ಆವೃತ್ತಿಯ ಮೈಸೂರು ಬ್ಲೂ ಸಿಇಓ ರೌಂಡ್ ಟೇಬಲ್ ಸಭೆಯಲ್ಲಿ ಅವರು ಮಾತನಾಡಿದರು. ಭಾರತ ದೇಶವು ತಂತ್ರಜ್ಞಾನದಲ್ಲಿಯೂ ಅತೀ ವೇಗವಾಗಿ ಬೆಳೆಯುತ್ತಿದೆ. ಇದರ ಜೊತೆ ಸೈಬರ್ ಭದ್ರತೆಯನ್ನು ಅಳವಡಿಸಲಾಗುತ್ತಿದೆ. ಸಂಸ್ಥೆಗಳ ಸಂಖ್ಯೆಗಳಿಗಿಂತ ಗುಣಮಟ್ಟಕ್ಕೆ ಸರ್ಕಾರ ಮೊದಲ ಆದ್ಯತೆ ನೀಡುತ್ತಿದೆ. ಸರ್ಕಾರದ ಹಸ್ತಕ್ಷೇಪವಿಲ್ಲದೆ ಉದ್ಯಮಗಳ ಅಕಾಡೆಮಿಯ ಸಹಯೋಗವನ್ನು ಸಕ್ರಿಯಗೊಳಿಸುವ ಕಡೆ ಕೆಲಸ ಮಾಡಲು ಮುಂದಾಗಿದೆ ಎಂದರು.

ಅತ್ಯಾಧುನಿಕ ಸೆಮಿ ಕಂಡಕ್ಟರ್ ಉದ್ದಿಮೆಯನ್ನು ನಗರದಲ್ಲಿ ಸ್ಥಾಪಿಸುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು, 2023ರ ಫೆಬ್ರವರಿ ವೇಳೆಗೆ ಅನುಮೋದನೆ ಪ್ರಕ್ರಿಯೆ ಮುಗಿಯಲಿದೆ. ಸೆಮಿಕಂಡಕ್ಟರ್ ಫ್ಯಾಬ್ ಕಂಪನಿಗೆ ಈಗಾಗಲೇ ಸ್ಥಳವನ್ನು ಗುರುತಿಸಿ, ಭೂಮಿಯನ್ನು ಮೀಸಲಿ ಡಲಾಗಿದೆ. ಆದರೆ ಕಂಪನಿ ಸ್ಥಾಪನೆಗೆ ಅಗತ್ಯವಾದ ಅನುಮತಿ ಪ್ರಕ್ರಿಯೆಗೆ 14 ತಿಂಗಳು ಹಿಡಿಯುತ್ತದೆ. ಕೇಂದ್ರ ಐಟಿ ಸಚಿವ ಅಶ್ವಿನಿ ವೈಷ್ಣವ್ ಅವರ ಜತೆ ಮಂಗಳವಾರ ದೆಹಲಿಯಲ್ಲಿ ಈ ಕುರಿತು ಚರ್ಚಿಸಲಾಗಿದೆ ಎಂದು ತಿಳಿಸಿದರು.

ಸೈಬರ್ ಸೆಕ್ಯುರಿಟಿ ಕುರಿತ ಉದ್ದಿಮೆ ಮೈಸೂರಿನಲ್ಲಿ ಬೃಹತ್ತಾಗಿ ಬೆಳೆಯಲು ತಕ್ಕ ಪರಿಸರ ಕಲ್ಪಿಸಲಾಗುತ್ತಿದೆ. ನಮ್ಮಲ್ಲಿ ಅತ್ಯಂತ ವೇಗದಿಂದ ನಡೆಯುತ್ತಿರುವ ಡಿಜಿಟಲೀಕರಣ ಮತ್ತು ಉನ್ನತ ಶಿಕ್ಷಣ ಸುಧಾರಣೆ ಇದಕ್ಕೆ ವೇಗವರ್ಧಕದ ರೀತಿಯಲ್ಲಿ ಕೆಲಸ ಮಾಡಲಿವೆ ಎಂದು ಅವರು ವಿವರಿಸಿದರು. ಉನ್ನತ ಶಿಕ್ಷಣದಲ್ಲಿ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯಗಳನ್ನು ಒಂದು ಸಂಸ್ಕೃತಿಯಾಗಿ ತರಲಾಗುತ್ತಿದೆ. ಶಿಕ್ಷಣ ಸಂಸ್ಥೆಗಳು ಇಂದು ನೇರವಾಗಿ ಉದ್ಯಮಗಳ ಜತೆ ಸಕ್ರಿಯ ಮತ್ತು ರಚನಾತ್ಮಕ ಸಹಭಾಗಿತ್ವ ಹೊಂದುತ್ತಿವೆ. ಮೈಸೂರಿನ ಉದ್ಯಮಿಗಳು ಶಿಕ್ಷಣ ಸಂಸ್ಥೆಗಳ ಜೊತೆ ಅರ್ಥಪೂರ್ಣ ಸಂಬಂಧ ಹೊಂದುವ ಅಗತ್ಯವಿದೆ ಎಂದು ಅವರು ಇದೇ ಸಂದರ್ಭದಲ್ಲಿ ಸಲಹೆ ನೀಡಿದರು.

ಸಭೆಯಲ್ಲಿ ಐಟಿ–ಬಿಟಿ ಇಲಾಖೆಯ ನಿರ್ದೇಶಕಿ ಮೀನಾ ನಾಗರಾಜ್, ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ ಅಧ್ಯಕ್ಷ ಬಿ.ವಿ.ನಾಯ್ಡು ಇತರರು ಪಾಲ್ಗೊಂಡಿದ್ದರು.

ಮೈಸೂರು ಉದ್ಯಮಿಗಳ ಪ್ರಮುಖ ಸಲಹೆಗಳು...

ಮೈಸೂರು, ಅ.19– ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (ಕೆಡಿಇಎಂ) ಬುಧವಾರ ಆಯೋಜಿಸಿದ್ದ ಬಿಗ್‌ಟೆಕ್ ಷೋನಲ್ಲಿ ಮೈಸೂರಿನ ಅಭಿವೃದ್ಧಿಯ ವಿಚಾರವಾಗಿ 50ಕ್ಕೂ ಹೆಚ್ಚು ಉದ್ಯಮಿಗಳು ಐಟಿ–ಬಿಟಿ ಸಚಿವ ಡಾ.ಸಿ.ಎನ್.ಅಶ್ವತ್ಥ ನಾರಾಯಣರಿಗೆ ಸಲಹೆಗಳನ್ನು ನೀಡಿದರು.

ರಂಗರಾವ್ ಅಂಡ್ ಸನ್ಸ್‌ನ ಸಿಇಓ ಪವನ್ ರಂಗ ಅವರು, ದೇಶದಲ್ಲೇ ಸ್ವಚ್ಛನಗರಿ. ಮೊದಲ ಸ್ಥಾನ ಪಡೆದಿದ್ದ ಮೈಸೂರು, ಈಗ 9ನೇ ಸ್ಥಾನಕ್ಕೆ ಕುಸಿದಿದೆ. ಇದನ್ನು ಗಂಭೀರವಾಗಿ ಪರಿಗಣಿಸಿ, ಟಾಸ್ಕ್‌ಫೋರ್ಸ್ ರಚಿಸಿದರೆ ಮೈಸೂರು ಮರಳಿ ಸ್ವಚ್ಛತೆಯಲ್ಲಿ ಮೊದಲ ಸ್ಥಾನ ಪಡೆಯಲಿದೆ. ಉದ್ಯಮಿಗಳ ಆಕರ್ಷಿಸಲು ಇದು ನೆರವಾಗಲಿದೆ. ಅಲ್ಲದೆ ರಕ್ಷಣಾ ಹಾಗೂ ಏರೋಸ್ಪೇಸ್ ಹಬ್ ರೂಪಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಎಕ್ಸೆಲ್ ಸಾಫ್ಟ್‌ನ ಸುಧನ್ವಾ ಧನಂಜಯ್ ಕೂಡ, ಸೈಬರ್ ಭದ್ರತಾ ಕೇಂದ್ರ ಹಾಗೂ ಮೆಟಾವರ್ಸ್ ಉದ್ಯಮಗಳ ಸ್ಥಾಪನೆಗೆ ನಗರವು ಪ್ರಶಸ್ತ ತಾಣವಾಗಿದೆ ಎಂದರು. ನಂತರ ಐಇಎಸ್‌ಎ ಸಿಇಒ ಕೆಕೃಷ್ಣಮೂರ್ತಿ ಮಾತನಾಡಿ, ಸೈಬರ್ ಭದ್ರತೆ, ಏರೋಸ್ಪೇಸ್, ಆರೋಗ್ಯ ಸೇವಾ ಉದ್ಯಮ ಸ್ಥಾಪನೆಗೆ ಮೈಸೂರು ಪೂರಕವಾಗಿದೆ. ತೈವಾನ್ ಮಾದರಿಯಲ್ಲಿ ಒಂದೇ ಕಟ್ಟಡದಲ್ಲಿ ಎಲೆಕ್ಟ್ರಾನಿಕ್ಸ್ ಬಿಡಿಭಾಗಗಳನ್ನು ತಯಾರು ಮಾಡುವ ಘಟಕಗಳು ಸ್ಥಾಪನೆಯಾಗಬೇಕು ಎಂದು ಸಲಹೆ ಇತ್ತರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

SPOKEN ENGLISH
Communicative Approach Vocabulary, Functional Grammar, Speaking, Presentation Skills, LSRW, Group Discussion, Interview Skills
NIHARIKA ACADEMY
6360859871

MUDA / DTCP SITES
ಹೆಚ್.ಡಿ.ಕೋಟೆ ರಸ್ತೆಯಲ್ಲಿ ಉತ್ತಮ ನಿವೇಶನಗಳು 11 ಲಕ್ಷಕ್ಕೆ ಲಭ್ಯವಿದೆ. ಬನ್ನೂರು ರಸ್ತೆಯಲ್ಲಿ 30x50 ಅಳತೆಯುಳ್ಳ ಸೈಟುಗಳು 36.5 ಲಕ್ಷಕ್ಕೆ ಮಾರಾಟಕ್ಕಿದೆ. ಬ್ಯಾಂಕ್ ಸೌಲಭ್ಯ ದೊರಕುತ್ತದೆ. ಸಂಪರ್ಕಿಸಿ:
9663104263

COMMERCIAL PROPERTY FOR SALE
30492 Sqft, Mysore - Madikeri Main National Highway Road, 3 kms from ring road circle, Mysore.
Contact: 9844393578

WANTED
Service Manager
Customer Care Executive
Mechanics - 5+ Exp.
for two wheeler Service Centre
97399-59597 / 97399-59598

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಶೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

S.K. Construction
ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ ಹೊಸ ಮನೆ, Plan, Loan ಮಾಡಿಸಿ 3D Elevation ಸಹಿತ ಕಟ್ಟಿಕೊಡುತ್ತೇವೆ.
Mob: 9620528490

ಬೇಕಾಗಿದ್ದಾರೆ
ದಟ್ಟಗಳ್ಳಿ ರೋಟರಿ ಶಾಲೆಯ ಬಳಿಯಿರುವ 2 ಸದಸ್ಯರ ಕುಟುಂಬಕ್ಕೆ ಹತ್ತಿರ ವಾಸಿಸುವ ಮಹಿಳಾ ಅಡುಗೆಯವರು ಬೇಕಾಗಿದ್ದಾರೆ. ಸಮಯ ಬೆಳಗ್ಗೆ 8.00 ರಿಂದ 11 ಗಂಟೆಯವರೆಗೆ, ಸಂಬಳ: 7000 ರೂ. ಸಂಪರ್ಕಿಸಿ:
9900038342

ಬೇಕಾಗಿದ್ದಾರೆ
ಸಸ್ಯಹಾರಿ ಹೋಟೆಲಿಗೆ ದೋಸೆಯವರು ಸೂಪರ್‌ವೈಸರ್ ಹಾಗೂ ಸಪ್ಲೆಯರ್ ಬೇಕಾಗಿದ್ದಾರೆ. ರಾತ್ರಿ ಉಳಿಯಲು ವ್ಯವಸ್ಥೆ ಇದೆ.
9916206561

ಬೇಕಾಗಿದ್ದಾರೆ
ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ. (ಸಂಬಳ 8000), Team Leader ಬೇಕಾಗಿದ್ದಾರೆ. (ಕಂಪ್ಯೂಟರ್ ಜ್ಞಾನವುಳ್ಳವರು) ಸಂಬಳ 10,000/–. ಸ್ಥಳ: ಎನ್.ಆರ್.ಮೊಹಲ್ಲಾ ಮತ್ತು ಚಾಮುಂಡಿಪುರಂ GTR Hotel ಹತ್ತಿರ
8050912616

ಬೇಕಾಗಿದ್ದಾರೆ
ಅನುಭವವುಳ್ಳ ಹುಡುಗ ಹಾಗೂ ಹುಡುಗಿ ಬಿಳಿಕೆರೆ ಸೈಬರ್ ಸೆಂಟರ್ / ಕಂಪ್ಯೂಟರ್ ಸೆಂಟರ್‌ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಸಂಪರ್ಕಿಸಿ:
7349561736

Join ASFT Fashion Design Courses
* Certification Course
* Diploma Course
* Advance Diploma Course
Alpha School of Fashion Technology & Interior Design
AT: SRIRAMPURA, GOKULAM, UDAYAGIRI, MYSORE
Mob: 7829937469, 9901803394

ಶ್ರೀ ಗೌರಿಶಂಕರ ಟ್ರಾವೆಲ್ಸ್
1–11–22 (8 ದಿನ) ದೆಹಲಿ, ಆಗ್ರಾ, ಪ್ರಯಾಗ್ ರಾಜ್, ಕಾಶಿ, ಗಯಾ, ಅಯೋಧ್ಯ ಇತ್ಯಾದಿ.
10–11–22 (4 ದಿನ) ಬಾಂಬೆ, ಶಿರಡಿ, ನಾಸಿಕ್ 3 ಜ್ಯೋತಿರ್ಲಿಂಗ, ಎಲ್ಲೋರ.
24–12–22 (6 ದಿನ) ಗುರುವಾಯೂರು, ಮುನ್ನಾರ್, ತ್ರಿವೇಂಡಂ, ಕೊಚ್ಚಿ, ಆಲಪ್ಪಿ ಇತ್ಯಾದಿ.
ವಿಮಾನ / ಬಸ್ / ಊಟ / ರೂಂ
9620002114

TV ಕೆಟ್ಟಿದೆಯೇ? LCD, LED TV
ಫ್ರಿಡ್ಜ್, ವಾಷಿಂಗ್ ಮೆಷಿನ್, Micro Oven Doorstep ಸರ್ವೀಸ್ ಮಾಡಿಕೊಡಲಾಗುತ್ತದೆ
ನುರಿತ ಸರ್ವಿಸ್ ಇಂಜಿನಿಯರ್ಸ್‌ಗಳಿಂದ ಅತ್ಯಾಧುನಿಕ ಯಂತ್ರ ಬಳಸಿ LCD, LED ಪ್ಯಾನಲ್ ಬಾಂಡಿಂಗ್ ಕಡಿಮೆ ದರದಲ್ಲಿ ಮಾಡಿಕೊಡಲಾಗುತ್ತದೆ
ತೇಜು ಎಲೆಕ್ಟ್ರಾನಿಕ್ಸ್ ತ್ಯಾಗರಾಜ ರಸ್ತೆ, ಅಗ್ರಹಾರ
9342114069

TEACHERS REQUIRED
English Major / PCM, B.Ed qualified teachers required. Interested can walk in or call: 9742792363
cambridgepublicschool903@gmail.com

WANTED TEACHERS
S.D.E.T - School, Siddalingapura, Mysore
1) Any Degree in English Medium.
2) B.Sc, B.Ed.
3) BA, D.Ed or B.Ed, NST, NTT
Contact:
9845924194
9535587045

CHANGE OF NAME
I, Syed Moeen, S/o Syed Jamal residing at 185, 2nd Cross, Subhashnagar, Mysore - 570007, I have changed my name from Syed Moyeen to Syed Moeen on my own free will in front of notary C.R.Seetharam dated: 17/10/2022. In future. in all my records & correspondence I will be known, Called & Identify as Syed Moeen.
Sd/- Syed Moeen

Nydile Foods, Mysore Looking for Distributors
Manufacturers of Spice and Masala Powders like Puliyogare Kashaya, Rasam etc. Contact -
9591973003

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

GOLD COMPANY
ಗಿರವಿ ಚಿನ್ನಾಭರಣ ಖರೀದಿ ಒಂದು ಗ್ರಾಂ ಚಿನ್ನಕ್ಕೆ 5100 ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಳ್ಳುತ್ತೇವೆ ಕೂಡಲೇ ಸಂಪರ್ಕಿಸಿ – (T&C)
9964522225

ಕರ್ನಾಟಕದಾದ್ಯಂತ ತಕ್ಷಣ ಬೇಕಾಗಿದ್ದಾರೆ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ)
MNC ಕಂಪನಿಗಳಿಗೆ 4th, 7th, SSLC, PUC, ITI, any Degree Pass / Fail ಯುವಕ, ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ.
ESI / PF ನೊಂದಿಗೆ ಊಟ, ವಸತಿಯಿರುತ್ತದೆ.
ಸಂಬಳ + ಓಟಿ 15,000 ರಿಂದ 48,000
9108522259 | 8971622258

'ನೆಲೆ' ವೃದ್ಧಾಶ್ರಮ
(ಮಹಿಳೆಯರಿಗಾಗಿ ಮಾತ್ರ)
ಆರೋಗ್ಯ ಆರೈಕೆ ಬೇಕಾದ ಹಿರಿಯ ಮಹಿಳೆಯರಿಗೆ ಮಾನಸಿಕ ಖಾಯಿಲೆಯಿರುವವರಿಗೆ ಹಾಸಿಗೆ ಹಿಡಿದವರಿಗೆ ವಸತಿ, ಸಸ್ಯಹಾರ ಊಟ, ನರ್ಸಿಂಗ್ ಸೌಲಭ್ಯ ದೊರೆಯುತ್ತದೆ. ದಾಖಲಾತಿಗಾಗಿ ಸಂಪರ್ಕಿಸಿ:
ಡಾ.ಕಾಂತರಾಜು.ಸಿ.ಕೆ
9845058023 / 9686190005

HOUSE FOR RENT
(22X33) 2BHK Ground Floor, Gayathripuram, 2nd Stage, Behind the Church
8073418287

REQUIRED
Sales Girl / Women with Basic Computer Knowledge, Salary 10,000 - 15,000 Vivekananda Circle.
0821-4259138

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 BANGALORE 9343142258

BUILDING FOR RENT
(15x25) (3rd Floor) K.T.Street
9449087351
8618622350

ಜಮೀನು ಮಾರಾಟಕ್ಕಿದೆ
ನಂಜುನಗೂಡು
2 ಎಕರೆ 1 ಗುಂಟೆ
(Suitable For Farm House)
ನಂಜುನಗೂಡು (Industrial Area)
ದೊಡ್ಡ ಬ್ರಿಡ್ಜ್ ಇಂದ 3kms
ಕಲ್ಲಳ್ಳಿ– ಗೊದ್ದನಪುರ
Contact : 9008701144

Star Solar

ಕೇವಲ Easy EMI 19,499/- 200 Ltr
5/15 Years Guaranty
ಎಲ್ಲಾ ಕಂಪನಿಯ ಹಳೆಯ ಸೋಲಾರ್‌ಗಳನ್ನು ಸರ್ವೀಸ್ ಮಾಡಿಕೊಡಲಾಗುವುದು.
Old system Exchange offer available
Manufacturing : Belawadi Industrial Sub, Mysore
9945616293 / 9449966293

WANTED FOR Bhaskar Heart Centre

Post	Qualification
Receptionist	Degree / PUC
Marketing / PRO (M)	Degree / PUC
Staff Nurses (F)	GNM / ANM
Laboratory Technician	CMLT / DMLT
Pharma Assistant	PUC / Degree

0821-2499188 / 9880186386

WANTED
A reputed Lodge in the heart of the city is looking for the position of receptionist (Male Only) should have Prior experience, Computer Knowledge, Age 25 to 40)
9663747452 / 9739742344
Another Post Experienced Roomboy, Age 20 to 35
9663991888

BRIDE / GROOMS MACHMAKERS ವಧು / ವರರ ಮದುವೆ ಕೇಂದ್ರ
ಎಲ್ಲಾ ಜಾತಿಯ Govt / Private jobs / ಸ್ವಂತ ಕಂಪನಿ. ಬ್ಯುಸಿನೆಸ್ / ರೈತ 18000 ವಧುಗಳಿಗೆ ವರ ಬೇಕು. 28000 ವರಗಳಿಗೆ ವಧುಬೇಕು. 4800 ಡೈವೋರ್ಸಿಗಳು, ವಿಧುರರ, ವಿಧವೆಯರು / ಸ್ವತಂತ್ರರು ಬಡವರ ವಧುಗಳಿಗೆ ಉಚಿತ 18 to 65 Life Partner ಗಾಗಿ ನೇರವಾಗಿ ಸಂಪರ್ಕಿಸಿ / ತರಬೇತಿ ಉದ್ಯೋಗ, ವಸತಿ ನೇರ ಸಂಪರ್ಕ ಮಾಡಿ
7975728012

ಮನೆ ಕಟ್ಟಿಕೊಡಲಾಗುವುದು
ಮೈಸೂರು, ಬೆಂಗಳೂರು, ತುಮಕೂರು, ಹಾಸನ, ಮಂಡ್ಯ, ಚಾಮರಾಜನಗರ, ಹಳ್ಳಿ ಹಾಗೂ ಸಿಟಿಗಳಲ್ಲಿ.
9740081795, 8073026718

ತಕ್ಷಣ ಬೇಕಾಗಿದ್ದಾರೆ
PART TIME / FULL TIME / HOME -BASED
ecode GAS SAFE | All Taluk & Dist

EDUCATION ವಿದ್ಯಾರ್ಹತೆ	WORK TIME ಕೆಲಸದ ಸಮಯ	SALARY ಸಂಬಳ
SSLC,PUC any DEEGREE	4 HOURS 8 HOURS	8000/- UP TO 19000/-

ಬೋಡದಲು ಬಂದವರಿಗೆ ಆದ್ಯತೆ ಗ್ಯಾಸ್ ಸೇಫ್ ಬಗ್ಗೆ ಮನೆಯಲ್ಲಿ ಕುಳಿತು ಗ್ರಾಹಕರಿಗೆ ಮಾಹಿತಿ ನೀಡುವ ಕೆಲಸ
Android ಸ್ಮಾರ್ಟ್ ಫೋನ್ ಹೊಂದಿರಬೇಕು
9986621226 / 7676779932

ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
9901384789

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡಮ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಃಸಿದ್ಧ. ಖಾಯಂ ವಿಳಾಸ: ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ನಿರ್ವಹಿಸಲು ಪುರುಷರು Vertical Machine Operator (VMC) / Milling Machine Operators ಹಾಗೂ ಆಂದೋಲನ ಸರ್ಕಲ್ ನ ಹತ್ತಿರ House Keeping ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಒಳ್ಳೆಯ ವೇತನ ಹಾಗೂ ಇ.ಎಸ್.ಐ, ಪಿ.ಎಫ್ ಸೌಲಭ್ಯವಿರುತ್ತದೆ. ಸಂಪರ್ಕಿಸಿ.
9845395975 / 9731976148

ಬೇಕಾಗಿದ್ದಾರೆ
1. ಎಲೆಕ್ಟ್ರಿಷಿಯನ್ ಕಂ ಪ್ಲಂಬರ್ – 2 ಹುದ್ದೆ
ದಿ.ಕೋರಮ್ ಹೋಟೆಲ್ ನಂ.2257/1, ವಿನೋಬಾ ರಸ್ತೆ, ಕಲಾಮಂದಿರ ಹತ್ತಿರ, ಮೈಸೂರು. ಸಂಪರ್ಕಿಸಿ:
9620274629
9620274630

FOR SALE
30x20 Duplex house for sale, 3 BHK ground floor, full parking. Newly construction, Srirampura 2nd Stage, BEML Layout.
9900251194, 9738884777

CHANGE OF NAME
I, Nivedita Nagesh, residing at No. 78, 5th Main Road, JCST 'M' Block (Behind BCM Hostel) Kuvempunagar, Mysore-570 023, have changed my name from Niveditha S. Murthy to Nivedita Nagesh on my own free will, sworn in before Notary, Jaiprakash Narayana, Mysore, vide affidavit dated 17-10-2022. In future, all records and transactions as well as on all occasions whatsoever, I shall use and sign in the name of Nivedita Nagesh.
Sd/- Nivedita Nagesh

ಸೆರಾ ಕೇರ್ ಹೆಲ್ತ್ ಸೆಂಟರ್
ಬೇಕಾಗಿದ್ದಾರೆ
ಕೆಲಸಕ್ಕೆ ಯುವತಿಯರು (18–30). ವಿದ್ಯಾರ್ಹತೆ: ದ್ವಿತೀಯ ಪಿ.ಯು.ಸಿ. & ಯಾವುದೇ ಪದವಿ.
8296366894, 7996011692
ನ್ಯೂ ಕಾಂತರಾಜ ಅರಸು ರಸ್ತೆ, ಕೆ.ಜಿ. ಕೊಪ್ಪಲು, ಮೈಸೂರು

ಬೇಕಾಗಿದ್ದಾರೆ
ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ಲಾಡ್ಜ್‌ವೊಂದಕ್ಕೆ ರೂಮ್ ಬಾಯ್ಸ್ ಬೇಕಾಗಿದ್ದಾರೆ.
ROOM BOY
ಕೆಲಸದ ಸಮಯ: ಬೆಳಿಗ್ಗೆ 8 ರಿಂದ ಸಂಜೆ 8 ರವರೆಗೆ.
Mob: 97401-29291

ಸೈಟು ಮಾರಾಟಕ್ಕಿದೆ
ಮುಡಾ ಅಪ್ರೂವ್ಡ್ 20x30 S/F ವಿಜಯನಗರ 4ನೇ ಹಂತ 30x30 S/F ಹೊಸ ಆರ್.ಟಿ. ನಗರ ಹತ್ತಿರ.
Mob: 9900372792

ತಕ್ಷಣ ಬೇಕಾಗಿದ್ದಾರೆ
ಸ್ಥಿರಾಸ್ತಿಗಳ ಜಿಲ್ಲಾ ಪತ್ರ ಬರಹಗಾರರ ಕಛೇರಿಗೆ ಕಂಪ್ಯೂಟರ್ ಆಪರೇಟರ್ (F) ಬೇಕಾಗಿದ್ದಾರೆ. ಸಂಪರ್ಕಿಸಿ:
ಎಂ.ಎನ್.ಧರಣಿ ವೆಂಕಟೇಶ
ಸ್ಥಿರಾಸ್ತಿಗಳ ಜಿಲ್ಲಾ ಪತ್ರಬರಹಗಾರರು ಪೂರ್ವ ಉಪನೋಂದಣಿ ಕಛೇರಿ ಹತ್ತಿರ, ಡಾ||ರಾಜಕುಮಾರ್ ರಸ್ತೆ, ಶಕ್ತಿನಗರ, ಕಲ್ಯಾಣಗಿರಿ, ಮೈಸೂರು.
9113991509 / 8123776343

ಕೆಲಸಕ್ಕೆ ವಿದ್ಯಾವಂತ ಹುಡುಗಿಯರು ಬೇಕಾಗಿದ್ದಾರೆ
ಮೈಸೂರು ನಗರದ ದಟ್ಟಗಳ್ಳಿಯಲ್ಲಿರುವ ಫೈನಾನ್ಸ್ ಆಫೀಸ್‌ಗೆ ವಿದ್ಯಾವಂತ ಹುಡುಗಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ 2nd PUC Pass ಆಗಿರಬೇಕು ಹಾಗೂ ಕೆಲಸದ ಸಮಯ ಬೆಳಿಗ್ಗೆ 10 ರಿಂದ 6 ರವರೆಗೆ ವೇತನ 15,000 ಸಾವಿರ ರೂಪಾಯಿಗಳು ಸಂಪರ್ಕಿಸುವ ದೂರವಾಣಿ ಸಂಖ್ಯೆ:
7349793374

ಶ್ರೀ ಮಹಾಲಕ್ಷ್ಮೀ ಟ್ರಾವೆಲ್ಸ್
14/11: ಗುಜರಾತ್, ಅಕ್ಷರಧಾಮ, ವೈಷ್ಣೋದೇವಿ, ದ್ವಾರಕ, ಬೆಟ್ ದ್ವಾರಕ, ನಾಗನಾಥ್, ಜ್ಯೋತಿರ್ಲಿಂಗ, ಸೋಮನಾಥ್, ನಿಷ್ಕಳಂಕ್ ಮಹದೇವ, ಸರ್ದಾರ್ ವಲ್ಲಭ ಭಾಯ್ ಪಟೇಲ್ ಸ್ಟ್ಯಾಚ್ಯು. 3/11: ಕಾಶಿ, ಗಯಾ, ಬುದ್ಧಗಯಾ, ಪ್ರಯಾಗ್‌ರಾಜ್, ಅಯೋಧ್ಯೆ. 21/11 : ಪುರಿ ಜಗನ್ನಾಥ್, ಕೋಣಾರ್ಕ್ ಸೂರ್ಯ ದೇವಸ್ಥಾನ, ಚಂದ್ರಭಾಗ ಬೀಚ್. 24/10: ಎಂಪಿ 2 ಜ್ಯೋತಿರ್ಲಿಂಗ, ಉಜ್ಜಯಿನಿ, ಮಹಾಕಾಳೇಶ್ವರ, ಓಂಕಾರೇಶ್ವರ ಜ್ಯೋತಿರ್ಲಿಂಗ. ಸಂಪರ್ಕಿಸಿ:
9591017782, 9964527782

ಮೈಸೂರಿನಲ್ಲಿ ಉದ್ಯೋಗ
SSLC (Pass), PUC, JOC, Any Degree, ITI, M.Com., ಆದಂತಹ ಗ್ರಾಮೀಣ + ನಗರದ ಅಭ್ಯರ್ಥಿಗಳು A.W.B.M. ಬೃಹತ್ ಕಂಪನಿಯೊಂದಕ್ಕೆ ಬೇಕಾಗಿದ್ದಾರೆ. ವಯೋಮಿತಿ: 18 ರಿಂದ 31 ವರ್ಷ. ತಿಂಗಳಿಗೆ: 21,000 – 27,000. (ಉಚಿತ ವಸತಿ + promotion). ಸಂಪರ್ಕಿಸಿ: ಸ್ಫೂರ್ತಿ
9900163228, 9844219943

ಮರುಮದುವೆಗೆ ವಧು ಬೇಕು
44 ವರ್ಷ, 5.8 ಎತ್ತರದ ಡಿಪ್ಲೋಮಾ(ಸಿಎಸ್) ಕಲಿತು, ಶಿಕ್ಷಣ ಇಲಾಖೆಯಲ್ಲಿ (ಸರಕಾರಿ) ಕೆಲಸದಲ್ಲಿರುವ ಬ್ರಾಹ್ಮಣ ವಿಚ್ಛೇದಿತ ವರನಿಗೆ, ಎಸ್‌ಎಸ್‌ಎಲ್‌ಸಿ, ಪಿಯುಸಿ, ಯಾವುದೇ ಡಿಗ್ರಿ ಕಲಿತಿರುವ ಸ್ವಜಾತಿಯ/ ಯಾವುದೇ ಲಿಂಗಾಯಿತ/ವಿಶ್ವಕರ್ಮ/ವಿಧವೆ/ವಿಚ್ಛೇದಿತ ಮಕ್ಕಳಿರದ ಒಳ್ಳೆಯ ಮನೆತನದ ಸಸ್ಯಹಾರಿ ವಧು ಬೇಕು. ಸಂಪರ್ಕಿಸಿ: ಮೈಸೂರು
9591656145

ಹೋಟೆಲ್ ಕೆಲಸಕ್ಕೆ ಶೀಘ್ರವಾಗಿ ಬೇಕಾಗಿದ್ದಾರೆ
* ದೋಸೆ ಭಟ್ಟರು (15,000 ಇಂದ 20,000)
* ರುಬ್ಬುವವರು – 15,000
* ಇಡ್ಲಿ, ವಡೆ, ಪೂರಿ ಹಾಕುವವರು (16,000)
* ಕಾಫಿ, ಟೀ ಮಾಡುವವರು – 15,000
* ಕೌಂಟರ್ ಮತ್ತು ಪಾರ್ಸಲ್ ಕಟ್ಟುವವರು (10,000).
9916256503, 9986205777

ಬೇಕಾಗಿದ್ದಾರೆ
ಕಂಪ್ಯೂಟರ್ ಆಫೀಸ್ ನಲ್ಲಿ "ಸರ್ವೀಸ್ ಎಂಜಿನಿಯರ್ " ಕೆಲಸಕ್ಕೆ, ITI ಅಥವಾ Diploma ಮಾಡಿರುವ, ಕಂಪ್ಯೂಟರ್ ನಲ್ಲಿ ಪರಿಣಿತಿ ಹೊಂದಿರುವ 25 ವರ್ಷದೊಳಗಿನ ದ್ವಿಚಕ್ರ ವಾಹನ ಮತ್ತು ಲೈಸೆನ್ಸ್ ಹೊಂದಿರುವ ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ:
Mob: 9845111623

ವಧು ಬೇಕಾಗಿದ್ದಾರೆ
ಮೈಸೂರಿನ ರೀಟೈಲ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿರುವ 40 ವರ್ಷದ ವರನಿಗೆ ವಧು ಬೇಕಾಗಿದೆ. ಸಂಪರ್ಕಿಸಿ
7019774356

ವಾಸ್ತು ಪ್ರಕಾರ
ಹೊಸದಾಗಿ ಮನೆ ಮತ್ತು ಆಲ್ಟ್ರೇಷನ್ ಕೆಲಸ / ಕನ್‌ಸ್ಟ್ರಕ್ಷನ್ ಮಾಡಿ ಕೊಡಲಾಗುತ್ತದೆ.
ಒಂದು ಚದರಕ್ಕೆ 1,60,000/–
*ಷರತ್ತು ಅನ್ವಯ
ಸ್ವಾಮಿ ಎಂ. ಸಿವಿಲ್ ಕಂಟ್ರಾಕ್ಟರ್
9945442361
9380885787

ಮಾಂತ್ರಿಕ ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ
MOB: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋರ ಶಕ್ತಿಯಿಂದ ಸ್ತ್ರೀ, ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಬಾಧೆ, ಆರೋಗ್ಯ, ಭೂಮಿ, ಕೋರ್ಟ್, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಪರಿಹಾರ ಶತಃಸಿದ್ಧ ಕರೆಮಾಡಿ ಬನ್ನಿ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು.

ಬೇಕಾಗಿದ್ದಾರೆ
SDJ ಗೋಲ್ಡ್ ಜ್ಯುಯಲ್ಲರಿಗೆ ಕೆಲಸಕ್ಕೆ Telecaller ಮತ್ತು Field executive boys ಬೇಕಾಗಿದ್ದಾರೆ.
ಸಂಬಳ: 20,000
9513066625

ಬೇಕಾಗಿದ್ದಾರೆ
ಮೈಸೂರಿನ ಕಾರ್ಖಾನೆಯಲ್ಲಿ ಕೆಲಸ ಮಾಡಲು 7th, SSLC, PUC, ITI ANY TRADE ಪಾಸ್ ಅಥವಾ ಫೇಲ್ ಆದ ಹುಡುಗರು ತಕ್ಷಣ ಬೇಕಾಗಿದ್ದಾರೆ ಹಾಗೂ ಡ್ರೈವರ್‌ಗಳು ಬೇಕಾಗಿದ್ದಾರೆ. ಸಂಪರ್ಕಿಸಿ:
6360394409, 8553934317

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಳಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾಧೇ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾಧೇ, ಆರೋಗ್ಯ ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಃಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

FOR SALE
A) 12x36 G+2 House Kuvempu Nagar 28 Guntas land in Varkodu
B) 30x40 40x60 New RT Nagar attch
C) 30x40 - 12 Lakhs 30x50 15 L sites available attch Brahmins E Block layout.
Prakruthi Properties
90359 90359, 95386 90359

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧು–ವರರನ್ನು ಹುಡುಕಲು ಸಹಾಯಬೇಕೆ? ನಮಗೆ ಕರೆಮಾಡಿ. ಪ್ರತಿದಿನ ವಧು ವರರ ನೇರ ಸಂದರ್ಶನ ಇರುತ್ತದೆ. ಕೂಡಲೇ ನಿಮ್ಮ ಫೋಟೋ & ಬಯೋಡೆಟಾ ವಾಟ್ಸ್‌ಪ್ ಮಾಡಿರಿ. ಡಾ.ಗುರೂಜಿ
ಮೈಸೂರು / ಬೆಂಗಳೂರು
6361740552

ಇಂದೇ ಸಂಪರ್ಕಿಸಿ
ಹೆಬ್ಬಾಳ್, ಹೂಟಗಳ್ಳಿ, ಮೇಟಗಳ್ಳಿ, ಸರಸ್ವತಿಪುರಂ, ನಂಜನಗೂಡು, ಎನ್.ಆರ್.ಮೊಹಲ್ಲಾ, ಮುಂತಾದ ಏರಿಯಾಗಳಲ್ಲಿನ ಕಂಪನಿಗಳಿಗೆ, Office ಗಳಿಗೆ, Showroomಗಳಿಗೆ ಕೆಲಸ ಮಾಡಲು ಯುವಕರು / ಯುವತಿಯರು ಬೇಕಾಗಿದ್ದಾರೆ. Any Qualification (ESI+PF+OT) ಯೊಂದಿಗೆ ಸಂಬಳ: 14,000 – 36,000/–, ಸಂಪರ್ಕಿಸಿ.
9663704915
7892878915

WANTED
SERVICE ENGINEER
B.E/ Diploma/ITI/Mechanical
Kent RO Water Purifier Authorised Service center / Home Appliances
Tellecallers / Office Work-Female
9900237315
9845963421

WANTED
Telecallers (Female)
10th and above, Age 20y- 40y, Earn 7K upto 10K, Data Collection Executive (Male) Earn - 10k to 15k-(Field work). M.R.Associates, Saraswathipuram, Mysore
6364577657

MAX SOLAR FACTORY
We promote National Standard Solar Products
1. Solar Rooftops
2.Solar Street Lights
3. Solar water Heaters
4. Solar UPS
Expert in large solar Projects
Call us 9535608456

SITES FOR SALE
Jnanabharathi Layout 2nd Stage East Facing & South-East Corner Dadadahalli, Muda Khata, East Facing Site No.348, Rs.1900per Sq.ft South East Corner Site No.349 Rs.2000 per Sq.ft
9342123373

ಬೇಕಾಗಿದ್ದಾರೆ
ಫರ್ನಿಶಿಂಗ್ ಅಂಗಡಿಗೆ ಅಕೌಂಟೆಂಟ್ ಕೆಲಸಕ್ಕೆ, ಹುಡುಗಿಯರು ಮಾತ್ರ Tally Experience ಆಗಿರುವವರು 10Am to 7Pm, ಸಂಬಳ: 8000 to 10000 ಸಂಪರ್ಕಿಸಿ
9916459786

PROPERTIES FOR SALE
(30x40) @ Dattagalli 3BHK Duplex House 1.1 Cr.
(40x60) @ Kuvempunagar, Near Shanti Sagar 1.5 Cr.
S.S.Property Services
9342125252

ಹೋಂನರ್ಸಿಂಗ್ ಕೆಲಸ
ಯುವಕ, ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತೆಯರು ಹೋಂನರ್ಸಿಂಗ್ ಕೆಲಸಕ್ಕೆ ಅನುಭವ ಇರುವ / ಇಲ್ಲದಿರುವ ತಕ್ಷಣವೇ ಸಂಪರ್ಕಿಸಿ ಊಟ, ವಸತಿಯೊಂದಿಗೆ ಸಂಬಳ: 12,000 – 21,000 ರವರೆಗೆ, ಆಧಾರ್ ಕಾರ್ಡ್ & ಫೋಟೋ ಕಡ್ಡಾಯ (ಸರ್ಕಾರಿ ನೊಂದಾಯಿತ ಸಂಸ್ಥೆ)
9035113222

ಬೇಕಾಗಿದ್ದಾರೆ
ಚಾಮರಾಜನಗರದಲ್ಲಿ ಲೇಡಿಸ್ ಜಿಮ್ ತರಬೇತಿ ನೀಡಲು ನುರಿತ ಲೇಡಿಸ್ ತರಬೇತುದಾರರು ಮತ್ತು ಯೋಗ ತರಬೇತುದಾರರು ಮತ್ತು GYM. ನರ್ಸಿಂಗ್ ಆಗಿರುವ ಲೇಡಿಸ್ ಬೇಕಾಗಿದ್ದಾರೆ. ಸಂಪರ್ಕಿಸಿ
7019751010
6362100520, 9448804828

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ ಎಂಎನ್‌ಸಿ ಹಾಗೂ ಐಟಿ ಕಂಪನಿಗಳಿಗೆ 4th, ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ ಯಾವುದೇ ಡಿಗ್ರಿ ಪಾಸ್/ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ಇಎಸ್‌ಐ/ಪಿಎಫ್‌ನೊಂದಿಗೆ ಊಟ ವಸತಿ ಸೌಲಭ್ಯವಿರುತ್ತದೆ. ಸಂಬಳ+ಓಟಿ, 15200–86000. ಸಂಪರ್ಕಿಸಿ
9740733021, 9535028750

ಬೇಕಾಗಿದ್ದಾರೆ
ಆಲನಹಳ್ಳಿಯಲ್ಲಿರುವ ಫರ್ನಿಚರ್ ಷೋರೊಂನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ, ವಯೋಮಿತಿ 18–35 ವರ್ಷ ಹತ್ತಿರದವರಿಗೆ ಆದ್ಯತೆ. ಸಂಪರ್ಕಿಸಿ:
9886708736, 9880251675

ತಕ್ಷಣ ಬೇಕಾಗಿದ್ದಾರೆ
ಹೆಬ್ಬಾಳ್, ಮೇಟಗಳ್ಳಿ ಯಾದವಗಿರಿ ಮತ್ತು ಹೂಟಗಳ್ಳಿ ಏರಿಯಾದಲ್ಲಿ ಕೆಲಸಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ, ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು , ಸಂಬಳ: 15,500+W/o (8 hrs) ಊಟ ತಿಂಡಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ
9620667819, 9880727819

ಜಮೀನು ಖರೀದಿಗೆ ಬೇಕಾಗಿದೆ
ಮೈಸೂರಿನಿಂದ 30ಕಿಮಿ. ಒಳಗಡೆ 1 ರಿಂದ 2 ಎಕರೆ ತೋಟ ಅಥವಾ ಖಾಲಿ ಜಮೀನು ಡಾಂಬಾರು ರಸ್ತೆ ಬದಿ ಇರಬೇಕು, ಸಂಪರ್ಕಿಸಿ
7411223692

ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ – ಯುವತಿಯರು ಬೇಕಾಗಿದ್ದಾರೆ. Salary: 13,000 - 21,000 + ESI, PF, ವಿದ್ಯಾರ್ಹತೆ: 10th, PUC, ITI, Diploma and Any Degree. ಇಂದೇ ಸಂಪರ್ಕಿಸಿ:
9035734821

ತಕ್ಷಣ ಬೇಕಾಗಿದ್ದಾರೆ
ಅನುಭವವುಳ್ಳ BE, Civil BE, Mechanical ITI, Diploma
Contact:
Office No. 0821-3502324
Mobile No.: 9945362868

ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ
ಮೈಸೂರಿನ ಬನ್ನೂರು ರಸ್ತೆಯ MNC ಕಂಪನಿಯಲ್ಲಿ (ದೇವೇಗೌಡ ಸರ್ಕಲ್), ಕಡಕೊಳದ, ಸಿಂಧುವಳ್ಳಿ ಹಾಗೂ ಗದ್ದಿಗೆ ರಸ್ತೆಯ ಪೌಲ್ಟ್ರಿ ಫಾರಂನಲ್ಲಿ ಕೆಲಸ ಮಾಡಲು ಅನುಭವವುಳ್ಳ SSLC ಪಾಸಾಗಿರುವ ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಉತ್ತಮ ಸಂಬಳವಿರುತ್ತದೆ.
9035050656, 9035050653

Sudarshan Saur
SOLAR WATER HEATER

ATTRACTIVE OFFER
ಸೇಲ್ಸ್&ಸರ್ವಿಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಸೈಟುಗಳು ಮಾರಾಟಕ್ಕಿದೆ
20x40, 30x40 ಕೇವಲ 5 ಲಕ್ಷ ಮುಂಗಡ ಹಣ ಕಟ್ಟಿ 6 ತಿಂಗಳುಗಳಲ್ಲಿ ಬಾಕಿ ಉಳಿದ ಹಣವನ್ನು ರಿಜಿಸ್ಟ್ರೇಷನ್ ಸಮಯದಲ್ಲಿ ಪಾವತಿಸಿ ನಿಮ್ಮ ಕನಸಿನ ಸೈಟುಗಳನ್ನು ನಿಮ್ಮದಾಗಿಸಿಕೊಳ್ಳಿ, ಮೈಸೂರು Airport ಹತ್ತಿರ.
7624811608
8123915415

ಮೈಸೂರು ಮಿತ್ರ 43 – ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 7 ರಲ್ಲಿ

ನಾಳೆ ಕಾವೇರಿ ನದಿ ಉತ್ಸವ

ಮಡಿಕೇರಿ, ಅ.19– ಜಲಸಂಪನ್ಮೂಲ ಇಲಾಖೆ, ಕಾವೇರಿ ನೀರಾವರಿ ನಿಗಮದ ವತಿಯಿಂದ ಕಾವೇರಿ ನದಿ ಉತ್ಸವ-2022 ಅ21 ರಂದು ನಡೆಯಲಿದೆ.

ಅ.21 ರಂದು ಬೆಳಗ್ಗೆ 8.30 ಗಂಟೆಗೆ ತಲಕಾವೇರಿಯಲ್ಲಿ ಕಾರ್ಯಕ್ರಮ ನಡೆಯಲಿದೆ. ತಲಕಾವೇರಿ ಕ್ಷೇತ್ರದಲ್ಲಿ ಗಣಪತಿ ಮತ್ತು ಈಶ್ವರ ಮಂದಿರದಲ್ಲಿ ಪೂಜೆ, ನಂತರ ಬ್ರಹ್ಮಕುಂಡಿಕೆ ಬಳಿ ಪೂಜೆ, ಗಣ್ಯರಿಂದ ಕಾವೇರಿ ನದಿ ಉತ್ಸವಕ್ಕೆ ಚಾಲನೆ ದೊರೆಯಲಿದೆ. ಕಾವೇರಿ ನದಿ ಸಂರಕ್ಷಣೆ ಬಗ್ಗೆ ಪ್ರತಿಜ್ಞಾ ವಿಧಿ, ಕಾವೇರಿ ನದಿ ಸಂರಕ್ಷಣಾ ಕರಪತ್ರಗಳ ಬಿಡುಗಡೆ, ಗಣ್ಯರಿಂದ ಕಾವೇರಿ ಉತ್ಸವದ ಬಗ್ಗೆ ಸಂದೇಶ.

ಬಳಿಕ ಬೆಳಗ್ಗೆ 11 ಗಂಟೆಗೆ ಭಾಗಮಂಡಲದಲ್ಲಿ ಕಾವೇರಿ ನದಿ ಉತ್ಸವದ ಕಾರ್ಯಕ್ರಮ ನಡೆಯಲಿದೆ. ಭಗಂಡೇಶ್ವರ ಕ್ಷೇತ್ರದಲ್ಲಿ ಪೂಜೆ, ಭಾಗಮಂಡಲ ತ್ರಿವೇಣಿ ಸಂಗಮದಲ್ಲಿ ಜೀವನದಿ ಕಾವೇರಿಗೆ ಮಹಾ ಆರತಿ ಬೆಳಗುವುದು ಮತ್ತು ಮಂತ್ರಘೋಷ ಹಾಗೂ ನಾಗರಿಕರಿಗೆ ನದಿ ಸಂರಕ್ಷಣೆ ಬಗ್ಗೆ ಪ್ರತಿಜ್ಞಾ ವಿಧಿ. ನಂತರ ಮಧ್ಯಾಹ್ನ 3 ಗಂಟೆಗೆ ಕುಶಾಲನಗರದ ಖಾಸಗಿ ಬಸ್ ನಿಲ್ದಾಣದ ಆವರಣದಲ್ಲಿ ಕಾವೇರಿ ನದಿ ಉತ್ಸವದ ಸಭಾ ಕಾರ್ಯಕ್ರಮ ನಡೆಯಲಿದೆ.

ಜಲಸಂಪನ್ಮೂಲ ಸಚಿವರಾದ ಗೋವಿಂದ ಎಂ.ಕಾರಜೋಳ ಅವರು ಉದ್ಘಾಟನೆ ಮಾಡಲಿದ್ದಾರೆ. ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಸಿ.ನಾಗೇಶ್, ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವರಾದ ಶಶಿಕಲಾ ಜೊಲ್ಲೆ, ಸರ್ಕಾರಿ ಜಮೀನುಗಳ ಸಂರಕ್ಷಣಾ ಸಮಿತಿ ಅಧ್ಯಕ್ಷರು ಹಾಗೂ ಶಾಸಕರಾದ ಕೆ.ಜಿ.ಬೋಪಯ್ಯ, ಶಾಸಕರಾದ ಎಂ.ಪಿ.ಅಪ್ಪಚ್ಚುರಂಜನ್, ಮೈಸೂರು ಲೋಕಸಭಾ ಕ್ಷೇತ್ರದ ಸಂಸದರಾದ ಪ್ರತಾಪ್ ಸಿಂಹ, ಹಾಸನ ಲೋಕಸಭಾ ಕ್ಷೇತ್ರದ ಸಂಸದರಾದ ಪ್ರಜ್ವಲ್ ರೇವಣ್ಣ, ಶಾಸಕರಾದ ಎಚ್.ಪಿ.ಮಂಜುನಾಥ್, ಎ.ಟಿ.ರಾಮಸ್ವಾಮಿ, ಸಾ.ರಾ.ಮಹೇಶ್, ಕೆ.ಮಹದೇವ್, ಎಂ.ಪಿ.ಸುಜಾ ಕುಶಾಲಪ್ಪ, ಆಯನೂರು ಮಂಜುನಾಥ್, ಎಸ್.ಎಲ್.ಬೋಜೇಗೌಡ, ಸೂರಜ್ ರೇವಣ್ಣ, ಕರ್ನಾಟಕ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷರಾದ ನಾಪಂಡ ರವಿಕಾಳಪ್ಪ, ಕುಶಾಲನಗರ ಪ.ಪಂ. ಅಧ್ಯಕ್ಷರಾದ ಜಯವರ್ಧನ್, ಭಾಗಮಂಡಲ ಗ್ರಾ.ಪಂ ಅಧ್ಯಕ್ಷರಾದ ಪವಿತಾ ಇತರರು ಪಾಲ್ಗೊಳ್ಳಲಿದ್ದಾರೆ.

ಕುಶಾಲನಗರದ ಅಯ್ಯಪ್ಪಸ್ವಾಮಿ ದೇವಸ್ಥಾನದ ಹತ್ತಿರ ಸಂಜೆ 6 ಗಂಟೆಯಿಂದ ಕಾವೇರಿ ನದಿ ಉತ್ಸವದ ಕಾರ್ಯಕ್ರಮ ನಡೆಯಲಿದೆ. ಮಂತ್ರ ಘೋಷ, ಆರತಿ ಕಾರ್ಯಕ್ರಮ, ನದಿ ಆರತಿ ಕ್ಷೇತ್ರ, ಕಾವೇರಿ ನದಿ ದಡ.

ಪೆಟ್ರೋಲ್ ಬಾಂಬ್ ಪ್ರಕರಣ: ಎನ್‌ಐಎನಿಂದ ತನಿಖೆಯಾಗಲಿ

ಮಡಿಕೇರಿ,ಅ.19– ಪೆಟ್ರೋಲ್ ಬಾಂಬ್ ಸ್ಫೋಟಿಸುವ ಕುರಿತು ನಗರಸಭಾ ಸದಸ್ಯ ಮುಸ್ತಫ ಹಾಗೂ ಬೆಟ್ಟಗೇರಿಯ ಉದ್ಯಮಿ ಅಬ್ದುಲ್ಲ ಅವರ ನಡುವೆ ನಡೆದಿರುವ ಮೊಬೈಲ್ ಸಂಭಾಷಣೆ ಹಾಗೂ ಇದರ ಹಿಂದೆ ಅಡಗಿರುವ ಶಕ್ತಿಗಳ ವಿರುದ್ಧ ಎನ್‌ಐಎ ಮೂಲಕ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕೆಂದು ಜಿಲ್ಲಾ ಬಿಜೆಪಿ ವಕ್ತಾರ ಮಹೇಶ್ ಜೈನಿ ಒತ್ತಾಯಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು ಮಡಿಕೇರಿ ನಗರದ 50 ಭಾಗಗಳಲ್ಲಿ ಪೆಟ್ರೋಲ್ ಬಾಂಬ್ ಸ್ಫೋಟಿಸುವುದಲ್ಲದೆ, ಇದಕ್ಕಾಗಿ 50 ರಿಂದ 1 ಲಕ್ಷ ರೂ.ಗಳವರೆಗೆ ಹಣ ಸಂಗ್ರಹಿಸುವ ಕುರಿತೂ ಪ್ರಸ್ತಾಪಿಸಲಾಗಿದೆ. ಇದು ಅತ್ಯಂತ ಆತಂಕಕಾರಿ ಬೆಳವಣಿಗೆಯಾಗಿದ್ದು, ಪೊಲೀಸರು ಪ್ರಕರಣವನ್ನು ಲಘುವಾಗಿ ಪರಿಗಣಿಸಬಾರದು. ಬದಲಿಗೆ ಇದರ ಹಿಂದಿರುವ ಷಡ್ಯಂತ್ರವನ್ನು ಪತ್ತೆ ಹಚ್ಚಿ ಮುಂದೆ ಎದುರಾಗಬಹುದಾದ ಅನಾಹುತವನ್ನು ತಪ್ಪಿಸಬೇಕೆಂದು ಆಗ್ರಹಿಸಿದ್ದಾರೆ.

ಇಬ್ಬರನ್ನು ತೀವ್ರ ತನಿಖೆಗೆ ಒಳಪಡಿಸಿದರೆ ಮತ್ತಷ್ಟು ಪ್ರಕರಣಗಳು ಬಯಲಿಗೆ ಬರುವ ಸಾಧ್ಯತೆಗಳಿದೆ. ಜನರಿಂದ ಆಯ್ಕೆಯಾದ ಜನಪ್ರತಿನಿಧಿಯೊಬ್ಬ ಅಮಾಯಕ ಜನರ ಮೇಲೆ ಪೆಟ್ರೋಲ್ ಬಾಂಬ್ ಸ್ಫೋಟಿಸುವ ಮಾತನಾಡಿರುವುದು ಆತನ ಕ್ರೂರ ಮನಸ್ಥಿತಿಗೆ ಸಾಕ್ಷಿಯಾಗಿದೆ ಎಂದು ಆರೋಪಿಸಿದ್ದಾರೆ. ಜೆಡಿಎಸ್ ಪಕ್ಷ ಉದ್ದೇಶಪೂರ್ವಕವಾಗಿಯೇ ಇಂತಹ ವ್ಯಕ್ತಿಗಳನ್ನು ಸೃಷ್ಟಿಸುತ್ತಿದೆಯೇ ಎಂದು ಮಹೇಶ್ ಜೈನಿ ಪ್ರಶ್ನಿಸಿದ್ದಾರೆ.

ಇದೀಗ ನಗರಸಭಾ ಸದಸ್ಯನೊಬ್ಬ ಹಿಂದೂಗಳ ಮೇಲೆ ಪೆಟ್ರೋಲ್ ಬಾಂಬ್ ಸ್ಫೋಟಿಸುವ ಬೆದರಿಕೆಯೊಡ್ಡಿದ್ದು, ಈ ಬಗ್ಗೆ ಪಕ್ಷದ ವರಿಷ್ಠ ಹೆಚ್.ಡಿ.ಕುಮಾರಸ್ವಾಮಿ ಸ್ಪಷ್ಟನೆ ನೀಡಬೇಕೆಂದು ಮಹೇಶ್ ಜೈನಿ ಒತ್ತಾಯಿಸಿದ್ದಾರೆ.

ಹಿಂದೂಗಳೊಂದಿಗೆ ಅನ್ಯೋನ್ಯತೆಯಿಂದ ಇರುವಂತೆ ನಾಟಕವಾಡಿ ಪಿತೂರಿ ನಡೆಸುತ್ತಿರುವ ಗೋಮುಖ ವ್ಯಾಘ್ರಗಳ ಅನೇಕ ಪ್ರಕರಣಗಳು ಬೆಳಕಿಗೆ ಬರುತ್ತಿದೆ. ಮುಸ್ತಫ ಹಾಗೂ ಅಬ್ದುಲ್ಲ ಕೂಡ ಇದೇ ಮಾದರಿಯ ವ್ಯಕ್ತಿಗಳಾಗಿದ್ದಾರೆ ಎಂದು ಆರೋಪಿಸಿರುವ ಅವರು, ಹಿಂದೂಗಳು ನಯವಂಚಕರ ಬಗ್ಗೆ ಎಚ್ಚರಿಕೆಯಿಂದ ಇರಬೇಕೆಂದು ಮನವಿ ಮಾಡಿದ್ದಾರೆ. ವಿನಾಕಾರಣ ಕೊಡಗಿನಲ್ಲಿ ಅಶಾಂತಿ ಸೃಷ್ಟಿಸುವ ಷಡ್ಯಂತ್ರಗಳು ಮರುಕಳಿಸುತ್ತಲೇ ಇದ್ದು, ಎನ್‌ಐಎ ತನಿಖೆ ತೀವ್ರಗೊಳ್ಳಬೇಕೆಂದು ಮಹೇಶ್ ಜೈನಿ ಒತ್ತಾಯಿಸಿದ್ದಾರೆ.

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯಲ್ಲಿ ತೃಪ್ತಿದಾಯಕ ಕೆಲಸ

ನಿರ್ಗಮಿತ ಅಕಾಡೆಮಿಯ ಅಧ್ಯಕ್ಷೆ ಡಾ. ಅಮ್ಮಾಟಂಡ ಪಾರ್ವತಿ ಅಪ್ಪಯ್ಯ

ಮಡಿಕೇರಿ,ಅ.19– ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ 3 ವರ್ಷಗಳ ಅಧಿಕಾರದ ಅವಧಿಯಲ್ಲಿ ಸಾಹಿತ್ಯ, ಸಂಶೋಧನೆ ಮತ್ತು ಅಧ್ಯಯನ ಕ್ಷೇತ್ರಗಳಲ್ಲಿ ಸಾಕಷ್ಟು ಕೆಲಸಗಳನ್ನು ಮಾಡಿರುವ ತೃಪ್ತಿ ತಮಗಿದೆ ಎಂದು ಅಕಾಡೆಮಿಯ ನಿರ್ಗಮಿತ ಅಧ್ಯಕ್ಷೆ ಡಾ. ಅಮ್ಮಾಟಂಡ ಪಾರ್ವತಿ ಅಪ್ಪಯ್ಯ ತಿಳಿಸಿದ್ದಾರೆ. ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಆಡಳಿತ ಮಂಡಳಿಯ ಅಧಿಕಾರದ ಅವಧಿ ಇದೇ ಅ.15ರಂದು ಕೊನೆಗೊಂಡಿರುವ ಹಿನ್ನೆಲೆ, ತಮ್ಮ ಅವಧಿಯಲ್ಲಿ ನಡೆದಿರುವ ಸಾಧನೆಗಳ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಅನುದಾನಗಳ ಕೊರತೆಯ ನಡುವೆಯೂ ಅಕಾಡೆಮಿಯಿಂದ 88 ಪುಸ್ತಕಗಳನ್ನು ಹೊರ ತರಲಾಗಿದೆ. 21 ವಿವಿಧ ವಿಷಯಗಳ ಸಂಶೋಧನೆಗಳನ್ನು ನಡೆಸಲಾಗಿದ್ದು, ಇವುಗಳಲ್ಲಿ 16 ಸಂಶೋಧನಾ ಪ್ರಬಂಧಗಳನ್ನು ಹೊರ ತರಲಾಗಿದೆ ಎಂದು ಹೆಮ್ಮೆಯಿಂದ ನುಡಿದರು. ಕುವೆಂಪು ಭಾಷಾ ಭಾರತೀಯ ಮೂಲಕ ಕೊಡವ ಜಯಾ ಭಾರತ ಮಹಾಕಾವ್ಯವನ್ನು ನಾಗೇಶ್ ಅವರು ಕನ್ನಡಕ್ಕೆ ಹಾಗೆಯೇ, ತಮಿಳಿನ ಮಹಾ ಕಾವ್ಯ ತಿರುಕ್ಕುರಳ್‌ನ್ನು ಡಾ.ಮುಲ್ಲೇಂಗಡ ರೇವತಿ ಪೂವಯ್ಯ ಅವರು ಕೊಡವ ಭಾಷೆಗೆ ಅನುವಾದಿಸಿದ್ದಾರೆಂದು ಮಾಹಿತಿ ನೀಡಿದರು.



ಶಬ್ದಕೋಶ ಮಹತ್ಕಾರ್ಯ: ಅಕಾಡೆಮಿ ತನ್ನ ಅಧಿಕಾರದ ಅವಧಿಯಲ್ಲಿ ಕೊಡವ-ಕನ್ನಡ, ಹಿಂದಿ, ಇಂಗ್ಲೀಷ್ 'ಕೊಡವ ಶಬ್ದ ಕೋಶ'ವನ್ನು ಹೊರ ತಂದಿದೆ. ಇದು ಕೊಡವ ಭಾಷಾ ಕಲಿಕೆಗೆ ಅತ್ಯಂತ ಉಪಯುಕ್ತವಾಗಿದೆ ಎಂದು ತಿಳಿಸಿದ ಪಾರ್ವತಿ ಅಪ್ಪಯ್ಯ, ಇಂತಹ ಮಹತ್ತರ ಕಾರ್ಯಗಳಿಂದ ಅಕಾಡೆಮಿ ಕೊಡವ ಭಾಷಾ ಸಾಹಿತ್ಯ ಸಂಸ್ಕೃತಿಯನ್ನು ಪ್ರತಿಯೊಬ್ಬರಿಗೆ ತಲುಪಿಸುವ ಪ್ರಾಮಾಣಿಕ ಪ್ರಯತ್ನ ನಡೆಸಿದೆ ಎಂದು ಹೇಳಿದರು.

ಕಲಿಕೆಯಲ್ಲಿ ಕೊಡವ: ಅಕಾಡೆಮಿಯ ಮೂಲಕ 'ಕೊಡವ ಭಾಷೆ'ಯನ್ನು ಶಾಲಾ ಪಠ್ಯ ಕ್ರಮದಲ್ಲಿ ತರುವ ಪ್ರಯತ್ನಗಳ ಫಲವಾಗಿ ಇಂದು ಪೊನ್ನಂಪೇಟೆ ಅಪ್ಪಚ್ಚಕವಿ ವಿದ್ಯಾಲಯದಲ್ಲಿ 1 ರಿಂದ 5ನೇ ತರಗತಿ ವರೆಗೆ ಕೊಡವ ಭಾಷಾ ಕಲಿಕೆಗೆ ಅವಕಾಶ ನೀಡಲಾಗಿದೆ. ಮತ್ತಷ್ಟು ಶಾಲೆಗಳು ಕೊಡವ ಭಾಷಾ ಕಲಿಕೆಗೆ ಆಸಕ್ತಿಯನ್ನು ತೋರಿವೆ. ಮಂಗಳೂರು ವಿ.ವಿ.ಗೆ ಒಳಪಡುವ ಗೋಣಿಕೊಪ್ಪಲು ಕಾವೇರಿ ಕಾಲೇಜಿನಲ್ಲಿ ಕೊಡವ ಭಾಷೆಯನ್ನು ಐಚ್ಛಿಕ ವಿಷಯವನ್ನಾಗಿ ಕಲಿಕೆಗೆ ಅವಕಾಶ ನೀಡಲಾಗಿದ್ದು, ಈಗಾಗಲೆ 15 ಮಕ್ಕಳು ಕೊಡವ ಭಾಷೆಯನ್ನು ಆಯ್ಕೆಮಾಡಿಕೊಂಡಿರು ವುದಾಗಿ ಅವರು ಮಾಹಿತಿ ನೀಡಿದರು. ಕೊಡವ ಭಾಷೆಯ ಕಲಿಕೆಗೆ ಪೂರಕವಾಗಿ ಅಕಾಡೆಮಿ ಪದವಿ ವಿಭಾಗಕ್ಕೆ ಸಂಬಂಧಿಸಿದಂತೆ 20 ಪಠ್ಯ ಪುಸ್ತಕಗಳನ್ನು ರಚಿಸಿಕೊಟ್ಟಿದೆ ಯಾದರೆ, ಮಡಿಕೇರಿಯ ಫೀ.ಮಾ. ಕೆ.ಎಂ.ಕಾರ್ಯಪ್ಪ ಕಾಲೇಜಿನಲ್ಲಿ ಕೊಡವ ಭಾಷಾ ಸ್ನಾತಕೋತ್ತರ ಶಿಕ್ಷಣ ಆರಂಭವಾಗಿದ್ದು, 9 ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಇದಕ್ಕಾಗಿ 25 ಪಠ್ಯ ಪುಸ್ತಕಗಳನ್ನು ರಚಿಸಲಾಗಿದೆ ಎಂದು ಡಾ. ಪಾರ್ವತಿ ಅಪ್ಪಯ್ಯ ಮಾಹಿತಿ ಒದಗಿಸಿದರು.

ಕೊಡವ ಲಿಪಿ ತಯಾರಿ: ಕೊಡವ ಭಾಷೆಯನ್ನು ಸಂವಿಧಾನದ 8ನೇ ಪರಿಚ್ಛೇದಕ್ಕೆ ಒಳಪಡಿಸಬೇಕೆನ್ನುವ ಪ್ರಯತ್ನಗಳು ನಡೆಯುತ್ತಿದೆ. ಒಂದು ಭಾಷೆ 8ನೇ ಪರಿಚ್ಛೇದಕ್ಕೆ ಒಳಪಡಲು ಕೆಲವು ಮಾನದಂಡಗಳಿದ್ದು, ಅದನ್ನು ಪೂರೈಸುವ ನಿಟ್ಟಿನಲ್ಲಿ ಕೊಡವ ಲಿಪಿಯ ಬಗ್ಗೆಯೂ ಅಕಾಡೆಮಿ ಕೆಲಸ ಮಾಡಿದೆ. ಅಕಾಡೆಮಿಯು ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಲ್ಯಾಂಗ್ವೇಜಸ್‌ನೊಡನೆ ಪತ್ರ ವ್ಯವಹಾರವನ್ನು ನಡೆಸಿದೆ. ಇದರೊಂದಿಗೆ ಡಾ. ಐ.ಮಾ. ಮುತ್ತಣ್ಣ ಅವರು ನೀಡಿರುವ ಕೊಡವ ಲಿಪಿಯನ್ನು ಅಕಾಡೆಮಿ ಅನುಮೋದಿಸಿ, ಲಿಪಿಯನ್ನು ಕಲಿಯಲು ಪುಸ್ತಕವನ್ನು ರಚಿಸಿರುವುದಾಗಿ ಡಾ. ಪಾರ್ವತಿ ಅಪ್ಪಯ್ಯ ವಿವರಿಸಿದರು.

ಕೊಡವ ಭಾಷಾ ಸಂಸ್ಕೃತಿಯನ್ನು ಬೆಳೆಸುವ ನಿಟ್ಟಿನಲ್ಲಿ ಭಾಷೆಯ ಬಳಕೆ ಹೆಚ್ಚಾಗಬೇಕಾದುದು ಅವಶ್ಯ. ಪ್ರತಿಯೊಬ್ಬರು ಕೊಡವ ಭಾಷೆಯನ್ನು ಮಾತನಾಡುವಂತೆ ಪ್ರೇರೇಪಿಸುವ ಸವಾಲನ್ನು ಅಕಾಡೆಮಿ ಎದುರಿಸಿ, ಆ ನಿಟ್ಟಿನ ಪ್ರಯತ್ನಗಳನ್ನು ನಡೆಸಿದ ಫಲವಾಗಿ ಇಂದು ಕೊಡವ ಭಾಷೆಯ ಬಳಕೆಯ ಬಗ್ಗೆ ಕಾಳಜಿ ಮೂಡುತ್ತಿದೆ ಎಂದು ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಅಕಾಡೆಮಿಯ ಮಾಜಿ ಸದಸ್ಯರಾದ ಗೌರಮ್ಮ ಮಾದಮ್ಮಯ್ಯ, ಮಾಚಿಮಾಡ ಜಾನಕಿ ಮಾಚಯ್ಯ, ಬಬ್ಬೀರ ಸರಸ್ವತಿ, ಮಾನಿಗೆರೆ ಶಂಭಯ್ಯ ಮತ್ತು ತೇಲಪಂಡ ಕವನ್ ಕಾರ್ಯಪ್ಪ ಉಪಸ್ಥಿತರಿದ್ದರು.

ಬಾಲಕಿ ದಿವ್ಯಾ ಹತ್ಯೆ ಆರೋಪಿಗೆ ಗಲ್ಲು ಶಿಕ್ಷೆಯೇ ತಕ್ಕಶಾಸ್ತ್ರಿ: ಮಾಜಿ ಸಿಎಂ ಸಿದ್ದರಾಮಯ್ಯ ಆಗ್ರಹ

ಮಳವಳ್ಳಿ,ಅ.19– ಶಿಕ್ಷಕನಿಂದ ಅತ್ಯಾಚಾರಕ್ಕೊಳಗಾಗಿ ಹತ್ಯೆಗೀಡಾದ ದಿವ್ಯಾ ಕುಟುಂಬವನ್ನು ಭೇಟಿ ಮಾಡಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಾಂತ್ವನ ಹೇಳಿದರು.

ಮಳವಳ್ಳಿ ಪಟ್ಟಣದಲ್ಲಿನ ದಿವ್ಯ ಕುಟುಂಬಸ್ಥರನ್ನು ಭೇಟಿ ಮಾಡಿ ಸಾಂತ್ವನ ಹೇಳಿದ ಅವರು, ಎರಡು ಲಕ್ಷ ಪರಿಹಾರ ನೀಡಿದರು. ಈ ಸಂದರ್ಭದಲ್ಲಿ ಮೃತ ಕುಟುಂಬದ ಆಕ್ರಂದನ ಮುಗಿಲು ಮುಟ್ಟಿತ್ತು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಾಲಕಿ ಹತ್ಯೆ ಮಾಡಿದ ಆರೋಪಿಗೆ ಮರಣದಂಡನೆ ಯೋಗ್ಯ ಶಿಕ್ಷೆ. ಪ್ರಾಣಿಗಳು, ರಾಕ್ಷಸರು ಕೂಡ ಈ ರೀತಿ ಕೃತ್ಯ ಮಾಡಲ್ಲ. ಯಾವ ಹೆಣ್ಣು ಮಕ್ಕಳಿಗೂ ಈ ತರಹ ಆಗಬಾರದು. ಆರೋಪಿಗೆ ಮರಣದಂಡನೆ ವಿಧಿಸಬೇಕು ಎಂದು ಆಗ್ರಹಿಸಿದರು.

ಅವನು ಪ್ರಾಣಿ ಇದ್ದ ಹಾಗೆ. ಆ ತರಹದ ಪ್ರಾಣಿಗೆ ಸಮಾಜದಲ್ಲಿ ಉಳಿಗಾಲ ಇಲ್ಲ. ಅಂತಹವರನ್ನು ಉಳಿಸಬಾರದು ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಮಾಜಿ ಸಚಿವರಾದ ಎನ್. ಚಲುವರಾಯಸ್ವಾಮಿ, ಪಿ.ಎಂ. ನರೇಂದ್ರಸ್ವಾಮಿ ಸೇರಿದಂತೆ ಹಲವರು ಇದ್ದರು.

ಇದಕ್ಕೂ ಮುನ್ನ ಶಾಸಕ ಜಮೀರ್ ಅಹ್ಮದ್ ಮೃತ ಬಾಲಕಿ ಕುಟುಂಬದ ಮನೆಗೆ ಭೇಟಿ ನೀಡಿ, ಸಾಂತ್ವನ ಹೇಳಿ, ಐದು ಲಕ್ಷ ರೂ. ಪರಿಹಾರ ನೀಡಿ, ಬಾಲಕಿಯನ್ನು ವಾಪಸ್ ಕೊಡುವ ಶಕ್ತಿ ನನಗಿಲ್ಲ. ನಿಮ್ಮ ಕುಟುಂಬಕ್ಕೆ ನನ್ನ ಅಳಿಲು ಸೇವೆ ಎಂದು ಹೇಳಿದರು.

ಸರ್ಕಾರದಿಂದ ರೂ.10 ಲಕ್ಷ ನೆರವು: ಪಟ್ಟಣದಲ್ಲಿ ಇತ್ತೀಚಿಗೆ ನಡೆದ ಪೈಶಾಚಿಕ ಕೃತ್ಯದಲ್ಲಿ ಅತ್ಯಾಚಾರಕ್ಕೆ ಒಳಗಾಗಿ ಹತ್ಯೆಗೀಡಾದ 10 ವರ್ಷದ ಬಾಲಕಿ ದಿವ್ಯಾ ಕುಟುಂಬಕ್ಕೆ ಮುಖ್ಯಮಂತ್ರಿ ಪರಿಹಾರ ನಿಧಿಯಿಂದ 10 ಲಕ್ಷ ರೂ. ಬಿಡುಗಡೆ ಮಾಡಿದ ಚೆಕ್‌ನ್ನು ಅಬಕಾರಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಕೆ. ಗೋಪಾಲಯ್ಯ, ಸಂಸದೆ ಸುಮಲತಾ ಅಂಬರೀಶ್, ಶಾಸಕ ಡಾ.ಕೆ. ಅನ್ನದಾನಿ, ವಿತರಣೆ ಮಾಡಿದರು.



ನಂತರ ಸುದ್ದಿಗಾರರೊಂದಿಗೆ ಸಚಿವ ಕೆ. ಗೋಪಾಲಯ್ಯ ಮಾತನಾಡಿ, ಇದೊಂದು ಅಮಾನವೀಯ ಘಟನೆ, ಇಂತಹ ಪೈಶಾಚಿಕ ಕೃತ್ಯ ಎಸಗಿ ಹತ್ಯೆ ಮಾಡಿದ ಆರೋಪಿಗೆ ಕಠಿಣ ಶಿಕ್ಷೆ ವಿಧಿಸುವಂತೆ ನ್ಯಾಯಾಲಯವನ್ನು ಕೋರಲಾಗುವುದು ಎಂದರು.

ಪೋಕ್ಸೋ ಕಾಯಿದೆಗೆ ತಿದ್ದುಪಡಿಯನ್ನು ಮಾಡಿ ಆರೋಪಿಗಳಿಗೆ ಕಠಿಣ ಶಿಕ್ಷೆಯಾಗುವಂತೆ ಸರ್ಕಾರ ಕ್ರಮ ಕೈಗೊಳ್ಳಲಿದೆ, ಇಂತಹ ಘೋರ ಅಪರಾಧ ಎಸಗುವ ವ್ಯಕ್ತಿಗಳಿಗೆ ಕಠಿಣ ಶಿಕ್ಷೆ ವಿಧಿಸುವ ಮೂಲಕ ಅವರಿಗೆ ಎಚ್ಚರಿಕೆಯನ್ನು ನೀಡಿ, ಈ ರೀತಿ ಹೀನ ಕೃತ್ಯಗಳು ಆಗದಂತೆ ತಡೆಗಟ್ಟಲು ಸರ್ಕಾರ ಕ್ರಮಕೈಗೊಳ್ಳಲಿದೆ ಎಂದರು.

ಶಾಸಕ ಡಾ.ಕೆ. ಅನ್ನದಾನಿ ಮಾತನಾಡಿ, ಇದು ಅಮಾನುಷವಾದ ಹತ್ಯೆಯಾಗಿದೆ, ಬಾಲಕಿ ದಿವ್ಯಾಳ ಕುಟುಂಬ ಕಣ್ಣೀರಿನಲ್ಲಿ ಮುಳುಗಿದೆ, ಅವರಿಗೆ ದುಃಖ ಭರಿಸುವ ಶಕ್ತಿಯನ್ನು ಆ ಕುಟುಂಬಕ್ಕೆ ಭಗವಂತ ನೀಡಲಿ, ಅತೀ ಶೀಘ್ರದಲ್ಲಿ ಪಟ್ಟಣದ ವೃತ್ತವೊಂದಕ್ಕೆ ಬಾಲಕಿ ದಿವ್ಯಾ ಹೆಸರಿಡಲು ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಅಶ್ವಥಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್. ಯತೀಶ್, ಮಾಜಿ ಸಚಿವ ಬಿ.ಸೋಮಶೇಖರ್, ಬಿಜೆಪಿ ಮುಖಂಡರಾದ ಮುನಿರಾಜು, ಯಮದೂರು ಸಿದ್ದರಾಜು, ಇತರರು ಹಾಜರಿದ್ದರು.

ಅ.23, ಸಿಗ್ನೇಚರ್ ಲಲಿತ ಪ್ರಬಂಧ ಸಂಕಲನ ಬಿಡುಗಡೆ

ಮಂಡ್ಯ, ಅ.19– ಚಿರಂತ ಪ್ರಕಾಶನದ ವತಿಯಿಂದ ಅ.23ರ ಭಾನುವಾರ ಬೆಳಗ್ಗೆ 10.30ಕ್ಕೆ ಮಂಡ್ಯ ಜಿ.ಪಂ ಎದುರುಗಿರುವ ಪ್ರೇಮ್ ಚಂದ್ ಹಿಂದಿ ಭವನದ ಸಭಾಂಗಣದಲ್ಲಿ ಲೇಖಕಿ ಡಾ.ಸುಮಾರಾಣಿ ಶಂಭುರವರ 'ಆಧುನಿಕ ಮಹಿಳಾ ಕಾವ್ಯ –ಪುರಾಣ ಸ್ತ್ರೀ ದರ್ಶನ' ಸಂಶೋಧನಾ ಕೃತಿ ಹಾಗೂ ಸಿಗ್ನೇಚರ್ ಲಲಿತ ಪ್ರಬಂಧಗಳ ಸಂಕಲನದ ಲೋಕಾರ್ಪಣಾ ಕಾರ್ಯಕ್ರಮ ನಡೆಯಲಿದೆ ಎಂದು ಚಿರಂತ ಪ್ರಕಾಶನದ ಅಧ್ಯಕ್ಷರಾದ ಕಬ್ಬನಹಳ್ಳಿ ಶಂಭು ತಿಳಿಸಿದರು.


ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಖ್ಯಾತ ಲೇಖಕರು, ಸಿನಿಮಾ ವಿಮರ್ಶಕ ಜೋಗಿರವರು ಎರಡೂ ಕೃತಿಗಳನ್ನು ಬಿಡುಗಡೆ ಮಾಡಲಿದ್ದು ಕನ್ನಡ ಸಾಹಿತ್ಯ ಪರಿಷತ್‌ನ ಮಾಜಿ ಅಧ್ಯಕ್ಷರಾದ ಮೀರಾ ಶಿವಲಿಂಗಯ್ಯರವರು ಅಧ್ಯಕ್ಷತೆ ವಹಿಸಲಿದ್ದಾರೆ. ಪ್ರೊ.ಜಿ.ಟಿ. ವೀರಪ್ಪ ಆಧುನಿಕ ಮಹಿಳಾ ಕಾವ್ಯ ಪುರಾಣ ಸ್ತ್ರೀ ದರ್ಶನ ಸಂಶೋಧನಾ ಕೃತಿ ಬಗ್ಗೆ ಮಾತನಾಡಲಿದ್ದು, ವಿಶ್ರಾಂತ ಪ್ರಾಂಶುಪಾಲ ಪ್ರೊ.ಎಸ್.ಬಿ.ಶಂಕರಗೌಡ ಸಿಗ್ನೇಚರ್ ಲಲಿತ ಪ್ರಬಂಧದ ಬಗ್ಗೆ ಮಾತನಾಡಲಿದ್ದಾರೆ ಎಂದರು.

ಕಾವ್ಯ ಕ್ಷೇತ್ರದಲ್ಲಿ ಮಹಿಳೆಯರ ತೊಡಗಿಸಿಕೊಳ್ಳುವಿಕೆ ಕಡಿಮೆಯಾಗುತ್ತಿದ್ದು ಈ ಹಿನ್ನೆಲೆಯಲ್ಲಿ ಸ್ತ್ರೀಯರಿಗೆ ಹೆಚ್ಚಿನ ಪ್ರೋತ್ಸಾಹ ಮತ್ತು ಸಹಕಾರ ನೀಡಬೇಕಿದೆ ಸುಮಾರಾಣೀರವರು 16ನೇ ವಯಸ್ಸಿನಲ್ಲಿ ಸಾಹಿತ್ಯಕೃಷಿ ಆರಂಭಿಸಿ, ಇದುವರೆಗೆ 13 ಕೃತಿಗಳನ್ನು ರಚಿಸಿದ್ದಾರೆ. ಜಿಲ್ಲೆಯ ಲೇಖಕಿಯರಲ್ಲಿ ಪ್ರಥಮ ಸ್ಥಾನದಲ್ಲಿದ್ದಾರೆ ಎಂದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್‌ನ ಮಾಜಿ ಅಧ್ಯಕ್ಷ ಪ್ರೊ.ಜಿ.ಟಿ.ವೀರಪ್ಪ ಮಾತನಾಡಿ, ಸುಮಾರಾಣಿರವರ ಸಂಶೋಧನಾ ಕೃತಿ ಆಕರ ಗ್ರಂಥವಾಗಲಿದ್ದು, ಸಂಶೋಧಕರಿಗೆ ಮಾರ್ಗದರ್ಶನವಾಗಲಿದೆ ಎಂದರು.

ಲೇಖಕಿ ಡಾ.ಸುಮಾರಾಣಿ ಶಂಭು ಮಾತನಾಡಿ, ಮಹಿಳಾ ಕಾವ್ಯದಲ್ಲಿ ಪುರಾಣ ಸ್ತ್ರೀಯರು ಯಾವ ರೀತಿಯಲ್ಲಿ ಪ್ರತಿಭಟನಾತ್ಮಕ ಶಕ್ತಿಯಾಗಿ ಮೂಡಿದ್ದಾರೆ ಎಂಬುದನ್ನು ಕೃತಿಯಲ್ಲಿ ಹಲವು ನೆಲೆಯಲ್ಲಿ ಸಂಶೋಧನೆ ಮಾಡಲಾಗಿದೆ ಎಂದರು.

ನುಡಿದಂತೆ ನಡೆದಿದ್ದೇನೆ: ಸಂಸದೆ ಸುಮಲತಾ ಅಂಬರೀಶ್



ಪಾಂಡವಪುರ, ಅ.19– ಕೊಟ್ಟ ಮಾತಿನಂತೆ ಜಿಲ್ಲೆಯ ಎರಡು ಸಕ್ಕರೆ ಕಾರ್ಖಾನೆಗಳ ಆರಂಭ ಹಾಗೂ ಅಕ್ರಮ ಕಲ್ಲು ಗಣಿಗಾರಿಕೆ ಸ್ಥಗಿತಗೊಳಿಸಲು ಹೋರಾಟ ನಡೆಸಿರುವುದಾಗಿ ಸಂಸದೆ ಸುಮಲತಾ ಅಂಬರೀಶ್ ಹೇಳಿದರು.

ಪಟ್ಟಣದ ಟಿಎಪಿಸಿಎಂಎಸ್ ರೈತ ಸಭಾಂಗಣದಲ್ಲಿ ಮಂಗಳವಾರ ರಾತ್ರಿ ನಡೆದ ರೈತ ಸಂಘದ ಕಾರ್ಯಕರ್ತರ ಸಮಾಲೋಚನಾ ಸಭೆಯಲ್ಲಿ ಅವರು ಮಾತನಾಡಿದರು.

ಕೆಆರ್‌ಎಸ್ ಅಣೆಕಟ್ಟೆಯ ಉಳಿವಿಗಾಗಿ ಅಕ್ರಮ ಕಲ್ಲುಗಣಿಗಾರಿಕೆ ವಿರುದ್ಧ ಹೋರಾಟ ನಡಸುತ್ತಿದ್ದೇನೆ. ಕಲ್ಲು ಗಣಿಗಾರಿಕೆ ನಡೆಸಿರುವ ಸಾಕಷ್ಟು ಗಣಿ ಮಾಲೀಕರು ಸರ್ಕಾರಕ್ಕೆ ಕೋಟ್ಯಾಂತರ ರೂ. ರಾಯಲ್ಟಿಯನ್ನು ಕಟ್ಟದೆ ವಂಚಿಸಿದ್ದಾರೆ. ಅಕ್ರಮ ಕಲ್ಲುಗಣಿಗಾರಿಕೆಯಲ್ಲಿ ಸಾಕಷ್ಟು ಮಂದಿ ಅಧಿಕಾರಿಗಳು ಸಹ ಶಾಮೀಲಾಗಿದ್ದಾರೆ ಎಂದು ಆರೋಪಿಸಿದರು.

ಲೋಕಸಭಾ ಚುನಾವಣೆಯ ಗೆಲುವಿನಲ್ಲಿ ಜಿಲ್ಲೆಯ ರೈತಸಂಘದ ಕಾರ್ಯಕರ್ತರ ಪಾತ್ರ ಪ್ರಮುಖವಾಗಿದೆ. ಹಾಗಾಗಿ ರೈತರ ಋಣ ತೀರಿಸಬೇಕು ಎಂಬ ಉದ್ದೇಶದಿಂದ ರೈತಸಂಘದವರು ಒತ್ತಾಯಿಸಿದ ಜಿಲ್ಲೆಯ ಎರಡು ಕಾರ್ಖಾನೆಗಳ ಆರಂಭ ಹಾಗೂ ಅಕ್ರಮ ಕಲ್ಲು ಗಣಿಗಾರಿಕೆಯ ವಿರುದ್ಧ ಪಾರ್ಲಿಮೆಂಟ್‌ನಲ್ಲಿ ಚರ್ಚಿಸಿದ್ದೇನೆ. ಅದರಂತೆ ಜಿಲ್ಲೆಯ ಎರಡು ಸಕ್ಕರೆ ಕಾರ್ಖಾನೆಗಳು ಆರಂಭಗೊಂಡಿವೆ, ಮೈಶುಗರ್ ಕಾರ್ಖಾನೆಯನ್ನು ಸರಕಾರದ ಸ್ವಾಮ್ಯದಲ್ಲಿಯೇ ನಡೆಸಬೇಕು ಎನ್ನುವ ರೈತರ ಒತ್ತಾಯದಂತೆ ಆರಂಭಿಸಲಾಗಿದೆ. ಆ ಮೂಲಕ ಜಿಲ್ಲೆಯ ರೈತರಿಗೆ ಕೊಟ್ಟ ಮಾತನ್ನು ಉಳಿಸಿಕೊಂಡಿದ್ದೇನೆ ಎನ್ನುವ ಸಮಾಧಾನ, ನೆಮ್ಮದಿ ನನಗಿದೆ ಎಂದರು.

ನನಗೆ ರಾಜಕೀಯದಲ್ಲಿ ಸಾಕಷ್ಟು ಅನುಭವವಿಲ್ಲ, ನನಗೆ ರಾಜಕೀಯದ ಅನಿವಾರ್ಯತೆಯೂ ಇರಲಿಲ್ಲ. ಅಂಬರೀಶ್ ಮತ್ತು ನಾನು ಸುಮಾರು 40 ವರ್ಷಗಳ ಕಾಲ ಚಿತ್ರರಂಗದಲ್ಲಿ ದುಡಿದು ಬೇಕಾದಷ್ಟು ಸಂಪಾದನೆ ಮಾಡಿಕೊಂಡಿದ್ದೇನೆ. ರಾಜಕೀಯದಲ್ಲಿ ಹಣ ಮಾಡಬೇಕು ಎಂಬ ಆಸೆಯಿಂದಲೂ ನಾನು ರಾಜಕೀಯಕ್ಕೆ ಬಂದಿಲ್ಲ. ಜನರ ಸೇವೆ ಮಾಡಬೇಕು ಎಂಬ ಮನೋಭಾವದಿಂದ ರಾಜಕೀಯಕ್ಕೆ ಬಂದಿದ್ದೇನೆ. ಆದರೆ, ಕೆಲವರು ನನ್ನ ಬಗ್ಗೆ ಕೇವಲವಾಗಿ ಮಾತನಾಡುತ್ತಾರೆ. ಅದಕ್ಕೆಲ್ಲ ನಾನು ತಲೆಕೆಡಿಸಿಕೊಳ್ಳಲ್ಲ ಎಂದು ಟಾಂಗ್ ನೀಡಿದರು.

ಅಭಿಷೇಕ್ ಅಂಬರೀಶ್‌ಗೆ ಟಿಕೆಟ್ ಕೊಡಿ ಎಂದು ನಾನು ಯಾವುದೇ ಪಕ್ಷದ ಬಳಿಯೂ ಸಹ ಹೋಗಿಲ್ಲ. ಮುಂದೆಯೂ ಹೋಗಲ್ಲ. ಅವನಿಗೆ ರಾಜಕೀಯದಲ್ಲಿ ಆಸಕ್ತಿ ಇದ್ದರೆ ಜನರು ಅಭಿಷೇಕ್‌ನನ್ನು ಬಯಸಿದರೆ ಅವನು ರಾಜಕೀಯಕ್ಕೆ ಬರಬಹುದು, ಜನಸೇವೆ ಮಾಡಬಹುದು ಎಂದರು.

ಸುನೀತ ಪುಟ್ಟಣ್ಣಯ್ಯ ಮಾತನಾಡಿದರು.

ಬಳಿಕ ರೈತಸಂಘದ ಕಾರ್ಯಕರ್ತರೊಂದಿಗೆ ಸಂವಾದ ನಡೆಯಿತು. ಸಭೆಯಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಎ.ಎಲ್. ಕೆಂಪೂಗೌಡ, ತಾಲೂಕು ಅಧ್ಯಕ್ಷ ಚಿಕ್ಕಾಡೆ ಹರೀಶ್, ವಿಜಯ್‌ಕುಮಾರ್, ಶಶಿಧರ್, ಪುರ ಸಭೆ ಸದಸ್ಯ ಪಾರ್ಥಸಾರಥಿ, ಲಕ್ಷ್ಮೀಗೌಡ, ಸ್ವಾಮೀಗೌಡ, ಸೇರಿದಂತೆ ಹಲವರು ಹಾಜರಿದ್ದರು.

ಎಐಸಿಸಿ ಅಧ್ಯಕ್ಷರಾಗಿ ಮಲ್ಲಿಕಾರ್ಜುನ ಖರ್ಗೆ ಆಯ್ಕೆ

ಚಾ.ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ವಿಜಯೋತ್ಸವ



ಚಾಮರಾಜನಗರ ಅ.19– ಕಾಂಗ್ರೆಸ್ ಹಿರಿಯ ಮುಖಂಡರು, ಕೇಂದ್ರ ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಅಖಿಲ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ (ಎಐಸಿಸಿ) ಅಧ್ಯಕ್ಷರಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ನಗರದ ಜಿಲ್ಲಾ ಕಾಂಗ್ರೆಸ್ ವತಿಯಿಂದ ವಿಜಯೋತ್ಸವ ಆಚರಿಸಲಾಯಿತು.

ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಚೇರಿ ಮುಂಭಾಗ ಪಕ್ಷದ ಜಿಲ್ಲಾಧ್ಯಕ್ಷ ಪಿ.ಮರಿಸ್ವಾಮಿ ನೇತೃತ್ವದಲ್ಲಿ ಮುಖಂಡರು ಹಾಗೂ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ವಿತರಿಸಿ ಸಂಭ್ರಮಿಸಿದರು.

ಈ ವೇಳೆ ಮಾತನಾಡಿದ ಅಧ್ಯಕ್ಷ ಪಿ.ಮರಿಸ್ವಾಮಿ, ಎಐಸಿಸಿ ಅಧ್ಯಕ್ಷರ ಚುನಾವಣೆಯಲ್ಲಿ ನಮ್ಮ ರಾಜ್ಯದವರೇ ಆದ ಪ್ರಾಮಾಣಿಕತೆಗೆ ಹೆಸರಾದಂತಹ ಮಲ್ಲಿಕಾರ್ಜುನ ಖರ್ಗೆಯವರು ಜಯ ಗಳಿಸಿರುವುದು ನಮಗಲ್ಲದೆ, ಇಡೀ ದೇಶದ ಜನತೆಗೆ ಖುಷಿ ತಂದಿದೆ. ಅವರ ಗೆಲುವಿನಿಂದ ಪಕ್ಷಕ್ಕೆ ಬಲ ಬಂದಂತಾಗಿದೆ ಎಂದರು.

ಎಐಸಿಸಿಯ ನೂತನ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಜ್ಯ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಪಕ್ಷ ನಾಯಕ ಸಿದ್ದರಾಮಯ್ಯ ಅವರ ಸಾರಥ್ಯದೊಂದಿಗೆ ಮುಂಬರುವ ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಪಕ್ಷ 150 ಸ್ಥಾನ ಗೆದ್ದು ಸರ್ಕಾರ ರಚಿಸಲಿಸಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಎಐಸಿಸಿ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಕರ್ನಾಟಕದಿಂದ ಮೊದಲನೆಯವರಾಗಿ ಮಾಜಿ ಮುಖ್ಯಮಂತ್ರಿ ದಿ.ಎಸ್.ನಿಜಲಿಂಗಪ್ಪ ಆಯ್ಕೆಯಾಗಿದ್ದು, ಖರ್ಗೆಯವರು ಎರಡನೆಯ ಬಾರಿಗೆ ಎಐಸಿಸಿ ಅಧ್ಯಕ್ಷರಾಗಿ ಆಯ್ಕೆಯಾಗಿರುವುದು ಹೆಮ್ಮೆಯ ಸಂಗತಿ. ಖರ್ಗೆ ಸಾರಥ್ಯದಲ್ಲಿ ಪಕ್ಷ ಸಂಘಟನೆಗೆ ಹೆಚ್ಚಿನ ಒತ್ತು ನೀಡಲಾಗುವುದು ಎಂದು ಇದೇ ವೇಳೆ ಮರಿಸ್ವಾಮಿ ತಿಳಿಸಿದರು.

ಪಕ್ಷ ಜಿಲ್ಲಾ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಮ್ಮದ್ ಅಸ್ಗರ್ (ಮುನ್ನ), ಚುಡಾ ಮಾಜಿ ಅಧ್ಯಕ್ಷ ಸುಹೇಲ್ ಅಲಿಖಾನ್, ನಗರಸಭೆ ಮಾಜಿ ಸದಸ್ಯರಾದ ನಾಗರಾಜು, ಪುಟ್ಟಸ್ವಾಮಿ, ಅಸಂಘಟಿತ ಕಾರ್ಮಿಕರ ಸಂಘದ ಜಿಲ್ಲಾಧ್ಯಕ್ಷ ಸ್ವಾಮಿ, ಸಾಮಾಜಿಕ ಜಾಲತಾಣ ವಿಭಾಗದ ಮುಖ್ಯಸ್ಥರ ಸಯ್ಯದ್ ಮುಖಂಡರಾದ ನಸ್ರುಲ್ಲಾ ಖಾನ್, ಮಹೇಶ ಕುದರ್, ನಾಗವಳ್ಳಿ ನಾಗಯ್ಯ, ವೀರಭದ್ರಸ್ವಾಮಿ, ಮುಜಾಯಿದ್, ನಲ್ಲೂರು ಮಹದೇವಸ್ವಾಮಿ, ಸಯ್ಯದ್ ಅಯೂಬ್ ಖಾನ್, ಕುಂಬೇಶ್ವರಸ್ವಾಮಿ, ಬಸಪ್ಪನಪಾಳ್ಯ ನಟರಾಜು, ಬಸುಮರಿ, ನಂಜುಂಡಸ್ವಾಮಿ, ಮಧು, ಶಿವಸ್ವಾಮಿ, ಬಿಸಲವಾಡಿ ರವಿ, ಡೇರಿ ಶಿವಸ್ವಾಮಿ ಕೆ.ನಾಗರಾಜು, ಮೋಹನ್, ಮರಿಯಾಲದಹುಂಡಿ ಕುಮಾರ್, ಭೋಗಾಪುರ ರಾಜೇಶ್, ಎನ್‌ಎಸ್‌ಯುಐ ಕಾರ್ಯದರ್ಶಿ ಸ್ವಾಮಿ, ಕಾರ್ಯಕರ್ತರು ಪಾಲ್ಗೊಂಡಿದ್ದರು.

> "ಮಲ್ಲಿಕಾರ್ಜುನ ಖರ್ಗೆ ಅವರು ಅತ್ಯಂತ ಹಿರಿಯ ನಾಯಕ. 50 ವರ್ಷಗಳಿಂದ ಕಾಂಗ್ರೆಸ್‌ನ ನಿಷ್ಠಾವಂತ ಕಾರ್ಯಕರ್ತರಾಗಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ, ರಾಜ್ಯ ಕಾಂಗ್ರೆಸ್ ಅಧ್ಯಕ್ಷರಾಗಿ ನಿಷ್ಠೆ, ಪ್ರಮಾಣಿಕತೆಯಿಂದ ಸೇವೆ ಸಲ್ಲಿಸಿದ್ದರು. ಅಂತಹ ಹಿರಿಯರೊಬ್ಬರು ಎಐಸಿಸಿ ಅಧ್ಯಕ್ಷಗಾದಿಗೆ ಆಯ್ಕೆ ಆಗಿರುವುದು ಸಂತಸ ತಂದಿದೆ. ರಾಷ್ಟ್ರೀಯ ಪಕ್ಷದವೊಂದರ ಅಧ್ಯಕ್ಷರಾಗಿ ಕನ್ನಡಿಗರೊಬ್ಬರು ಆಯ್ಕೆಯಾಗಿರುವುದರಿಂದ ಕನ್ನಡಿಗರು ಹೆಮ್ಮೆಪಡಬೇಕು. ಕಾಂಗ್ರೆಸ್‌ನಲ್ಲಿ ಪಕ್ಷಕ್ಕೆ ನಿಷ್ಠೆಯಿಂದ ಇರುವವರಿಗೆ ಉನ್ನತ ಹುದ್ದೆ ದೊರೆಯುತ್ತದೆ ಎಂಬುದಕ್ಕೆ ಖರ್ಗೆ ಅವರೇ ನಿದರ್ಶನ."
>
> –ಆರ್.ಧ್ರುವನಾರಾಯಣ್, ಕೆಪಿಸಿಸಿ ಕಾರ್ಯಾಧ್ಯಕ್ಷ.

ಮಲ್ಲಿಕಾರ್ಜುನಪ್ರಸಾದ್ ನಿಧನ



ಚಾಮರಾಜನಗರ, ಅ.19–ನಗರದ ನಿವಾಸಿ ನಿವೃತ್ತ ಶಿಕ್ಷಕ, ದೇಗುಲ ಮುದ್ರಣದ ಮಾಲೀಕರಾಗಿದ್ದ ಮಲ್ಲಿಕಾರ್ಜುನ ಪ್ರಸಾದ್(70) ಅವರು ಬುಧವಾರ ಬೆಳಗ್ಗೆ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು-ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ತಾಳವಾಡಿ ಸಮೀಪದ ಮಹಾರಾಜನಪುರ ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಇಂದು ಜಿಲ್ಲಾ ಮಟ್ಟದ ಯುವ ಉತ್ಸವ

ಚಾಮರಾಜನಗರ, ಅ.19–ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ನೆಹರು ಯುವ ಕೇಂದ್ರ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಯೋಗದಲ್ಲಿ ಜಿಲ್ಲಾ ಮಟ್ಟದ ಯುವ ಉತ್ಸವ ಕಾರ್ಯಕ್ರಮವನ್ನು ಅ.20ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿರುವ ವರನಟ ಡಾ.ರಾಜ್‌ಕುಮಾರ್ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ ಕಾರ್ಯಕ್ರಮ ಉದ್ಘಾಟಿಸುವರು.

ಡಿಸಿ ಅಧ್ಯಕ್ಷತೆಯಲ್ಲಿ ಗಣಪತಿ ವಿಸರ್ಜನಾ ಸೌಹಾರ್ದ ಸಭೆ

ಚಾಮರಾಜನಗರ, ಅ.19–ನಗರದ ರಥದ ಬೀದಿಯಲ್ಲಿ ಶ್ರೀ ವಿದ್ಯಾಗಣಪತಿ ಮಂಡಳಿಯಿಂದ ಪ್ರತಿಷ್ಠಾಪಿಸಿರುವ ಗಣೇಶ ವಿಸರ್ಜನಾ ಕಾರ್ಯಕ್ರಮವು ಇದೇ ಅ.22ರಂದು ನಡೆಯುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅಧ್ಯಕ್ಷತೆಯಲ್ಲಿ ಇಂದು ವಿವಿಧ ಕೋಮುಗಳ ಮುಖಂಡರ ಸೌಹಾರ್ದ ಸಭೆ ನಡೆಯಿತು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ನಡೆದ ಸಭೆಯಲ್ಲಿ ಮಾತನಾಡಿದ ವಿವಿಧ ಕೋಮುಗಳ ಮುಖಂಡರು, ಈ ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಗಣಪತಿ ವಿಸರ್ಜನೆ ಮಹೋತ್ಸವಕ್ಕೆ ಎಲ್ಲರ ಸಹಕಾರವಿದೆ ಅನೇಕ ವರ್ಷಗಳಿಂದ ಸೌಹಾರ್ದಯುತವಾಗಿ ನಡೆದುಕೊಂಡು ಬಂದಿದ್ದು, ಹೀಗೆಯೇ ಮುಂದುವರೆಯಲಿ ಎಂದರು.

ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಮಾತನಾಡಿ, ಗಣಪತಿ ವಿಸರ್ಜನೆ ಶಾಂತಿಯುತವಾಗಿ ನೆರವೇರಲಿ. ವಿಸರ್ಜನೆ ಸಂದರ್ಭದಲ್ಲಿ ಸಂಬಂಧಿಸಿದ ಆದೇಶಗಳನ್ನು ಕಡ್ಡಾಯವಾಗಿ ಎಲ್ಲರೂ ಪಾಲಿಸಬೇಕು. ಗಣಪತಿ ವಿಸರ್ಜನಾ ಸಂದರ್ಭದಲ್ಲಿ ಮದ್ಯ ಮಾರಾಟ ನಿಷೇಧಿಸಲಾಗಿದೆ. ಈಗಾಗಲೇ ಅಧಿಕಾರಿಗಳಿಗೂ ಅನುಸರಿಸಬೇಕಿರುವ ಕರ್ತವ್ಯಗಳ ಬಗ್ಗೆ ತಿಳಿಸಲಾಗಿದೆ ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ.ಶಿವಕುಮಾರ್ ಮಾತನಾಡಿದರು.

ಎಡಿಸಿ ಎಸ್.ಕಾತ್ಯಾಯಿನಿದೇವಿ, ಎಎಸ್‌ಪಿ ಕೆ.ಎಸ್.ಸುಂದರ್‌ರಾಜ್, ತಹಸೀಲ್ದಾರರಾದ ಬಸವರಾಜು, ರವಿಶಂಕರ್, ಮಂಜುಳಾ, ಆನಂದಪ್ಪನಾಯಕ, ಜಯಪ್ರಕಾಶ್, ಮುಖಂಡರಾದ ಮನೋಜ್ ಪಟೇಲ್, ಸುರೇಶ್ ನಾಯಕ, ಶಿವು ವಿರಾಟ್, ಎಸ್. ಅಶ್ವಿನ್, ಸಿ.ಎಸ್.ಮಹೇಶ್, ಮಹಮ್ಮದ್ ಜಿಯಾವುಲ್ಲಾ, ಮಹಮ್ಮದ್ ಖಲೀಂ ಉಲ್ಲಾ, ಅಕ್ರಂ ಪಾಷ, ವಸೀಂಪಾಷ, ಅಫ್ಸರ್ ಪಾಷ, ನಾಗರಾಜು, ಅಯೂಬ್ ಖಾನ್, ಖಲೀಂವುಲ್ಲಾ, ಅಂತೋಣಿಯಪ್ಪ, ಅಬ್ದುಲ್ ಖಲೀಲ್, ಇತರೆ ಮುಖಂಡರು, ಅಧಿಕಾರಿಗಳು ಸಭೆಯಲ್ಲಿದ್ದರು.



ಮದ್ಯ ಮಾರಾಟ ನಿಷೇಧ...

ಚಾಮರಾಜನಗರ: ನಗರದಲ್ಲಿ ಅ.22ರಂದು ವಿದ್ಯಾಗಣಪತಿ ಮೂರ್ತಿ ವಿಸರ್ಜನೆ ಹಿನ್ನೆಲೆಯಲ್ಲಿ ನಗರ ಹಾಗೂ ನಗರದ 10 ಕಿಮೀ ಸುತ್ತಮುತ್ತ ಅ.21ರ ಸಂಜೆ 5 ಗಂಟೆಯಿಂದ ಅ.23ರ ಬೆಳಗ್ಗೆ 6 ಗಂಟೆಯವರೆಗೆ ಮದ್ಯ ಮಾರಾಟ ನಿಷೇಧಿಸಿ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಆದೇಶ ಹೊರಡಿಸಿದ್ದಾರೆ.

ಯಳಂದೂರಲ್ಲಿ ವಿದ್ಯುತ್ ಹಳೇ ಬಾಕಿ ವಸೂಲಿ ಮಾಡುತ್ತಿಲ್ಲ

ಕೊಳ್ಳೇಗಾಲ ಸೆಸ್ಕ್ ಇಇ ಸ್ಪಷ್ಟನೆ

ಯಳಂದೂರು, ಅ.19–ತಾಲೂಕಿನ ಅಂಬಳೆ ಗ್ರಾಮದಲ್ಲಿ ಸೆಸ್ಕ್ ಸಿಬ್ಬಂದಿ ಕಳೆದ ತಿಂಗಳು ಹಾಗೂ ಪ್ರಸಕ್ತ ತಿಂಗಳ ವಿದ್ಯುತ್ ಬಿಲ್ ಮಾತ್ರ ವಸೂಲು ಮಾಡುತ್ತಿದ್ದು, ಹಳೇ ಬಾಕಿ ವಸೂಲಿಗೆ ಮುಂದಾಗಿಲ್ಲ ಎಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಕೊಳ್ಳೇಗಾಲ(ಕಾರ್ಯ ಮತ್ತು ಪಾಲನಾ ವಿಭಾಗ)ದ ಕಾರ್ಯನಿರ್ವಾಹಕ ಇಂಜಿನಿಯರ್ ಸ್ಪಷ್ಟಪಡಿಸಿದ್ದಾರೆ.

ಸೆಸ್ಕ್‌ನ ಯಳಂದೂರು ಉಪವಿಭಾಗ ವ್ಯಾಪ್ತಿಗೆ ಒಳಪಡುವ ಅಂಬಳೆ ಗ್ರಾಮದಲ್ಲಿ ಅ.18ರಂದು ಇಲಾಖೆ ಅಧಿಕಾರಿಗಳು, ಸಿಬ್ಬಂದಿ ವಿದ್ಯುತ್ ಬಿಲ್ ಪಾವತಿಸಿಕೊಳ್ಳುವ ಸಂದರ್ಭದಲ್ಲಿ ಗ್ರಾಮಸ್ಥರು-ರೈತ ಸಂಘದ ಮುಖಂಡರು ಗೊಂದಲಕ್ಕೊಳಗಾಗಿ, ಹಳೆಯ ವಿದ್ಯುತ್ ಬಿಲ್ ಪಾವತಿಸದ ಮನೆಗಳ ಸಂಪರ್ಕ ಕಡಿತಗೊಳಿಸಲಾಗುತ್ತಿದೆ ಎಂಬ ಆತಂಕದಿಂದ ಪ್ರತಿಭಟಿಸಿದ್ದರು. ಆದರೆ ಸೆಸ್ಕ್ ಸಿಬ್ಬಂದಿ ಪ್ರಸ್ತುತ ತಿಂಗಳ ವಿದ್ಯುತ್ ಬಿಲ್ ಪಡೆಯುವುದಾಗಿ ಗ್ರಾಮಸ್ಥರು ಹಾಗೂ ರೈತ ಮುಖಂಡರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಹಳೇ ಬಿಲ್ ಬಾಕಿ ಮನ್ನಾದ ಬಗ್ಗೆ ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಹಿಂದಿನ ತಿಂಗಳು ಹಾಗೂ ಪ್ರಸಕ್ತ ತಿಂಗಳ ಬಿಲ್ ಮಾತ್ರ ವಸೂಲಿ ಮಾಡಲಾಗುತ್ತಿದೆ. ಆ ಬಗ್ಗೆ ಯಾವುದೇ ಅತಂಕ ಬೇಡ ಎಂದು ಅಂಬಲೆ ಗ್ರಾಮಸ್ಥರು ಹಾಗೂ ರೈತ ಮುಖಂಡರಿಗೆ ಕೊಳ್ಳೇಗಾಲ ಸೆಸ್ಕ್‌ನ ಕಾರ್ಯನಿರ್ವಾಹಕ ಇಂಜಿನಿಯರ್ ಸ್ಪಷ್ಟಪಡಿಸಿದ್ದಾರೆ.

ಮಳವಳ್ಳಿಯಲ್ಲಿ ಬಾಲಕಿ ಮೇಲಿನ ಅತ್ಯಾಚಾರ, ಹತ್ಯೆ ಪ್ರಕರಣ

ತಡವಾಗಿ ಸಂತ್ರಸ್ತರ ಭೇಟಿಯಾದ ಸುಮಲತಾ ಬಗ್ಗೆ ನಿಖಿಲ್ ಕುಮಾರಸ್ವಾಮಿ ಅಸಮಾಧಾನ



ಮೈಸೂರು, ಅ.19(ಆರ್‌ಕೆಬಿ)– ಮಳವಳ್ಳಿಯಲ್ಲಿ ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ, ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂಸದೆ ಸುಮಲತಾ ಸಂತ್ರಸ್ತ ಕುಟುಂಬವನ್ನು ತಡವಾಗಿ ಭೇಟಿ ಮಾಡಿರುವುದಕ್ಕೆ ರಾಜ್ಯ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಇಂದಿಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮೈಸೂರಿನಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಕ್ಷೇತ್ರದ ಸಂಸದರು ಘಟನೆ ನಡೆದ ದಿನವೇ ಸಂತ್ರಸ್ತೆಯ ಕುಟುಂಬವನ್ನು ಭೇಟಿ ಮಾಡಿ, ಸಾಂತ್ವನ ಹೇಳಬೇಕಿತ್ತು. ಆದರೆ ನಾಲ್ಕು ದಿನಗಳ ಬಳಿಕ ಬೇರೆ ಯಾವುದೋ ಕಾರ್ಯಕ್ರಮಕ್ಕೆ ಹೋದಾಗ ಮಳವಳ್ಳಿಗೆ ಭೇಟಿ ನೀಡಿದ್ದಾರೆ. ಇದಕ್ಕೂ ಮೊದಲೇ ಕ್ಷೇತ್ರದ ಜೆಡಿಎಸ್ ಶಾಸಕ ಅನ್ನದಾನಿ ಹಾಗೂ ನಾನು ಸಂತ್ರಸ್ತೆಯ ಮನೆಗೆ ಭೇಟಿ ನೀಡಿ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡಿದ್ದೇವೆ. ಬಾಲಕಿಯ ಕುಟುಂಬಕ್ಕೆ ಪರಿಹಾರ ಕೊಡಿಸುವಲ್ಲೂ ಶಾಸಕ ಅನ್ನದಾನಿ ಶ್ರಮಿಸಿದ್ದಾರೆ ಎಂದರು.

ಯುವಕರಿಗೆ ಶೇ.30ರಷ್ಟು ಟಿಕೆಟ್: ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್ ಯುವಕರಿಗೆ ಶೇ.30ರಷ್ಟು ಟಿಕೆಟ್ ಕೊಡಬೇಕು ಎಂದು ಮನವಿ ಮಾಡಿದ್ದೇನೆ. ಅದೇ ರೀತಿ ಯುವಕರು ಹೆಚ್ಚಿನ ಪ್ರಮಾಣದಲ್ಲಿ ರಾಜಕೀಯಕ್ಕೆ ಬಂದು, ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು. ಗೆಲ್ಲುವ ಅರ್ಹತೆ ಇರುವ ಯುವ ನಾಯಕರು ಟಿಕೆಟ್ ಕೇಳಬೇಕು. ಈ ನಿಟ್ಟಿನಲ್ಲಿ ನಾವು ಕೂಡ ಸರ್ವೇ ಮಾಡಿಸುತ್ತಿದ್ದೇವೆ. ಗೆಲ್ಲುವ ಸಾಮರ್ಥ್ಯ ಇರುವ ಯುವ ನಾಯಕರಿಗೆ ಟಿಕೆಟ್ ಕೊಡುತ್ತೇವೆ ಎಂದು ಹೇಳಿದರು.

ಬೇಸತ್ತ ಜನತೆ ಕಾಂಗ್ರೆಸ್, ಬಿಜೆಪಿಗೆ ಪರ್ಯಾಯ ಬಯಸಿದ್ದಾರೆ

123 ಸ್ಥಾನ ಗೆಲ್ಲುವ ಗುರಿ ತಲುಪುವಲ್ಲಿ ನಾವೆಲ್ಲ ಪರಿಶ್ರಮ ಪಡಬೇಕಿದೆ: ಪಕ್ಷದ ಮುಖಂಡರಿಗೆ ಹೆಚ್.ಡಿ.ಕುಮಾರಸ್ವಾಮಿ ಕಿವಿಮಾತು

ಮೈಸೂರು, ಅ.19(ಆರ್‌ಕೆಬಿ)– ರಾಜ್ಯದ ಜನತೆ ಕಾಂಗ್ರೆಸ್ ಮತ್ತು ಬಿಜೆಪಿಯ ನಡವಳಿಕೆಯಿಂದ ಬೇಸತ್ತಿದ್ದು, ಪರ್ಯಾಯ ಬಯಸಿದ್ದಾರೆ. ಹಾಗಾಗಿ ಪ್ರಾದೇಶಿಕ ಪಕ್ಷ ಜೆಡಿಎಸ್‌ಗೆ ಎಲ್ಲೆಡೆ ಒಲವು ವ್ಯಕ್ತಪಡಿಸುತ್ತಿದ್ದಾರೆ. ಇದನ್ನು ಸದುಪಯೋಗಪಡಿಸಿಕೊಳ್ಳಬೇಕಿದೆ. ಹೀಗಾಗಿ ಮುಂದಿನ ಚುನಾವಣೆಯಲ್ಲಿ 123 ಸ್ಥಾನಗಳನ್ನು ಗೆಲ್ಲುವುದು ನಮ್ಮ ಮುಖ್ಯ ಗುರಿಯಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ಮೈಸೂರಿನ ಹೊರವಲಯದ ಹೂಟಗಳ್ಳಿಯ ರೆಸಾರ್ಟ್‌ನಲ್ಲಿ ಏರ್ಪಡಿಸಿದ್ದ ಪಕ್ಷದ ಸಮಾಲೋಚನಾ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಚುನಾವಣೆ ಬರಲಿ ನೋಡೋಣ ಎಂಬ ಮನೋಭಾವ ಬಿಟ್ಟು, ಜನರ ಮುಂದೆ ಹೋಗಿ ಕುಮಾರಸ್ವಾಮಿಯೇ ಅಭ್ಯರ್ಥಿ ಎಂದು ಹೇಳಿ ಜನರ ಮನಸ್ಸನ್ನು ಗೆಲ್ಲುವಂತೆ ಕರೆ ನೀಡಿದರು.



ಮೈಸೂರಿನ ಹೊರವಲಯದ ಹೂಟಗಳ್ಳಿ ಬಳಿಯ ಖಾಸಗಿ ರೆಸಾರ್ಟ್‌ನಲ್ಲಿ ಬುಧವಾರ ಜೆಡಿಎಸ್ ಸಮಾಲೋಚನಾ ಕಾರ್ಯಾಗಾರಕ್ಕೆ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಚಾಲನೆ ನೀಡಿದರು. ಚಿತ್ರದಲ್ಲಿ ಪಕ್ಷದ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ, ಮುಖಂಡರಾದ ಕುಪೇಂದ್ರ ರೆಡ್ಡಿ, ಶಾಸಕರು, ಮುಖಂಡರನ್ನು ಕಾಣಬಹುದು.

ರಾಜ್ಯದ 22 ಜಿಲ್ಲೆಗಳ 106 ವಿಧಾನಸಭಾ ಕ್ಷೇತ್ರಗಳಲ್ಲಿ ಒಟ್ಟಾರೆ 10 ಸಾವಿರ ಕಿ.ಮೀ. ಸಂಚರಿಸಲಿರುವ ಪಂಚರತ್ನ ರಥಯಾತ್ರೆಯ ವೇಳೆ 255 ಸಾರ್ವಜನಿಕ ಸಭೆ, 480 ಕಾರ್ನರ್ ಸಭೆಗಳನ್ನು ಒಳಗೊಂಡಿರುತ್ತದೆ. ಇವು ಕಾಂಗ್ರೆಸ್, ಬಿಜೆಪಿಯವರಂತೆ ಕೋಟ್ಯಾಂತರ ಖರ್ಚಿನ ಸಭೆಗಳಲ್ಲ. ಹಣವಿಲ್ಲದೇ ಜನರ ಮುಂದೆ ಹೋಗಿ ಅವರ ಸಂಕಷ್ಟ ಕೇಳಬೇಕು. ಪ್ರತಿ ಕ್ಷೇತ್ರದ ವಾಸ್ತವಾಂಶದ ಸಮೀಕ್ಷೆ ನಡೆಸಿ ವರದಿಯನ್ನು ಪಡೆಯುತ್ತಿದ್ದೇವೆ. ಸಂಭಾವ್ಯರಿಗೆ ಅವಕಾಶ ಮಾಡಿಕೊಟ್ಟಿದ್ದೇವೆ ಎಂದು ಹೇಳಿದರು.

ಯಾರು ನಮ್ಮ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡುವುದಿಲ್ಲವೋ ಅಂಥವರ ಮೇಲೆ ಕಠಿಣ ನಿರ್ಧಾರ ಕೈಗೊಳ್ಳಲಾಗುವುದು. ಇಲ್ಲಿ ವ್ಯಾಮೋಹ, ಆತ್ಮೀಯತೆಯ ಮೇಲೆ ಬಿ.ಫಾರಂ ನೀಡುವುದಿಲ್ಲ ಎಂದು ಎಚ್ಚರಿಕೆಯನ್ನೂ ಇದೇ ವೇಳೆ ನೀಡಿದರು.

ಬೇರೆಯವರೊಂದಿಗೆ ಕೈಜೋಡಿಸುವ ಕಷ್ಟ ತರಬೇಡಿ: ಬೇರೆಯವರ ಜೊತೆ ಕೈಜೋಡಿಸುವ ಕಷ್ಟ ನನಗೆ ತಂದೊಡ್ಡಬೇಡಿ. ನಮ್ಮ ಗುರಿ 123 ಸ್ಥಾನಗಳನ್ನು ಗೆಲ್ಲುವುದಾಗಿದೆ. ಕೇವಲ 30–40 ಸೀಟು ಗೆದ್ದರೆ ಯಾರಾದರೂ ನೇತೃತ್ವ ವಹಿಸಿಕೊಳ್ಳಲಿ. ನಾನು ದೂರದಲ್ಲೇ ಇದ್ದು ಸಲಹೆ ಕೊಡುತ್ತೇನೆ. ಸ್ಪರ್ಧಿಸಬೇಕಲ್ಲ ಎಂದು ಸ್ಪರ್ಧಿಸುವುದನ್ನು ಬಿಟ್ಟು, ಗೆಲ್ಲಲೇಬೇಕೆಂಬ ಛಲದೊಂದಿಗೆ ಸ್ಪರ್ಧಿಸಿ, ಗೆಲುವು ಸಾಧಿಸಿ ತೋರಿಸಿ ಎಂದು ಸಭೆಯಲ್ಲಿ ಕೈಮುಗಿದು ಕೇಳಿಕೊಂಡರು. ಕಾರ್ಯಾಗಾರದಲ್ಲಿ ರಾಜ್ಯಾಧ್ಯಕ್ಷ ಸಿ.ಎಂ. ಇಬ್ರಾಹಿಂ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿದ್ದರು. ಮುಖಂಡ ಕುಪೇಂದ್ರ ರೆಡ್ಡಿ ಇನ್ನಿತರರು ಉಪಸ್ಥಿತರಿದ್ದರು.

ಉತ್ತಮರು ಕರೆದರೆ ಹೋಗಬಹುದು... ದೆವ್ವ ಕರೆದರೆ ಹೋಗಲಾಗುತ್ತದೆಯೇ...!?

ಸುಮಲತಾ ವಿರುದ್ಧ ಶಾಸಕ ರವೀಂದ್ರ ಶ್ರೀಕಂಠಯ್ಯ ವಾಗ್ದಾಳಿ

ಮೈಸೂರು, ಅ.19(ಆರ್‌ಕೆಬಿ)–ಸುಮಲತಾ ಅಂಬರೀಶ್ ಅವರು ಕರೆದಾಕ್ಷಣ ಹೋಗಲಾಗುವುದಿಲ್ಲ. ಉತ್ತಮರು ಕರೆದರೆ ಹೋಗಬಹುದು, ದೆವ್ವ ಕರೆದರೆ ಹೋಗಲು ಆಗುತ್ತಾ? ದೆವ್ವದ ಬಾಯಲ್ಲಿ ಭಗವದ್ಗೀತೆ ಕೇಳಲು ಸಾಧ್ಯವೇ? ಎಂದು ಶ್ರೀರಂಗಪಟ್ಟಣ ಶಾಸಕ ರವೀಂದ್ರ ಶ್ರೀಕಂಠಯ್ಯ ಇಂದಿಲ್ಲಿ ಸುಮಲತಾ ವಿರುದ್ಧ ವಾಗ್ದಾಳಿ ನಡೆಸಿದರು.



ಮಂಡ್ಯ ಜಿಲ್ಲೆ ಜೆಡಿಎಸ್ ಶಾಸಕರನ್ನು ಆಣೆ ಪ್ರಮಾಣ ಮಾಡಲು ಬರುವಂತೆ ಸಂಸದೆ ಸುಮಲತಾ ಆಹ್ವಾನ ನೀಡಿರುವ ವಿಚಾರ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸುಮಲತಾ ಜೊತೆಯಲ್ಲಿರುವವರು ಭ್ರಷ್ಟಾತಿಭ್ರಷ್ಟರು. ಮೈಸೂರು–ಬೆಂಗಳೂರು ಹೈವೇ ಕಾಮಗಾರಿಯಲ್ಲಿ ನೂರಾರು ಕೋಟಿ ಅಕ್ರಮ ನಡೆದಿದೆ. ಆ ಅಕ್ರಮಗಳಲ್ಲಿ ಸುಮಲತಾ ಬೆಂಬಲಿಗರು ಭಾಗಿಯಾಗಿದ್ದಾರೆ. ಸುಮಲತಾ ಏಟ್ರಿಯಾ ಹೋಟೆಲ್‌ಗೆ ಏಕೆ ಹೋಗಿದ್ದರು? ಹೋಟೆಲ್‌ನಲ್ಲಿ ಕುಳಿತು ಅವರು ಏನು ಮಾಡಿದರು ಎಂಬುದರ ವೀಡಿಯೋ ದಾಖಲೆಗಳಿವೆ. ಸೂಕ್ತ ಸಂದರ್ಭದಲ್ಲಿ ಆ ವೀಡಿಯೋ ಬಿಡುಗಡೆ ಮಾಡುತ್ತೇವೆ. ಈಗಾಗಲೇ ಸುಮಲತಾ ವಿರುದ್ಧ ಜನರು ತಿರುಗಿ ಬಿದ್ದಿದ್ದಾರೆ. ಮುಂಬರುವ ಚುನಾವಣೆಯಲ್ಲಿ ಜನರೇ ತಕ್ಕ ಪಾಠ ಕಲಿಸಲಿದ್ದಾರೆ ಎಂದು ರವೀಂದ್ರ ಶ್ರೀಕಂಠಯ್ಯ ತಿಳಿಸಿದರು.

ಅಪ್ರಾಪ್ತೆ ಮೇಲೆ ಅತ್ಯಾಚಾರ: ಆರೋಪಿಗೆ 20 ವರ್ಷ ಜೈಲು ಶಿಕ್ಷೆ

ಪೋಕ್ಸೋ ವಿಶೇಷ ನ್ಯಾಯಾಲಯ ತೀರ್ಪು


ಮೈಸೂರು, ಅ.19(ಎಸ್‌ಬಿಡಿ)– ಅಪ್ರಾಪ್ತೆ ಮೇಲೆ ಅತ್ಯಾಚಾರವೆಸಗಿದ್ದ ವಿವಾಹಿತ ವ್ಯಕ್ತಿಗೆ ಮೈಸೂರಿನ ಪೋಕ್ಸೋ ವಿಶೇಷ ನ್ಯಾಯಾಲಯ 20 ವರ್ಷ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿದೆ.

ಪಾಂಡವಪುರ ತಾಲೂಕಿನ ನಿವಾಸಿ ಪ್ರಸನ್ನಗೆ ಶಿಕ್ಷೆ ವಿಧಿಸಲಾಗಿದೆ. ಈತ ಬೇರೆ ಊರಿನಲ್ಲಿರುವ ತನ್ನ ಸಂಬಂಧಿಯ ಅಪ್ರಾಪ್ತ ಮಗಳಿಗೆ ಬಟ್ಟೆ ಕೊಡಿಸುವುದಾಗಿ ಪುಸಲಾಯಿಸಿ, ವಿವಾಹವಾಗುವುದಾಗಿ ನಂಬಿಸಿ, ಹಲವು ಬಾರಿ ದೈಹಿಕ ಸಂಪರ್ಕ ನಡೆಸಿದ್ದ. ಅಲ್ಲದೆ ಯಾರಿಗಾದರೂ ಹೇಳಿದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದ. ಗರ್ಭವತಿಯಾಗಿದ್ದ ಸಂತ್ರಸ್ತೆ 2020ರಲ್ಲಿ ಮಗುವಿಗೆ ಜನ್ಮ ನೀಡಿದ್ದಳು.

ಈ ಸಂಬಂಧ ಸಂತ್ರಸ್ತೆ ತಾಯಿ ನೀಡಿದ ದೂರಿನ ಮೇರೆಗೆ ಸಾಲಿಗ್ರಾಮ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಸಾಲಿಗ್ರಾಮ ವೃತ್ತ ನಿರೀಕ್ಷಕರಾಗಿದ್ದ ಎಂ.ಆರ್. ಲವ, ಪ್ರಕರಣದ ತನಿಖೆ ನಡೆಸಿ, ಆರೋಪಿ ಪ್ರಸನ್ನ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಪೋಕ್ಸೋ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಶಾಮ ಕಮರೋಜ್, ಪ್ರಸನ್ನ ವಿರುದ್ಧದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಆತನಿಗೆ ಒಟ್ಟು 20 ವರ್ಷ ಕಠಿಣ ಸಜೆ ಹಾಗೂ 61 ಸಾವಿರ ದಂಡ ವಿಧಿಸಿ ಅ.18ರಂದು ತೀರ್ಪು ನೀಡಿದ್ದಾರೆ. ಅಲ್ಲದೆ ನೊಂದ ಬಾಲಕಿ 5 ಲಕ್ಷ ಪರಿಹಾರಕ್ಕೆ ಅರ್ಹಳು ಎಂದು ತೀರ್ಪಿನಲ್ಲಿ ತಿಳಿಸಿದ್ದಾರೆ. ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕಿ ಕೆ.ಬಿ.ಜಯಂತಿ ವಾದ ಮಂಡಿಸಿದ್ದರು.

ಇಂದು ಹೆಚ್.ಡಿ.ದೇವೇಗೌಡರ ಉಪಸ್ಥಿತಿ

ಮೈಸೂರು,ಅ.19(ಎಸ್‌ಬಿಡಿ)–ಮೈಸೂರಿನಲ್ಲಿ ನಡೆಯುತ್ತಿರುವ ಜೆಡಿಎಸ್ ಸಮಾಲೋಚನಾ ಕಾರ್ಯಾಗಾರದಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಗುರುವಾರ ಭಾಗಿಯಾಗಲಿದ್ದಾರೆ. ಮೈಸೂರು ವಿಮಾನ ನಿಲ್ದಾಣಕ್ಕೆ ಹೆಲಿಕಾಪ್ಟರ್ ಮೂಲಕ ಆಗಮಿಸಲಿರುವ ಗೌಡರು, ಅಲ್ಲಿಂದ ಬೆಳಗ್ಗೆ 11ಕ್ಕೆ ಹೂಟಗಳ್ಳಿಯ ಖಾಸಗಿ ರೆಸಾರ್ಟ್‌ನಲ್ಲಿ ನಡೆಯುತ್ತಿರುವ ಕಾರ್ಯಾಗಾರದಲ್ಲಿ ಭಾಗವಹಿಸಲಿದ್ದಾರೆ. ಸರ್ಕಾರಿ ಅತಿಥಿಗೃಹದಲ್ಲಿ ರಾತ್ರಿ ವಾಸ್ತವ್ಯ ಹೂಡಲಿದ್ದಾರೆ. ಕಾರ್ಯಾಗಾರ ಸಮಾರೋಪಗೊಳ್ಳುವ ಗುರುವಾರ, ತೆಲಂಗಾಣ ಸರ್ಕಾರದ ಕೆಲವು ಸಚಿವರು ಸೇರಿದಂತೆ ರಾಜ್ಯದ ಹಾಲಿ ಶಾಸಕರು, ಮಾಜಿ ಶಾಸಕರು ಹಾಗೂ ಮುಂಬರುವ ವಿಧಾನಸಭಾ ಚುನಾವಣೆಯ ಟಿಕೆಟ್ ಆಕಾಂಕ್ಷಿಗಳು ಭಾಗಿಯಾಗಲಿದ್ದಾರೆ. ಮಾಜಿ ಸಿಎಂ ಕುಮಾರಸ್ವಾಮಿ ಬೆಳಗ್ಗೆ 11ಕ್ಕೆ ಸುದ್ದಿಗೋಷ್ಠಿ ನಡೆಸಲಿದ್ದಾರೆ.



ನೆಕ್ಸಸ್ ಸೆಂಟರ್ ಸಿಟಿ, ಮೈಸೂರಲ್ಲಿ ಶ್ರೇಷ್ಠ ದೀವಿಗೆಯ ವಿಶಿಷ್ಟ ಅಲಂಕಾರ

ಮೈಸೂರು, ಅ.19–ಭಾರತದ ಅತ್ಯಂತ ಪ್ರೀತಿಯ ಮತ್ತು ಆಚರಿಸಲಾಗುವ ಹಬ್ಬಗಳಲ್ಲಿ ದೀಪಾವಳಿಯೂ ಒಂದಾಗಿದೆ. ಹಬ್ಬದ ಮೆರಗು ಹೆಚ್ಚಿಸುವ ನೆಕ್ಸಸ್ ಸೆಂಟರ್ ಸಿಟಿ ಮಾಲ್ ಆಕರ್ಷಕ ದೀವಿಗೆ ಅಲಂಕಾರ ಮಾಡಿದೆ.



ಕತ್ತಲೆಯ ಮೇಲೆ ದೀಪಗಳ ವಿಜಯದ ಸಾಂಕೇತಿಕ ಪ್ರಾತಿನಿಧ್ಯ, ಈ ಭವ್ಯವಾದ ದೀಪವನ್ನು ನಾಲ್ಕು ಬದಿಯ ಜ್ವಾಲೆಯ ರಚನೆಯ ಭವ್ಯತೆಯನ್ನು ಹೊರತರಲು ರೋಮಾಂಚಕ ಬಣ್ಣಗಳು, ಅಮೂರ್ತ ವಿನ್ಯಾಸಗಳು ಮತ್ತು ದೀಪಗಳಿಂದ ಮಾಡಲ್ಪಟ್ಟಿದೆ. ದೀಪ ಜ್ಯೋತಿ ಸ್ತಂಭದೊಂದಿಗೆ ಅಲಂಕಾರ ಪೂರ್ಣಗೊಂಡಿದೆ.

'ಲೈಟ್ಸ್ ಆಫ್ ಹ್ಯಾಪಿನೆಸ್' ಅಭಿಯಾನದ ಭಾಗವಾಗಿ, ನೆಕ್ಸಸ್ ಮಾಲ್ ಗ್ರಾಹಕರಿಗೆ ಈ ಹಬ್ಬದ ಋತುವಿನಲ್ಲಿ ಸಮಾಜಕ್ಕೆ ಮರಳಿ ನೀಡಲು ವೇದಿಕೆ ಕಲ್ಪಿಸಿದೆ. ಈ ಉದಾತ್ತ ಕಾರ್ಯಕ್ಕೆ ಕೊಡುಗೆ ನೀಡಲು ಬಯಸುವ ಗ್ರಾಹಕರು ಸ್ಥಳದಲ್ಲೇ ದೀಪಗಳನ್ನು ಖರೀದಿಸಬಹುದು ಮತ್ತು ದೀಪ ಸ್ತಂಭದ ಮೇಲೆ ಇರಿಸಬಹುದು. ಈ ಸಾಮೂಹಿಕ ಆದಾಯವನ್ನು ನಂತರ ಅಗತ್ಯವಿರುವವರ ಜೀವನವನ್ನು ಬೆಳಗಿಸಲು ಸರ್ಕಾರೇತರ ಸಂಸ್ಥೆಗೆ ದೇಣಿಗೆ ನೀಡಲಾಗುತ್ತದೆ, ಇದು 'ಲೈಟ್ಸ್‌ಆಫ್ ಹ್ಯಾಪಿನೆಸ್'ನ ನಿಜವಾದ ಅರ್ಥದಲ್ಲಿ 'ಸಂತೋಷದ ದೀಪಗಳು'. ಇದೇ ವೇಳೆ ಶಾಪಿಂಗ್ ಅನುಭವವನ್ನು ನೀಡಲು ವಿಶೇಷ ಕೊಡುಗೆಗಳು, ಖಚಿತ ಬಹುಮಾನಗಳು ಮತ್ತು ಇತರ ಆಶ್ಚರ್ಯಗಳನ್ನು ಸಹ ನೀಡಲಿದೆ.

ಪಾನ್‌ಕಾರ್ಡ್ ಅಪ್‌ಡೇಟ್ ನೆಪದಲ್ಲಿ ಮಹಿಳೆಗೆ 64 ಸಾವಿರ ರೂ. ವಂಚನೆ

ಮುಂದುವರೆದಿದೆ ಆನ್‌ಲೈನ್ ದೋಖಾ

ಮೈಸೂರು,ಅ.19–ಪಾನ್‌ಕಾರ್ಡ್ ಅಪ್‌ಡೇಟ್ ಮಾಡುವಂತೆ ಲಿಂಕ್ ಕಳುಹಿಸಿ ಮಹಿಳೆಯೊಬ್ಬರಿಂದ ಆನ್‌ಲೈನ್ ಮೂಲಕ 64,480 ರೂ.ಗಳನ್ನು ವಂಚಿಸಿರುವ ಬಗ್ಗೆ ವರದಿಯಾಗಿದೆ.

ರಾಮಕೃಷ್ಣನಗರ ಇ ಅಂಡ್ ಎಫ್ ಬ್ಲಾಕ್‌ನ ಸಿ.ಕೆ. ಲಕ್ಷ್ಮೀ (43) ಎಂಬುವರಿಗೆ 7470306276 ಸಂಖ್ಯೆಯಿಂದ ಪಾನ್ ಕಾರ್ಡ್ ಅಪ್‌ಡೇಟ್ ಮಾಡುವಂತೆ ಲಿಂಕ್ ಬಂದಿದೆ. ಅವರು ಲಿಂಕ್ ಓಪನ್ ಮಾಡಿ ಓಟಿಪಿ ಶೇರ್ ಮಾಡಿದ ತಕ್ಷಣ ಅವರ ಬ್ಯಾಂಕ್ ಖಾತೆಯಿಂದ 64,480 ರೂ. ಕಡಿತಗೊಂಡಿದೆ.

ಮತ್ತೊಂದು ಪ್ರಕರಣದಲ್ಲಿ ಟಿ.ಕೆ. ಲೇಔಟ್‌ನ ಹೆಚ್. ಶ್ರೀನಿವಾಸ (63) ಅವರ ಮೊಬೈಲ್‌ಗೆ ನಿಮ್ಮ ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗುವುದು ಎಂದು ಸಂದೇಶ ರವಾನೆಯಾಗಿದೆ. ಸಂದೇಶ ಬಂದ ಮೊಬೈಲ್ ಸಂಖ್ಯೆಯನ್ನು ಅವರು ಸಂಪರ್ಕಿಸಿದಾಗ ಕ್ವಿಕ್ ಸಪೋರ್ಟ್ ಆ್ಯಪ್ ಅನ್ನು ಇನ್ಸ್ಟಾಲ್ ಮಾಡುವಂತೆ ವಂಚಕ ತಿಳಿಸಿದ್ದಾನೆ. ಅದರಂತೆ ಅವರು ಆ್ಯಪ್ ಇನ್ಸ್ಟಾಲ್ ಮಾಡಿ ಓಟಿಪಿ ನಮೂದಿಸುತ್ತಿದ್ದಂತೆಯೇ ಅವರ ಬ್ಯಾಂಕ್ ಖಾತೆಯಲ್ಲಿದ್ದ 1,48,500 ರೂ. ಕಡಿತಗೊಂಡಿದೆ. ಈ ಎರಡೂ ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿವೆ.

ಟ್ಯೂಷನ್, ಮನೆ ಪಾಠಗಳಿಗೆ ನಿರ್ಬಂಧ

ಸರ್ಕಾರಿ ಆದೇಶ

ಮೈಸೂರು, ಅ.19(ಎಸ್‌ಪಿಎನ್)–ರಾಜ್ಯದಲ್ಲಿ ನಡೆಯುತ್ತಿರುವ ಅನಧಿಕೃತ ಟ್ಯೂಷನ್ ಸೆಂಟರ್ ಹಾಗೂ ಮನೆ ಪಾಠಗಳ ಹಾವಳಿಯನ್ನು ತಡೆಯುವಂತೆ ರಾಜ್ಯದ ಬಿಇಓ ಮತ್ತು ಡಿಡಿಪಿಐಗಳಿಗೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆಯುಕ್ತ ಡಾ.ಎಲ್.ವಿಶಾಲ್ ಬುಧವಾರ ಸೂಚಿಸಿದ್ದಾರೆ.


ಬೆಂಗಳೂರಿನ ರಾಜ್ಯ ಖಾಸಗಿ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷರು ನೀಡಿರುವ ಮನವಿ ಮೇರೆಗೆ, ಈ ಆದೇಶ ಹೊರಡಿಸಿದ್ದು, ರಾಜ್ಯದಲ್ಲಿ ನಡೆಯುತ್ತಿರುವ ಅನಧಿಕೃತ ಟ್ಯೂಷನ್ ಸೆಂಟರ್ ಹಾಗೂ ಮನೆ ಪಾಠ ಹಾವಳಿಯನ್ನು ತಡೆಗಟ್ಟುವಂತೆ ಕೋರಿ ಸಲ್ಲಿಸಿದ್ದ ಮನವಿಯನ್ನು ಪರಿಶೀಲಿಸಲಾಗಿ, ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 43 ವಿವಿಧ 2001 ದಿನಾಂಕ:5–5–2003ರ ಅನ್ವಯ ಕರ್ನಾಟಕ ಶಿಕ್ಷಣ ಕಾಯಿದೆ 1983ರ ನಿಯಮ 35ರಡಿ ಟುಟೋರಿಯಲ್ ಕೇಂದ್ರಗಳನ್ನು ನೋಂದಾಯಿಸುವುದು ಅವಶ್ಯವಿರುತ್ತದೆ.

ಸದರಿ ಆದೇಶದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ವಿಭಾಗಕ್ಕೆ ಜಿಲ್ಲಾ ಉಪ ನಿರ್ದೇಶಕರನ್ನು ನೋಂದಣಿ ಪ್ರಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿರುತ್ತದೆ. ಮುಂದುವರೆದು ಕರ್ನಾಟಕ ಟ್ಯುಟೋರಿಯಲ್ ಇನ್ಸ್‌ಟಿಟ್ಯೂಷನ್ ನೋಂದಣಿ ಮತ್ತು ನಿಯಂತ್ರಣ ನಿಯಮಗಳನ್ನು ಪ್ರಕಟಿಸಲಾಗಿದೆ. ಅದರಂತೆ 1 –7 ಮತ್ತು 8–10 ತರಗತಿಗಳವರೆಗೆ ಟ್ಯುಟೋರಿಯಲ್ ಸಂಸ್ಥೆಗಳನ್ನು ನೋಂದಾಯಿಸಲು ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರೇ ನೋಂದಣಿ ಪ್ರಾಧಿಕಾರಿಗಳಾಗಿರುವುದರಿಂದ ಆಯಾಯ ಜಿಲ್ಲೆಯ ಟ್ಯೂಷನ್ ತರಬೇತಿ ಕೇಂದ್ರಗಳು ಅನಧಿಕೃತವಾಗಿ ನಡೆಯುತ್ತಿದ್ದಲ್ಲಿ ನಿಯಮಾನುಸಾರ ಪರಿಶೀಲಿಸಿ ಶಿಕ್ಷಣ ಕಾಯ್ದೆ ಅನ್ವಯ ಅಗತ್ಯ ಕ್ರಮ ಕೈಗೊಳ್ಳುವಂತೆ ಇಲಾಖೆ ಆಯುಕ್ತರು ಸುತ್ತೋಲೆ ಹೊರಡಿಸಿದ್ದಾರೆ.

ಕಾರ್ಯ ಸ್ಥಗಿತಗೊಂಡಿದ್ದ ತೂಬಿನ ಗೇಟ್ ದುರಸ್ತಿ

ಕುಕ್ಕರಹಳ್ಳಿ ಕೆರೆಯಿಂದ ಹೆಚ್ಚುವರಿ ನೀರು ಬಿಡುಗಡೆ

ಮೈಸೂರು, ಅ.19(ಆರ್‌ಕೆ)–ತುಕ್ಕು ಹಿಡಿದು ಕಾರ್ಯ ಸ್ಥಗಿತಗೊಂಡಿದ್ದ ತೂಬಿನ ಕಬ್ಬಿಣದ ಗೇಟ್ ಅನ್ನು ರಿಪೇರಿ ಮಾಡಿ ತುಂಬಿ ತುಳುಕುತ್ತಿರುವ ಮೈಸೂರಿನ ಕುಕ್ಕರಹಳ್ಳಿ ಕೆರೆಯಿಂದ ಹೆಚ್ಚುವರಿ ನೀರನ್ನು ಹೊರ ಬಿಡುವ ಕಾರ್ಯ ಇಂದಿನಿಂದ ಆರಂಭವಾಗಿದೆ. ಮೈಸೂರು ವಿವಿ ಇಂಜಿನಿಯರ್‌ಗಳು ಇಂದು ನೀರು ಹೊರಕ್ಕೆ ಹರಿಸಲು ಬೋಗಾದಿ ರಸ್ತೆ ಕಡೆ ಏರಿಯಲ್ಲಿ ಅಳವಡಿಸಿರುವ ತೂಬಿನ ಗೇಟ್ ಅನ್ನು ರಿಪೇರಿ ಮಾಡಿಸಿ, ಕೆರೆಯಿಂದ ಹೆಚ್ಚುವರಿ ನೀರನ್ನು ಮಳೆ ನೀರು ಚರಂಡಿಗೆ ಹರಿಸುತ್ತಿದ್ದಾರೆ.



ಮಧ್ಯಾಹ್ನ 3 ಗಂಟೆಯಿಂದ ತೂಬಿನಲ್ಲಿ ನೀರು ಹೊರಕ್ಕೆ ಹರಿದು ಹೋಗುತ್ತಿದ್ದು, ರಾಜಕಾಲುವೆ ಮೂಲಕ ನಂಜನಗೂಡು ರಸ್ತೆಯಲ್ಲಿರುವ ಕೆರೆಗೆ ಹಾದು ಹೋಗುತ್ತಿದೆ. ಇಂದು ಬೆಳಗ್ಗೆಯಿಂದಲೇ ಇಂಜಿನಿಯರ್‌ಗಳು ತೂಬಿನ ಗೇಟ್ ಅನ್ನು ರಿಪೇರಿ ಮಾಡಿ ಓವರ್ ಆಯಿಲಿಂಗ್ ಮಾಡಿ ಸ್ಥಗಿತಗೊಂಡಿದ್ದ ಗೇಟ್ ಆಪರೇಟ್ ಆಗುವಂತೆ ಮಾಡಿದ್ದರಿಂದ ಕುಕ್ಕರಹಳ್ಳಿ ಕೆರೆಯ ಹೆಚ್ಚುವರಿ ನೀರು ಹೊರಕ್ಕೆ ಹರಿದು ಹೋಗುತ್ತಿದೆ. ಇನ್ನೆರಡು ದಿನಗಳಲ್ಲಿ ನೀರಿನ ಮಟ್ಟ ಕಡಿಮೆಯಾಗಲಿದೆ ಎಂದು ಮೈಸೂರು ವಿವಿ ಕುಲಸಚಿವ ಪ್ರೊ.ಆರ್.ಶಿವಪ್ಪ ತಿಳಿಸಿದ್ದಾರೆ.

ಅಧಿಕ ಮಳೆಯಾದ್ದರಿಂದ ಒಳಹರಿವು ಹೆಚ್ಚಾಗಿ ಕುಕ್ಕರಹಳ್ಳಿ ಕೆರೆಯಲ್ಲಿ ಭಾರೀ ಪ್ರಮಾಣದ ನೀರು ಸಂಗ್ರಹವಾಗಿದ್ದ ಕಾರಣ ಅಪಾಯ ಸಂಭವಿಸುವ ಮೊದಲೇ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಎಚ್ಚೆತ್ತು ಮಂಗಳವಾರದಿಂದ ಕುಕ್ಕರಹಳ್ಳಿ ಕೆರೆ ಏರಿ ಮೇಲೆ ವಾಯುವಿಹಾರವನ್ನು ನಿಷೇಧಿಸಿದ್ದರು. ಕೆರೆ ಏರಿಯ ಮೇಲೆ ಅಲ್ಲಲ್ಲಿ ಹೊಂಡಗಳಾಗಿದ್ದು, ಮರಗಳು ಬಾಗಿ ಉರುಳಿ ಬೀಳುವ ಸ್ಥಿತಿಯಲ್ಲಿದ್ದವು. ವಿಹಾರಿಗಳಿಗೆ ತೊಂದರೆಯಾಗುವುದನ್ನು ತಡೆಯಲು ಮುಂಜಾಗ್ರತೆಗಾಗಿ ಅಗತ್ಯ ಸುರಕ್ಷಾ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ನೀರಿನ ಮಟ್ಟ ಕಡಿಮೆಯಾಗುತ್ತಿದ್ದಂತೆಯೇ ಮತ್ತೆ ವಾಯುವಿಹಾರಕ್ಕೆ ಅನುವು ಮಾಡಿಕೊಡಲಾಗುವುದು.



ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆ ಅಧೀಕ್ಷಕ ಡಾ.ಕೆ.ಎಸ್.ಸದಾನಂದ ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಲಾಯಿತು. ಈ ವೇಳೆ ಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು, ಜೆಡಿಎಸ್ ನಗರ ಪ್ರಧಾನ ಕಾರ್ಯದರ್ಶಿ ಸತೀಶ್, ಮಹದೇವ್ ಉಪಸ್ಥಿತರಿದ್ದರು.

ಹತ್ಯೆಗೀಡಾದ ಮಳವಳ್ಳಿ ಬಾಲಕಿ ಮನೆಗೆ ರಾಜ್ಯ ಕುರುಬರ ಸಂಘದ ಅಧ್ಯಕ್ಷ ಭೇಟಿ

ಮಳವಳ್ಳಿ, ಅ.19– ಧಾರುಣವಾಗಿ ಸಾವನ್ನಪ್ಪಿದ ಮಳವಳ್ಳಿಯ ಬಾಲಕಿ ಮನೆಗೆ ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ ಮತ್ತಿತರ ಪದಾಧಿಕಾರಿಗಳು ಭೇಟಿ ನೀಡಿ, ನೊಂದ ಕುಟುಂಬಕ್ಕೆ ಸಾಂತ್ವನ ಹೇಳಿದರು.



ಈ ವೇಳೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಸುಬ್ರಹ್ಮಣ್ಯ, ಬಾಲಕಿ ಆತ್ಮಕ್ಕೆ ಶಾಂತಿ ಸಿಗಲಿ. ಬಾಲಕಿಯ ಮೇಲೆ ಅತ್ಯಾಚಾರವೆಸಗಿ, ಹತ್ಯೆ ಮಾಡಿರುವ ಆರೋಪಿಗೆ ಕಠಿಣ ಶಿಕ್ಷೆ ಆಗಲೇಬೇಕು. ಮೃತ ಬಾಲಕಿ ಕುಟುಂಬದವರೊಂದಿಗೆ ನಮ್ಮ ಸಂಘ ಇದ್ದೇ ಇರುತ್ತದೆ ಎಂದು ನೊಂದವರಿಗೆ ಆತ್ಮಸ್ಥೈರ್ಯ ತುಂಬಿದರು. ರಾಜ್ಯ ಕುರುಬರ ಸಂಘದ ಪದಾಧಿಕಾರಿಗಳು, ನಿರ್ದೇಶಕರು, ಜಿಲ್ಲಾ ಘಟಕದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಕರ್ನಾಟಕದಲ್ಲೂ ಸೀಟ್ ಬೆಲ್ಟ್ ಕಡ್ಡಾಯ

ಬೆಂಗಳೂರು: ಚಾಲಕನ ಹಿಂಬದಿ ಕುಳಿತು ಪ್ರಯಾಣ ಮಾಡುವವರು ಕೂಡ ಇನ್ನು ಮುಂದೆ ಕಡ್ಡಾಯವಾಗಿ ಸೀಟ್ ಬೆಲ್ಟ್ ಹಾಕಬೇಕು. ಒಂದು ವೇಳೆ ನಿಯಮ ಮೀರಿ ಸೀಟ್ ಬೆಲ್ಟ್ ಹಾಕದೆ ಪ್ರಯಾಣ ಮಾಡಿದರೆ ಪೊಲೀಸ್ ಇಲಾಖೆ 1000 ರೂ. ದಂಡ ವಿಧಿಸುತ್ತದೆ. ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಸೂಚನೆ ಮೇರೆಗೆ ಪೊಲೀಸ್ ಇಲಾಖೆ ಹೊಸ ನಿಯಮವನ್ನು ಜಾರಿಗೆ ತಂದಿದೆ. ಪೊಲೀಸ್ ಇಲಾಖೆ ದಂಡವನ್ನು 500ರಿಂದ 1 ಸಾವಿರ ರೂ.ಗೆ ಏರಿಸಿದೆ. ಈ ಮೊದಲು ಸೀಟ್ ಬೆಲ್ಟ್ ಧರಿಸದೇ ವಾಹನ ಚಲಾಯಿಸಿದರೆ 500 ರೂ. ದಂಡ ಹಾಕಲಾಗುತ್ತಿತ್ತು. ಆದರೆ ಈಗ ನಿಯಮ ಮೀರಿದವರಿಗೆ 1000 ದಂಡ ವಿಧಿಸುವಂತೆ ಎಲ್ಲಾ ಕಮೀಷನರೇಟ್ ಮತ್ತು ಎಸ್‌ಪಿಗಳಿಗೆ ಪೊಲೀಸ್ ಇಲಾಖೆ ಸೂಚಿಸಿದೆ. ಇಂದಿನಿಂದಲೇ ರಾಜ್ಯದಲ್ಲಿ ನಿಯಮ ಜಾರಿಯಾಗಿದೆ.

ಅ.23ರಿಂದ 26ರವರೆಗೆ ಮೈಸೂರಿನ ಕೆಲವೆಡೆ ನಿಶ್ಯಬ್ಧ ವಲಯ

ಮೈಸೂರು, ಅ.19(ಆರ್‌ಕೆ)–ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ಶಬ್ದಮಾಲಿನ್ಯ ತಡೆಗಟ್ಟಲು ಅ.23ರಿಂದ 26ರವರೆಗೆ ಮೈಸೂರಿನ ಕೆಲವೆಡೆ ನಿಶ್ಯಬ್ಧ ವಲಯ ಎಂದು ಘೋಷಿಸಿ ನಗರ ಪೊಲೀಸ್ ಕಮೀಷ್ನರ್ ಡಾ. ಚಂದ್ರಗುಪ್ತ ಬುಧವಾರ ಆದೇಶ ಹೊರಡಿಸಿದ್ದಾರೆ. ಮೈಸೂರು ನಗರ ಕಮೀಷ್ನರೇಟ್ ವ್ಯಾಪ್ತಿಯ ಮೃಗಾಲಯ, ಕುಕ್ಕರಹಳ್ಳಿ ಕೆರೆ ಪ್ರದೇಶ, ಕಾರಂಜಿಕೆರೆ ಪ್ರದೇಶ, ಲಿಂಗಾಂಬುದಿ ಕೆರೆ ಪ್ರದೇಶ, ಸಾರ್ವಜನಿಕ ಉದ್ಯಾನವನಗಳು, ಆಸ್ಪತ್ರೆ, ನರ್ಸಿಂಗ್ ಹೋಂಗಳು, ಶಾಲಾ–ಕಾಲೇಜು, ಶೈಕ್ಷಣಿಕ ಸಂಸ್ಥೆಗಳು, ನ್ಯಾಯಾಲಯ, ಧಾರ್ಮಿಕ ಸ್ಥಳಗಳ 100 ಮೀಟರ್ ಸುತ್ತಳತೆ ಪ್ರದೇಶವನ್ನು ಅ.23ರ ಬೆಳಗ್ಗೆ 6 ಗಂಟೆಯಿಂದ 26ರ ಮಧ್ಯರಾತ್ರಿ 12 ಗಂಟೆವರೆಗೆ ನಿಶ್ಯಬ್ದ ವಲಯ ಎಂದು ಘೋಷಿಸಲಾಗಿದ್ದು, ಆ ಪ್ರದೇಶಗಳಲ್ಲಿ ಯಾವುದೇ ರೀತಿಯ ಪಟಾಕಿ ಸಿಡಿಸುವುದನ್ನು ನಿಷೇಧಿಸಲಾಗಿದೆ ಎಂದು ಅವರು ಆದೇಶದಲ್ಲಿ ತಿಳಿಸಿದ್ದಾರೆ.



ಶಕ್ತಿಧಾಮದ ನವೀಕೃತ ಗ್ರಂಥಾಲಯ ಉದ್ಘಾಟನೆ

ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳುವಂತೆ ಮಕ್ಕಳಿಗೆ ರಾಜವಂಶಸ್ಥ ಯದುವೀರ್ ಒಡೆಯರ್ ಕಿವಿಮಾತು

ಮೈಸೂರು,ಅ.19(ಎಸ್‌ಪಿಎನ್)–ಗಂಡು ಮಕ್ಕಳಿಗೆ ಸಿಗುವಂತೆ ಎಲ್ಲಾ ಸೌಲಭ್ಯಗಳು, ಹೆಣ್ಣು ಮಕ್ಕಳಿಗೂ ಸಮನಾಗಿ ಸಿಗಬೇಕು. ಪೋಷಕರಾಗಲೀ ಮತ್ತು ಸರ್ಕಾರವಾಗಲೀ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಬಲವಾಗಿ ಪ್ರತಿಪಾದಿಸಿದರು.

ಮೈಸೂರು ಊಟಿ ರಸ್ತೆಯಲ್ಲಿರುವ ಶಕ್ತಿಧಾಮದಲ್ಲಿ ಆಜಾದಿ ಕಾ ಅಮೃತ್ ಮಹೋತ್ಸವ ಅಂಗವಾಗಿ 'ಕಲಿಸು' ಫೌಂಡೇಶನ್ ವತಿಯಿಂದ ನವೀಕೃತಗೊಳಿಸಿದ ಗ್ರಂಥಾಲಯವನ್ನು ಯದುವೀರ್ ಮತ್ತು ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ನೇತೃತ್ವದಲ್ಲಿ ಬುಧವಾರ ಉದ್ಘಾಟಿಸಿ, ಸಂವಾದದಲ್ಲಿ ವಿದ್ಯಾರ್ಥಿನಿ ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮತ್ತೊಬ್ಬ ವಿದ್ಯಾರ್ಥಿನಿ ನಿಮ್ಮ ಬಾಲ್ಯ ಕುರಿತು ಮಾಹಿತಿ ನೀಡುವಂತೆ ಯದುವೀರ್ ಅವರಿಗೆ ಮನವಿ ಮಾಡಿದರು. ಇದಕ್ಕೆ ಉತ್ತರಿಸಿದ ಅವರು, ನನ್ನ ಬಾಲ್ಯದ ಆಟ–ಪಾಠ ಎಲ್ಲವೂ ಬೆಂಗಳೂರಿನಲ್ಲಿ ನಡೆಯಿತು. ಪದವಿ ಮುಗಿಸಿದ ನಂತರ ಯುಎಸ್‌ನಲ್ಲಿ ಆಂಗ್ಲಸಾಹಿತ್ಯ ಮತ್ತು ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಮುಗಿಸಿದ್ದೇನೆ. ಎಲ್ಲರಂತೆ ನನ್ನ ಬಾಲ್ಯ ಸಂಗತಿಗಳು ಇವೆ ಎಂದರು.

ಪ್ರಸ್ತುತ ನಾನು 1909 ಇಸವಿಯಲ್ಲಿ ಪ್ರಕಟಗೊಂಡಿರುವ ಸನಾತನ ಧರ್ಮ ಕುರಿತು ಓದುತ್ತಿದ್ದೇನೆ. ಆ ಪುಸ್ತಕ ಹೊರಗಡೆ ಸಿಗುವುದಿಲ್ಲ. ಅರಮನೆ ಗ್ರಂಥಾಲಯದಲ್ಲಿರುವುದರಿಂದ ಇಷ್ಟಪಟ್ಟು ಓದುತ್ತಿದ್ದೇನೆ ಎಂದು ವಿದ್ಯಾರ್ಥಿ ಕೇಳಿದ ಪ್ರಶ್ನೆಗೆ ಉತ್ತರಿಸಿದರಲ್ಲದೆ, ಮತ್ತೊಬ್ಬ ವಿದ್ಯಾರ್ಥಿನಿ ಅವರ ಮಗನ ಶಿಕ್ಷಣ ಕುರಿತು ಕೇಳಿದ ಪ್ರಶ್ನೆಗೆ, ಕೇಳಿದಾಗ ನನ್ನ ಮಗನಿಗೆ 4 ವರ್ಷ. ಆತನ ಶಿಕ್ಷಣದ ಬಗ್ಗೆ ಮುಂದೆ ಯೋಚಿಸುತ್ತೇನೆ ಎಂದರು.



ಶಕ್ತಿಧಾಮದಲ್ಲಿ ಆಜಾದಿ ಕಾ ಅಮೃತ್ ಮಹೋತ್ಸವ ಅಂಗವಾಗಿ 'ಕಲಿಸು' ಫೌಂಡೇಶನ್‌ನಿಂದ ನವೀಕೃತಗೊಳಿಸಿದ ಗ್ರಂಥಾಲಯವನ್ನು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮತ್ತು ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಉದ್ಘಾಟಿಸಿ, ವಿದ್ಯಾರ್ಥಿನಿಯರೊಂದಿಗೆ ಗ್ರಂಥಾಲಯದ ಪುಸ್ತಕ ಪರಿಶೀಲಿಸಿದರು.

ನಟ ಸಾರ್ವಭೌಮ ಡಾ.ರಾಜ್‌ಕುಮಾರ್ ಅವರು 'ಗಂಧದಗುಡಿ' ಸಿನಿಮಾದಲ್ಲಿ ನಟಿಸುವ ಸಂದರ್ಭದಲ್ಲಿ ಕುದುರೆ ಸವಾರಿಯಲ್ಲಿ ಬಂಡೀಪುರದ ಬೆಟ್ಟವೊಂದರಲ್ಲಿ ಶೂಟಿಂಗ್ ಮಾಡಿದ್ದರು. ಆ ಜಾಗವನ್ನು ಈ ಬಾರಿ ಬಂಡೀಪುರ ಸಫಾರಿಗೆ ಹೋಗಿದ್ದ ಸಂದರ್ಭದಲ್ಲಿ ನೋಡಿ ಆನಂದಿಸಿದ್ದೇನೆ. ದಸರಾ ಮುಗಿದ ನಂತರ ಬಂಡೀಪುರಕ್ಕೆ ಹೋಗಿ, ಪ್ರಕೃತಿ ಮಧ್ಯೆ ಇರಬೇಕೆಂಬ ಆಸೆಯಿಂದ ಕಳೆದ 4 ದಿನದ ಹಿಂದೆ ಬಂಡೀಪುರಕ್ಕೆ ತೆರಳಿ, ಇಂದು ಮೈಸೂರಿಗೆ ಆಗಮಿಸಿದ್ದೇನೆ ಎಂದರು.

'ಕಲಿಸು' ಫೌಂಡೇಶನ್ ಸರ್ಕಾರಿ ಶಾಲೆಯ 74 ಗ್ರಂಥಾಲಯಗಳನ್ನು ನವೀಕೃತಗೊಳಿಸಿದೆ. ಶಕ್ತಿಧಾಮದಲ್ಲಿ ನವೀಕೃತಗೊಳಿಸಿರುವುದು 75ನೇ ಗ್ರಂಥಾಲಯ. ನಟ ರಾಜ್‌ಕುಮಾರ್ ಕುಟುಂಬ ಹಲವು ವರ್ಷಗಳಿಂದ ಶಕ್ತಿಧಾಮದ ಏಳಿಗೆಗೆ ಶ್ರಮಿಸುತ್ತಿದೆ. ಸಿನಿಮಾ ನಟನೆ ಜೊತೆಗೆ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವುದು ಸಂತೋಷದ ಸಂಗತಿ. ಇದರ ಉಪಯೋಗವನ್ನು ಇಲ್ಲಿನ ವಿದ್ಯಾರ್ಥಿಗಳು ಬಳಸಿಕೊಂಡು ಪುಸ್ತಕ ಓದುವ ಹವ್ಯಾಸವನ್ನು ಪ್ರತಿಯೊಬ್ಬರು ಬೆಳೆಸಿಕೊಳ್ಳಬೇಕು ಎಂದರು.

> ಇಂದಿನ ಮಕ್ಕಳಿಗೆ ಪುಸ್ತಕ ಓದುವ ಹವ್ಯಾಸ. ಗಣ್ಯರೊಂದಿಗೆ ಸಂವಾದ ನಡೆಸುವ ಕೌಶಲ್ಯ. ಗ್ರಂಥಾಲಯದ ಉಪಯೋಗ ಕುರಿತ ಇಂತಹ ಕಾರ್ಯಕ್ರಮ ಅತ್ಯಾವಶ್ಯಕ.
> – ನಟ ಶಿವರಾಜಕುಮಾರ್

ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಅಗತ್ಯ: ಮೈಸೂರಿನಲ್ಲಿರುವ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಣೆ ಮಾಡುವುದು ಅಗತ್ಯವಾಗಿದೆ. ಅರಮನೆಯ ಕೋಟೆ ಗೋಡೆ ಶಿಥಿಲವಾಗಿರುವ ಕುರಿತು ಮೊದಲು ವರದಿಯಾಗಿತ್ತು. ದುರಸ್ತಿಗೂ ಮೊದಲೇ ಕೋಟೆ ಗೋಡೆ ಕುಸಿದು ಬಿದ್ದಿದೆ. ಅದನ್ನು ಸರಿಪಡಿಸಬೇಕು. ಶಕ್ತಿಧಾಮದ ಮಕ್ಕಳಿಗೆ ಸಮಯ ಸಿಕ್ಕಾಗ ಪಾಠ ಹೇಳಿಕೊಡುವ ಕುರಿತು ಯೋಚಿಸುತ್ತೇನೆ ಎಂದು ಮಾಧ್ಯಮ ಪ್ರತಿನಿಧಿಗಳು ಕೇಳಿದ ಪ್ರಶ್ನೆಗೆ ಚುಟುಕಾಗಿ ಉತ್ತರಿಸಿದರು.

ಕಲಿಸು ಫೌಂಡೇಶನ್‌ನ ಸಿಇಓ ನಿಖಿಲೇಶ್ ಮಾತನಾಡಿದರು. ಈ ವೇಳೆ ಕಲಿಸು ಫೌಂಡೇಶನ್‌ನ ಮನೋಜ್, ನಾಗಶ್ರೀ, ವಿಜ್ಞೇಶ್, ಎಂ.ಸಿ.ಮಲ್ಲಿಕಾರ್ಜುನ, ಶ್ಯಾಮ್, ತೇಜಸ್ ಸೇರಿದಂತೆ ಇತರರು ಉಪಸ್ಥಿತರಿದ್ದರು. ಈ ವೇಳೆ ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡಯರ್, ನಟ ಡಾ.ಶಿವರಾಜಕುಮಾರ್ ಹಾಗೂ ಗೀತಾ ಶಿವರಾಜಕುಮಾರ್ ಅವರು, ಪುಸ್ತಕದ ನಾಲ್ಕು ಸಾಲಿನ ಪದ್ಯಗಳನ್ನು ವಿದ್ಯಾರ್ಥಿನಿಯರಿಗೆ ಹೇಳಿಕೊಟ್ಟು ಓದುವ ಹವ್ಯಾಸಕ್ಕೆ ಬುನಾದಿ ಹಾಕಿದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ಮೂರನೇ ಪುಟದಿಂದ

ನ.1ರಿಂದ 'ಪಂಚರತ್ನ ರಥಯಾತ್ರೆ'

ಜನರ ಮನೆ ಮನೆಗೆ ತಲುಪಿಸುವ ನಿಟ್ಟಿನಲ್ಲಿ ಕೈಗೊಂಡಿರುವ ಪಂಚರತ್ನ ರಥಯಾತ್ರೆಯ ರೀತಿಯಲ್ಲಿ ಯಾವುದೇ ಪಕ್ಷ, ಸರ್ಕಾರ ಮಾಡಿಲ್ಲ. ಅಂಥದ್ದೊಂದು ಕಾರ್ಯಕ್ರಮವನ್ನು ಜನರಿಗಾಗಿ ಜೆಡಿಎಸ್ ರೂಪಿಸಿದೆ ಎಂದರು.

ಜೆಡಿಎಸ್ ವರಿಷ್ಠ ಹೆಚ್.ಡಿ.ದೇವೇಗೌಡರ ಆಶಯದಂತೆ ಈ ಪಂಚರತ್ನ ರಥಯಾತ್ರೆ ಕೋಲಾರ ಜಿಲ್ಲೆಯ ಮುಳಬಾಗಿಲುವಿನಲ್ಲಿ ನ.1ರಂದು ಶ್ರೀ ಗಣೇಶ ಮತ್ತು ಶ್ರೀ ಆಂಜನೇಯಸ್ವಾಮಿ ದೇವಸ್ಥಾನಗಳಲ್ಲಿ ಪೂಜೆ ಸಲ್ಲಿಸುವ ಮೂಲಕ ಚಾಲನೆ ದೊರೆಯಲಿದೆ. 1994ರಲ್ಲಿ ಮುಳಬಾಗಿಲುವಿನಿಂದಲೇ ಹೆಚ್.ಡಿ.ದೇವೇಗೌಡರು ಪ್ರಚಾರ ಆರಂಭಿಸಿ ಯಶಸ್ಸು ಕಂಡಿದ್ದಾರೆ. ಹಾಗಾಗಿ ಮುಂಬರುವ ವಿಧಾನಸಭೆ ಚುನಾವಣೆಗೂ ಮುಳಬಾಗಿಲುನಿಂದಲೇ ಚುನಾವಣಾ ಪ್ರಚಾರ ಆರಂಭಿಸುತ್ತೇವೆ. ನಂತರ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರಚಾರ ನಡೆಸುತ್ತೇವೆ. ಮಿಷನ್ 123 ಜೆಡಿಎಸ್ ಗುರಿಯಾಗಿದೆ. ಆದರೆ ಕೆಲವರು ಜೆಡಿಎಸ್‌ಗೆ 15ದೋ , 20ತ್ತೋ, 30ತ್ತೋ ಸೀಟುಗಳು ಬರಬಹುದು ಎಂದು ಕುಹಕವಾಡುತ್ತಿದ್ದಾರೆ. ಅವರೆಲ್ಲರಿಗೂ ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ತಕ್ಕ ಉತ್ತರ ಕೊಡಲಿದ್ದೇವೆ. ಅದಕ್ಕೆ ಮುನ್ನುಡಿಯಾಗಿ ಚಾಮುಂಡೇಶ್ವರಿಯ ಸನ್ನಿಧಾನವಾಗಿರುವ ಮೈಸೂರಿನಲ್ಲಿ ಎರಡು ದಿನಗಳ ಕಾಲ ಪಕ್ಷದ ಕಾರ್ಯಾಗಾರ ನಡೆಸುತ್ತಿದ್ದೇವೆ. ಜೆಡಿಎಸ್‌ನ 126 ಅಭ್ಯರ್ಥಿಗಳನ್ನು ಅಂತಿಮಗೊಳಿಸಿದ್ದೇವೆ. ರಾಜ್ಯದಲ್ಲಿ ಜೆಡಿಎಸ್‌ಗೆ ಉತ್ತಮ ವಾತಾವರಣವಿದೆ ಎಂದರು. ಆರು ತಿಂಗಳ ಕಾಲ ರಾಜ್ಯಾದ್ಯಂತ ರಥ ಸಂಚರಿಸಲಿದೆ. ಈ ರಥಯಾತ್ರೆಯು ರಾಜ್ಯದ 120 ತಾಲೂಕುಗಳನ್ನು ಒಳಗೊಳ್ಳುತ್ತದೆ. ಯಾತ್ರೆಯ ಸಮಯದಲ್ಲಿ ಹಳ್ಳಿಗಳಲ್ಲಿ ವಾಸ್ತವ್ಯ ಮಾಡುತ್ತೇವೆ. ಕರ್ನಾಟಕದ ಜನರ ಕಲ್ಯಾಣಕ್ಕಾಗಿ ಪ್ರಾದೇಶಿಕ ಪಕ್ಷದ ಅಗತ್ಯವನ್ನು ಎತ್ತಿ ಹಿಡಿಯಲು ನಾಲ್ಕು ಹಂತಗಳಲ್ಲಿ ಯಾತ್ರೆ ನಿರಂತರವಾಗಿ ನಡೆಯಲಿದೆ ಎಂದು ಕುಮಾರಸ್ವಾಮಿ ತಿಳಿಸಿದರು. ನಾಲ್ಕು ಹಂತಗಳಲ್ಲಿ ನಡೆಯಲಿರುವ ಈ ಕಾರ್ಯಕ್ರಮ ಮುಂದಿನ ಫೆಬ್ರವರಿಯವರೆಗೆ ನಡೆಯಲಿದೆ. 35 ವಿಧಾನಸಭಾ ಕ್ಷೇತ್ರಗಳಿಗೆ ಮೊದಲ ಹಂತದಲ್ಲಿ ರಥಯಾತ್ರೆ ಸಾಗಲಿದೆ. 6 ಟ್ಯಾಬ್ಲೋ ವಾಹನಗಳು ರಥಯಾತ್ರೆ ಜೊತೆಯಲ್ಲಿ ರುತ್ತವೆ. ಒಂದು ವಾಹನದಲ್ಲಿ ಬಹಿರಂಗ ಸಭೆ ನಡೆಸಲು ವೇದಿಕೆ ಇರುತ್ತದೆ. ಬಹಳಷ್ಟು ಜನರು ಜೆಡಿಎಸ್‌ನವರು 15–20 ಸ್ಥಾನ ಗೆಲ್ಲುತ್ತಾರೆ ಎನ್ನುತ್ತಾರೆ. ಆದರೆ 2023ಕ್ಕೆ ಸ್ವತಂತ್ರವಾಗಿ ಪ್ರಾದೇಶಿಕ ಸರ್ಕಾರ ರಚನೆಯಾಗಲಿದೆ ಎಂದು ಕುಮಾರಸ್ವಾಮಿ ವಿಶ್ವಾಸ ವ್ಯಕ್ತಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ, ಶಾಸಕರಾದ ಸಾ.ರಾ.ಮಹೇಶ್, ಸಿ.ಎಸ್.ಪುಟ್ಟರಾಜು ಇನ್ನಿತರರು ಉಪಸ್ಥಿತರಿದ್ದರು.

ಎಂ.ಮಲ್ಲಿಕಾರ್ಜುನ ಖರ್ಗೆ ಜಯಭೇರಿ

ಹೊರಗಿನ ವ್ಯಕ್ತಿಗೆ ಮತ್ತೆ ಅಧ್ಯಕ್ಷ ಸ್ಥಾನ ದೊರಕಿದೆ. 137 ವರ್ಷಗಳ ಇತಿಹಾಸದಲ್ಲಿ ಇದು ಸೇರಿ 6ನೇ ಬಾರಿ ಚುನಾವಣೆ ನಡೆದಿದೆ. ದಿವಂಗತ ನಿಜಲಿಂಗಪ್ಪ ಅವರು ಕರ್ನಾಟಕದಿಂದ ಈ ಮೊದಲು ಈ ಸ್ಥಾನವನ್ನು ಅಲಂಕರಿಸಿದ್ದರು. ತದನಂತರ ಪಕ್ಷ ಮತ್ತು ಗಾಂಧಿ ಕುಟುಂಬಕ್ಕೆ ನಿಷ್ಠಾವಂತ ಖರ್ಗೆ ಅವರಿಗೆ ಈ ಸ್ಥಾನ ದೊರೆತಿದೆ.

ಸೋಮವಾರ ನಡೆದ ಚುನಾವಣೆಯಲ್ಲಿ ಶೇಕಡ 96ರಷ್ಟು ಮತದಾನವಾಗಿತ್ತು. 9915 ಪ್ರತಿನಿಧಿಗಳ ಪೈಕಿ 9500 ಪ್ರತಿನಿಧಿಗಳು ತಮ್ಮ ಹಕ್ಕು ಚಲಾಯಿಸಿದ್ದರು. ಇದರಲ್ಲಿ ಖರ್ಗೆ ಅವರಿಗೆ 7897 ಮತಗಳು ಲಭಿಸಿವೆ. ಸುದೀರ್ಘ ಕಾಲ ಗಾಂಧಿ ಕುಟುಂಬದ ಮುಕುಟ ಮಣಿಯಾಗಿದ್ದ ಎಐಸಿಸಿ ಅಧ್ಯಕ್ಷ ಸ್ಥಾನ ಮತ್ತೊಮ್ಮೆ ಗಾಂಧಿ ಕುಟುಂಬದ ಹೊರಗಿನವರೊಬ್ಬರಿಗೆ ದಕ್ಕಿ, ದಾಖಲಾಗಿದೆ. ಪ್ರಜಾಸತ್ತಾತ್ಮಕ ನೆಲೆಯಲ್ಲಿ ಚುನಾವಣೆ ನಡೆದೇ ಅಧ್ಯಕ್ಷರ ಆಯ್ಕೆಯಾಗಬೇಕು. ಆ ಮೂಲಕ ಅವಿರೋಧವಾಗಿ ಆಯ್ಕೆಯಾಗುವ ಸಂಪ್ರದಾಯಕ್ಕೆ ತಿಲಾಂಜಲಿ ಹಾಡಬೇಕು ಎಂದು ಹೇಳಿದ್ದ ಶಶಿ ತರೂರ್ ಅವರು ಗೆಲ್ಲದೇ ಹೋದರೂ, ಅವರ ಉದ್ದೇಶ ಈಡೇರಿದಂತಾಗಿದೆ.

ಮಲ್ಲಿಕಾರ್ಜುನ ಖರ್ಗೆ ಅವರು ಎಐಸಿಸಿ ಅಧ್ಯಕ್ಷರಾಗಿ ನೇಮಕಗೊಳ್ಳುತ್ತಿದ್ದಂತೆಯೇ ರಾಜ್ಯ ಕಾಂಗ್ರೆಸ್‌ನಲ್ಲಿ ಸಂಭ್ರಮದ ವಾತಾವರಣ ಕಾಣಿಸಿಕೊಂಡಿದ್ದು, ಕೆಪಿಸಿಸಿ ಕಚೇರಿಯಲ್ಲಿ ಅದ್ದೂರಿಯಾಗಿ ಹರ್ಷಾಚರಣೆ ಮಾಡಲಾಗಿದೆ.

ಅಂದ ಹಾಗೆ 2009ರ ವೇಳೆಗೆ ರಾಜ್ಯ ಕಾಂಗ್ರೆಸ್ ಅಧಿಪತ್ಯಕ್ಕಾಗಿ ಮಲ್ಲಿಕಾರ್ಜುನ ಖರ್ಗೆ ಮತ್ತು ಸಿದ್ದರಾಮಯ್ಯ ನಡುವೆ ಸಂಘರ್ಷ ಶುರುವಾದಾಗ ಮಧ್ಯೆ ಪ್ರವೇಶಿಸಿದ್ದ ಕೈ ಪಾಳೆಯದ ವರಿಷ್ಠರು ಮಲ್ಲಿಕಾರ್ಜುನ ಖರ್ಗೆ ದಿಲ್ಲಿಗೆ, ಸಿದ್ದರಾಮಯ್ಯ ಇಲ್ಲಿಗೆ ಎಂಬ ಸೂತ್ರವನ್ನು ರೂಪಿಸಿ ಪರಿಸ್ಥಿತಿಯನ್ನು ತಿಳಿಗೊಳಿಸಿದ್ದರು. ಆ ಸಂದರ್ಭದಲ್ಲಿ ವರಿಷ್ಠರ ಮಾತಿಗೆ ಎದುರಾಡದ ಮಲ್ಲಿಕಾರ್ಜುನ ಖರ್ಗೆ ಅವರು 2009ರ ಲೋಕಸಭಾ ಚುನಾವಣೆಯಲ್ಲಿ ಗೆದ್ದು ರಾಷ್ಟ್ರ ರಾಜಕಾರಣದ ದಡ ತಲುಪಿದ್ದರು.

ಖರ್ಗೆ ಅವರ ಪಕ್ಷ ನಿಷ್ಠೆಯನ್ನು ಪರಿಗಣಿಸಿದ ಎಐಸಿಸಿ ಅಧ್ಯಕ್ಷೆ ಸೋನಿಯಾಗಾಂಧಿ ಅವರು, ಖರ್ಗೆ ಅವರು ಮನಮೋಹನ್ ಸಿಂಗ್ ಅವರ ಸಂಪುಟದಲ್ಲಿ ಕಾರ್ಮಿಕ ಮತ್ತು ರೈಲ್ವೇ ಸಚಿವರಾಗಿ ಕಾರ್ಯ ನಿರ್ವಹಿಸಲು ಅವಕಾಶ ಕಲ್ಪಿಸಿಕೊಟ್ಟರು.

ಮುಂದೆ 2014ರಲ್ಲಿ ಕಾಂಗ್ರೆಸ್ ಪಕ್ಷ ದಿಲ್ಲಿಯಲ್ಲಿ ಅಧಿಕಾರ ಕಳೆದುಕೊಂಡರೂ, ಖರ್ಗೆ ಅವರನ್ನು ಲೋಕಸಭೆಯಲ್ಲಿ ಪಕ್ಷದ ನಾಯಕರನ್ನಾಗಿ ನೇಮಿಸಲು ಸೋನಿಯಾ ಗಾಂಧಿ ಒಲವು ತೋರಿದರು. ತಮಗೆ ಸಿಕ್ಕ ಅವಕಾಶವನ್ನು ಸಮರ್ಪಕವಾಗಿ ಬಳಸಿಕೊಂಡ ಮಲ್ಲಿಕಾರ್ಜುನ ಖರ್ಗೆ ಅವರು ಲೋಕಸಭೆಯಲ್ಲಿ ಪ್ರಧಾನಿ ನರೇಂದ್ರಮೋದಿ ಅವರಿಗೆ ತಕ್ಕ ಎದುರಾಳಿಯಾಗಿ ಕಾರ್ಯ ನಿರ್ವಹಿಸಿ ಯಶಸ್ವಿಯಾದರು.

ಮುಂದೆ 2019ರ ಲೋಕಸಭಾ ಚುನಾವಣೆಯಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರು ಸೋಲನನುಭವಿಸಿದರೂ, ಅವರು ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾಗುವಂತೆ ಸೋನಿಯಾಗಾಂಧಿ ನೋಡಿಕೊಂಡರು. ಎಐಸಿಸಿ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸಲು ತೀರ್ಮಾನವಾದಾಗ ಶುರುವಿನಲ್ಲಿ ರಾಜಸ್ತಾನ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಅವರನ್ನು ಆ ಜಾಗಕ್ಕೆ ತರಲು ಸೋನಿಯಾಗಾಂಧಿ ನಿರ್ಧರಿಸಿದ್ದರಾದರೂ, ಮುಖ್ಯಮಂತ್ರಿ ಪಟ್ಟವನ್ನು ಕಳೆದುಕೊಳ್ಳಲು ಅಶೋಕ್ ಗೆಹ್ಲೋಟ್ ಅವರು ಇಷ್ಟಪಡಲಿಲ್ಲ.

ಹೀಗಾಗಿ ತಮ್ಮ ಬೆಂಬಲಿಗ ಶಾಸಕರು ಇದಕ್ಕೆ ವಿರೋಧ ವ್ಯಕ್ತಪಡಿಸುತ್ತಿರುವುದಾಗಿ ಕಾಂಗ್ರೆಸ್ ಹೈಕಮಾಂಡ್‌ಗೆ ಅಶೋಕ್ ಗೆಹ್ಲೋಟ್ ಅವರು ಮನವರಿಕೆ ಮಾಡಿಕೊಟ್ಟಾಗ, ಸೋನಿಯಾಗಾಂಧಿ ಅವರ ಕಣ್ಣಿಗೆ ಕಾಣಿಸಿದವರೇ ಮಲ್ಲಿಕಾರ್ಜುನ ಖರ್ಗೆ. ದಲಿತ ಸಮುದಾಯದ ಮಲ್ಲಿಕಾರ್ಜುನ ಖರ್ಗೆ ಐದು ದಶಕಗಳಿಂದ ಪಕ್ಷದ ನಿಷ್ಠಾವಂತ ಸಿಪಾಯಿಯಾಗಿ ಕಾರ್ಯ ನಿರ್ವಹಿಸಿದ್ದು, ಕರ್ನಾಟಕದಲ್ಲಿ ಶಾಸಕರಾಗಿ, ಸಚಿವರಾಗಿ, ವಿರೋಧಪಕ್ಷದ ನಾಯಕರಾಗಿ, ಕೆಪಿಸಿಸಿ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದವರು.

ಅದೇ ರೀತಿ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಅವರು ಕಾರ್ಯ ನಿರ್ವಹಿಸಿದ ರೀತಿಯನ್ನು ಪರಿಗಣಿಸಿದ ಸೋನಿಯಾಗಾಂಧಿ ಅವರು ಮಲ್ಲಿಕಾರ್ಜುನ ಖರ್ಗೆ ಅವರಿಗೆ ಬೆಂಬಲ ನೀಡಿದರು ಎಂಬ ವಿಷಯ ರಹಸ್ಯವೇನಲ್ಲ. 1972ರಲ್ಲಿ ಮೊದಲ ಬಾರಿ ಶಾಸನಸಭೆ ಪ್ರವೇಶಿಸಿದ್ದ ಮಲ್ಲಿಕಾರ್ಜುನ ಖರ್ಗೆ ಸತತ ಒಂಭತ್ತು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರಲ್ಲದೆ, ಎರಡು ಬಾರಿ ಲೋಕಸಭೆಗೆ ಆಯ್ಕೆಯಾಗಿದ್ದರು.

ಪರಾಜಿತ ಅಭ್ಯರ್ಥಿ ಶಶಿ ತರೂರ್

ಸಂಸದ ಶಶಿ ತರೂರ್, ಭಾರತೀಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಸ್ಥಾನ ಸಿಗುವುದೆಂದರೆ ಅದು ದೊಡ್ಡ ಜವಾಬ್ದಾರಿ ಮತ್ತು ಗೌರವಾನ್ವಿತ ಹುದ್ದೆ. ಖರ್ಗೆಯವರು ಈ ಹುದ್ದೆ, ಸ್ಥಾನದಲ್ಲಿ ಯಶಸ್ಸು ಸಾಧಿಸಲಿ ಎಂದು ಹಾರೈಸಿದ್ದಾರೆ. ಈ ಕುರಿತು ನಂತರ ಟ್ವೀಟ್ ಮಾಡಿರುವ ಅವರು, ದೇಶದುದ್ದಕ್ಕೂ ಕಾಂಗ್ರೆಸ್ ಪಕ್ಷದ ನಾಯಕರು, ಸಹೋದ್ಯೋಗಿಗಳಿಂದ ಖರ್ಗೆಯವರಿಗೆ ಸಿಕ್ಕಿರುವ ಬೆಂಬಲ ಅಭೂತಪೂರ್ವವಾದದ್ದು, ಮುಂದೆಯೂ ಅಪಾರ ಸಂಖ್ಯೆಯಲ್ಲಿ ನಾಯಕರು, ಕಾರ್ಯಕರ್ತರ ಸಹಕಾರ, ಬೆಂಬಲದಿಂದ ಪಕ್ಷವನ್ನು ಮುನ್ನಡೆಸುವ ಕಾರ್ಯ ಮಾಡಿಕೊಂಡು ಹೋಗಲಿ ಎಂದು ಆಶಿಸಿದರು.

ಪತ್ರ ಸೋರಿಕೆ ಬಗ್ಗೆ ತರೂರ್ ವಿಷಾದ: ಉತ್ತರ ಪ್ರದೇಶದ ಮತದಾನದಲ್ಲಿ ಅಕ್ರಮ ನಡೆದಿದ್ದು ಅಲ್ಲಿನ ಮತಗಳನ್ನು ಅಸಿಂಧುಗೊಳಿಸಬೇಕೆಂದು ಕೇಂದ್ರ ಚುನಾವಣಾ ಪ್ರಾಧಿಕಾರಕ್ಕೆ ತಮ್ಮ ತಂಡ ಬರೆದಿದ್ದ ಆಂತರಿಕ ಪತ್ರ ಸೋರಿಕೆಯಾಗಿದ್ದು ವಿಷಾದಕರ. ಸಲ್ಮಾನ್ ಅನೀಝ್ ಅವರು ನೀಡಿರುವ ಸ್ಪಷ್ಟನೆ ಎಲ್ಲಾ ಅನಗತ್ಯ ವಿವಾದಗಳಿಗೆ ಇತಿಶ್ರೀ ಹಾಡುತ್ತದೆ ಎಂದು ನಾನು ಭಾವಿಸುತ್ತೇನೆ. ಈ ಚುನಾವಣೆ ಕಾಂಗ್ರೆಸ್ ಪಕ್ಷವನ್ನು ಬಲಪಡಿಸುವುದಕ್ಕೆ ಹೊರತು ಪಕ್ಷವನ್ನು ವಿಭಜಿಸುವುದಕ್ಕೆ ಅಲ್ಲ. ಇದನ್ನು ಇಲ್ಲಿಗೇ ಬಿಟ್ಟು ನಾವೆಲ್ಲರೂ ಒಟ್ಟಾಗಿ ಮುಂದುವರಿಯೋಣ ಎಂದು ಶಶಿ ತರೂರ್ ಫಲಿತಾಂಶ ಪ್ರಕಟಗೊಂಡ ನಂತರ ಟ್ವೀಟ್ ಮಾಡಿದ್ದಾರೆ.

ಸರ್ವೇ ಕಾರ್ಯ ಪೂರ್ಣ

ನಡೆಸಬೇಕಿರುವ ಬಹು ಪ್ರಯಾಸದ ಕೊನೆ ಹಂತದ ಸರ್ವೇ ಕಾರ್ಯ ನಡೆಸಲಾಗುತ್ತಿದೆ. ಇದರಲ್ಲಿ ಭೌಗೋಳಿಕತೆ, ಭೂಮಿಯ ಸ್ಥಿರತೆ ಮೊದಲಾದವುಗಳನ್ನು ನಿರ್ಧರಿಸಲಾಗುತ್ತದೆ. ಹಸಿರು ವಲಯ, ಬೆಟ್ಟ ಸಾಲುಗಳು, ನದಿ, ತೊರೆಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಈ ಸರ್ವೇ ಕಾರ್ಯಕ್ಕೆ ಅತ್ಯಾಧುನಿಕ ಡಿಫರೆನ್ಷಿಯಲ್ ಗ್ಲೋಬಲ್ ಪೊಜಿಷನಿಂಗ್ ಸಿಸ್ಟಂ(ಡಿಜಿಪಿಎಸ್) ತಂತ್ರಜ್ಞಾನ ಬಳಸಲಾಗುತ್ತಿದೆ ಎಂದು ತಿಳಿಸಿದ್ದಾರೆ. ರೈಲ್ವೇ ಮಾರ್ಗದ ಹಾದಿ ನಿರ್ಧಾರ ಮಾಡಿದ ಬಳಿಕ ದೊಡ್ಡ ಮತ್ತು ಕಿರು ಸೇತುವೆಗಳ ನಿರ್ಮಾಣ, ಸ್ಟೇಷನ್ ಗಳು, ತಡೆಗೋಡೆಗಳು, ಇಳಿಜಾರು ಪ್ರದೇ ಶಗಳಲ್ಲಿ ನಿರ್ಮಿಸಬೇಕಿರುವ ತಡೆಗೋಡೆಗಳ ನಿರ್ಮಾಣ ಕಾರ್ಯಗಳು ನಡೆಯಲಿದೆ ಎಂದು ರಾಮಯ್ಯ ತಿಳಿಸಿದ್ದಾರೆ.

ಸರ್ವೇಗೆ ಹೆಚ್ಚುವರಿ ಸಮಯ: ಬೆಳಗೊಳದಿಂದ ಪಿರಿಯಾಪಟ್ಟಣದ ಕಂಪಲಾಪುರದವರೆಗೆ ಸರ್ವೇ ಕಾರ್ಯ ಅತ್ಯಂತ ಸರಳವಾಗಿ ನಡೆದಿದ್ದು, ಇದಕ್ಕೆ ಆ ಪ್ರದೇಶಗಳ ಭೌಗೋಳಿಕ ಲಕ್ಷಣಗಳು ಕಾರಣವಾಗಿದೆ. ಈ ಭೂ ಪ್ರದೇಶ ಸಮತಟ್ಟಿನಿಂದ ಕೂಡಿದ್ದು, ಯಾವುದೇ ಅಡೆ ತಡೆಗಳಿಲ್ಲದೆ ಸರ್ವೇ ಕಾರ್ಯ ಪೂರ್ಣ ಗೊಳಿಸಲಾಗಿದೆ. ಪಿರಿಯಾಪಟ್ಟಣ ಬಳಿಕದ ಮಾರ್ಗ ತಲುಪುತ್ತಿದ್ದಂತೆಯೇ ಅತಿಯಾದ ಮಳೆ, ಹಸಿರು ಪ್ರದೇಶ, ಕೃಷಿ ಭೂಮಿ ಹಾಗೂ ಸಮವಲ್ಲದ ಭೂ ಭಾಗಗಳಿಂದ ಸರ್ವೇ ಕಾರ್ಯ ಬಸವನ ಹುಳುವಿನಂತೆ ಮಂದಗತಿಯಲ್ಲಿ ಸಾಗಿದೆ. ಪರಿಣಾಮವಾಗಿ ನಿಗದಿತ ಸಮಯಕ್ಕಿಂತ ಹೆಚ್ಚುವರಿ 1 ತಿಂಗಳು ಕಾಲಾ ವಕಾಶ ಪಡೆಯಲಾಗಿದ್ದು, ನವೆಂಬರ್ ತಿಂಗಳ ಅಂತ್ಯಕ್ಕೆ ಸಂಪೂರ್ಣ ಮಾರ್ಗದ ಅಂತಿಮ ಸರ್ವೇ ವರದಿಯನ್ನು ನೈರುತ್ಯ ರೈಲ್ವೇ ನೀಡಲಾಗುತ್ತದೆ ಎಂದು ತಿಳಿದು ಬಂದಿದೆ.



ಎರಡು ದಶಕದ ನಂತರ ಕಾಂಗ್ರೆಸ್‌ನ ಮೊದಲ ಗಾಂಧಿಯೇತರ ಅಧ್ಯಕ್ಷರಾಗಿ ಎರಡನೇ ಕನ್ನಡಿಗ

ಮಲ್ಲಿಕಾರ್ಜುನ ಖರ್ಗೆ ಆಯ್ಕೆ



ಮಲ್ಲಿಕಾರ್ಜುನ ಖರ್ಗೆ ಅವರ ಕುಟುಂಬದೊಂದಿಗೆ ಸೋನಿಯಾ ಗಾಂಧಿ, ಪುತ್ರಿ ಪ್ರಿಯಾಂಕ ಗಾಂಧಿ

ನವದೆಹಲಿ, ಅ.19– ಎಐಸಿಸಿ ನೂತನ ಅಧ್ಯಕ್ಷರಾಗಿ ಕರ್ನಾಟಕ ಮೂಲದ, ಕಾಂಗ್ರೆಸ್ ಹಿರಿಯ ನಾಯಕ, ರಾಜ್ಯಸಭಾ ಸದಸ್ಯ ಮಲ್ಲಿಕಾರ್ಜುನ ಖರ್ಗೆ ಆಯ್ಕೆಯಾಗಿದ್ದಾರೆ. ಈ ಮೂಲಕ ಹಂಗಾಮಿ ಅಧ್ಯಕ್ಷೆ ಸೋನಿಯಾ ಗಾಂಧಿಯವರ ಸ್ಥಾನದಲ್ಲಿ ಮಲ್ಲಿಕಾರ್ಜುನ ಖರ್ಗೆಯವರು ಕೂರಲಿದ್ದು, 24 ವರ್ಷಗಳ ನಂತರ ಗಾಂಧಿಯೇತರರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಇದರೊಂದಿಗೆ ಎಐಸಿಸಿ ಅಧ್ಯಕ್ಷ ಸ್ಥಾನ ಅಲಂಕರಿಸಿ ಎರಡನೇ ಕನ್ನಡಿಗ ಎಂಬ ಹೆಗ್ಗಳಿಕೆಗೆ ಖರ್ಗೆ ಪಾತ್ರರಾಗಿದ್ದಾರೆ. ಈ ಮೊದಲು ಎಸ್.ನಿಜಲಿಂಗಪ್ಪ ಅವರು ಎಐಸಿಸಿ ಅಧ್ಯಕ್ಷರಾಗಿ 1968–69 ರಲ್ಲಿ ಸೇವೆ ಸಲ್ಲಿಸಿದ್ದರು. ಈಗ ನೂತನ ಅಧ್ಯಕ್ಷರಾಗಿ ಆಯ್ಕೆಗೊಂಡ ಮಲ್ಲಿಕಾರ್ಜುನ ಖರ್ಗೆಯವರಿಗೆ ಪರಾಜಿತ ಅಭ್ಯರ್ಥಿ ಶಶಿ ತರೂರ್ ಅಭಿನಂದನೆ ಸಲ್ಲಿಸಿದ್ದಾರೆ. ಪಕ್ಷದ ಪುನರುಜ್ಜೀವನ ಆರಂಭವಾಗಿದೆ ಎಂದು ನಾನು ನಂಬುತ್ತೇನೆ ಎಂದು ಹೇಳಿಕೆಯಲ್ಲಿ ಶಶಿ ತರೂರ್ ಹೇಳಿದ್ದಾರೆ. ಮೊನ್ನೆ ಮತದಾನದ ದಿನವೂ ತರೂರ್ ಈ ಮಾತು ಹೇಳಿದ್ದರು.

2017 ಮತ್ತು 2019ರ ನಡುವಿನ ಎರಡು ವರ್ಷಗಳನ್ನು ಹೊರತುಪಡಿಸಿ ರಾಹುಲ್ ಗಾಂಧಿಯವರು ಅಧಿಕಾರ ವಹಿಸಿಕೊಂಡ ನಂತರ 1998 ರಿಂದ ಚುಕ್ಕಾಣಿ ಹಿಡಿದಿರುವ ಸೋನಿಯಾ ಗಾಂಧಿಯವರ ಸ್ಥಾನವನ್ನು ಖರ್ಗೆ ಅವರು ಬದಲಾಯಿಸಲಿದ್ದಾರೆ.

ಮಲ್ಲಿಕಾರ್ಜುನ ಖರ್ಗೆ ಅವರ ಮುಂದಿನ ಅಧಿಕಾರಾವಧಿ ಫಲಪ್ರದವಾಗಿರಲಿ – ಪ್ರಧಾನಿ ಮೋದಿ ಟ್ವೀಟ್

ಕಾಂಗ್ರೆಸ್ ಕೇಂದ್ರ ಚುನಾವಣಾ ಪ್ರಾಧಿಕಾರದ ಅಧ್ಯಕ್ಷ ಮಿಸ್ತ್ರಿ ಪಕ್ಷದ ಅಧ್ಯಕ್ಷೀಯ ಚುನಾವಣೆ ಪ್ರಕ್ರಿಯೆಯ ಬಗ್ಗೆ ತೃಪ್ತಿ ವ್ಯಕ್ತಪಡಿಸಿ ಇದು "ಮುಕ್ತ, ನ್ಯಾಯಯುತ ಮತ್ತು ಪಾರದರ್ಶಕ" ಎಂದು ಹೇಳಿದ್ದರು. ಇದು ರಹಸ್ಯ ಮತದಾನವಾಗಿದ್ದು, ಯಾರು ಯಾರಿಗೆ ಮತ ಹಾಕಿದರು ಎಂಬುದು ಯಾರಿಗೂ ತಿಳಿಯುವುದಿಲ್ಲ ಎಂದು ಹೇಳಿದ್ದರು.

ಗುಪ್ತ ಮತದಾನದಲ್ಲಿ ಪಕ್ಷದ ಮುಖ್ಯಸ್ಥರನ್ನು ಆಯ್ಕೆ ಮಾಡಲು ಎಲೆಕ್ಟೊರಲ್ ಕಾಲೇಜು ರಚಿಸಿದ ಒಟ್ಟು 9,915 ಪ್ರದೇಶ ಕಾಂಗ್ರೆಸ್ ಸಮಿತಿ (ಪಿಸಿಸಿ) ಪ್ರತಿನಿಧಿಗಳಲ್ಲಿ 9,500ಕ್ಕೂ ಹೆಚ್ಚು ಜನರು ಪಿಸಿಸಿ ಕಚೇರಿಗಳು ಮತ್ತು ಎಐಸಿಸಿ ಕೇಂದ್ರ ಕಚೇರಿಯಲ್ಲಿ ಮತ ಚಲಾಯಿಸಿದ್ದಾರೆ. ಚುನಾವಣೆಗೂ ಮುನ್ನ, ಖರ್ಗೆ ಅವರು ಪಕ್ಷದ ಅಧ್ಯಕ್ಷರಾದರೆ, ಪಕ್ಷದ ವ್ಯವಹಾರಗಳನ್ನು ನಡೆಸುವಲ್ಲಿ ಗಾಂಧಿ ಕುಟುಂಬದ ಸಲಹೆ ಮತ್ತು ಬೆಂಬಲವನ್ನು ಪಡೆಯುತ್ತೇನೆ ಎಂದು ಹೇಳಿದ್ದರು. ಕರ್ನಾಟಕ ಮೂಲದವರಾದ ಖರ್ಗೆಯವರ ಗೆಲುವಿಗೆ ಕರ್ನಾಟಕ ಮತ್ತು ದೆಹಲಿಯಲ್ಲಿ ಅವರ ಕಚೇರಿ ಮುಂದೆ ಬೆಂಬಲಿಗರು ಸಂಭ್ರಮಾಚರಣೆ ಮಾಡುತ್ತಿದ್ದಾರೆ.

ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ಒಗ್ಗೂಡಿ ಹೋರಾಡುತ್ತೇವೆ

ದೆಹಲಿ: ಕಾಂಗ್ರೆಸ್ ಅಧ್ಯಕ್ಷ ಚುನಾವಣೆಯಲ್ಲಿ ಗೆಲುವು ಸಾಧಿಸಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಲ್ಲಿಕಾರ್ಜುನ ಖರ್ಗೆ ನನ್ನ ನಿಲುವಿಗಾಗಿ ನನ್ನ ಕೈಲಾದಷ್ಟು ಪ್ರಯತ್ನಿಸುತ್ತೇನೆ ಎಂದು ಹೇಳಿದ್ದಾರೆ. ಪಕ್ಷದ ಆಂತರಿಕ ಚುನಾವಣೆಯಲ್ಲಿ ತಮ್ಮ ಎದುರಾಳಿಯಾಗಿದ್ದ ಶಶಿ ತರೂರ್ ಅವರೊಂದಿಗೆ ಒಟ್ಟಾಗಿ ಕೆಲಸ ಮಾಡುವುದಾಗಿ ಹೇಳಿದರು. ರಾಹುಲ್ ನನಗೆ ಕರೆ ಮಾಡಿ ಶುಭ ಹಾರೈಸಿದರು. ನಾನು ಪಕ್ಷದ ಸಿಪಾಯಿ ಮತ್ತು ಪಕ್ಷಕ್ಕಾಗಿ ಕೆಲಸ ಮಾಡುತ್ತೇನೆ. ಸೋನಿಯಾ ಗಾಂಧಿ ಅವರಿಗೆ ಧನ್ಯವಾದಗಳು. ಅವರ ನೇತೃತ್ವದಲ್ಲಿ ನಾವು ಎರಡು ಬಾರಿ ಕೇಂದ್ರದಲ್ಲಿ ಸರ್ಕಾರ ರಚಿಸಿದ್ದೇವೆ. ರಾಜ್ಯಗಳಲ್ಲೂ ನಾವು ಬಲಿಷ್ಠರಾಗಿದ್ದೆವು. ಅವರ ಪಾತ್ರ ನೆನಪಿನಲ್ಲಿ ಉಳಿಯುತ್ತದೆ ಎಂದು ಖರ್ಗೆ ಹೇಳಿದ್ದಾರೆ. ನಾವೆಲ್ಲರೂ ಪಕ್ಷದ ಕಾರ್ಯಕರ್ತರಂತೆ ಕೆಲಸ ಮಾಡಬೇಕು, ಪಕ್ಷದಲ್ಲಿ ದೊಡ್ಡವರು, ಚಿಕ್ಕವರು ಯಾರೂ ಇಲ್ಲ. ಕೋಮುವಾದದ ವೇಷದಲ್ಲಿ ಪ್ರಜಾಪ್ರಭುತ್ವ ಸಂಸ್ಥೆಗಳ ಮೇಲೆ ದಾಳಿ ಮಾಡುತ್ತಿರುವ ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ನಾವು ಒಗ್ಗಟ್ಟಿನಿಂದ ಹೋರಾಡಬೇಕಾಗಿದೆ ಎಂದು ಖರ್ಗೆ ಹೇಳಿದ್ದಾರೆ.

ಖರ್ಗೆಗೆ ಸಿದ್ದರಾಮಯ್ಯ, ಡಿಕೆಶಿ ಅಭಿನಂದನೆ

ಬೆಂಗಳೂರು, ಅ.19– ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಗೆಲುವು ಸಾಧಿಸಿದ್ದು, ಈ ಹಿನ್ನೆಲೆಯಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ರಾಜ್ಯದ ಇತರೆ ರಾಜಕೀಯ ನಾಯಕರು ಖರ್ಗೆಯವರಿಗೆ ಅಭಿನಂದನೆಗಳನ್ನು ತಿಳಿಸಿದ್ದಾರೆ.



ಟ್ವೀಟ್ ಮಾಡಿರುವ ಸಿದ್ದರಾಮಯ್ಯ ಅವರು, ಕಾಂಗ್ರೆಸ್ ಪಕ್ಷದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಹಾರ್ದಿಕ ಅಭಿನಂದನೆಗಳು. ಪ್ರತಿಭೆ ಮತ್ತು ಅನುಭವವನ್ನು ಮೈಗೂಡಿಸಿಕೊಂಡ ಖರ್ಗೆಯವರಿಗೆ ಕಾಂಗ್ರೆಸ್ ಪಕ್ಷವನ್ನು ಯಶಸ್ಸಿನ ಹಾದಿಯಲ್ಲಿ ಮುನ್ನಡೆಸುವ ಶಕ್ತಿ ಇದೆ. ಖರ್ಗೆಯವರ ಆಯ್ಕೆ ಕನ್ನಡಿಗರಿಗೂ ಹೆಮ್ಮೆಯ ಸಂಗತಿ ಎಂದು ಹೇಳಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಟ್ವೀಟ್ ಮಾಡಿ, ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ನೂತನ ಅಧ್ಯಕ್ಷರಾಗಿ ನೇಮಕಗೊಂಡಿರುವ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಹೃದಯಪೂರ್ವಕ ಅಭಿನಂದನೆಗಳು. ಅವರ ನಾಯಕತ್ವದಲ್ಲಿ ಕಾಂಗ್ರೆಸ್ ಪಕ್ಷ ಇನ್ನಷ್ಟು ಎತ್ತರಕ್ಕೇರಲಿದೆ ಎನ್ನುವ ವಿಶ್ವಾಸವಿದೆ ಎಂದು ತಿಳಿಸಿದ್ದಾರೆ.

ಕಾಂಗ್ರೆಸ್ ರಾಜ್ಯ ಘಟಕ ಟ್ವೀಟ್ ಮಾಡಿ, ಎಐಸಿಸಿ ಅಧ್ಯಕ್ಷರಾಗಿ ಚುನಾಯಿತರಾದ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರಾದ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಅಭಿನಂದನೆಗಳು. ಮಲ್ಲಿಕಾರ್ಜುನ್ ಖರ್ಗೆ ಅವರ ಸುದೀರ್ಘ ರಾಜಕೀಯ ಅನುಭವ, ಅಧ್ಯಯನ, ಜ್ಞಾನ, ಬದ್ಧತೆಗಳು ಕಾಂಗ್ರೆಸ್ ಪಕ್ಷವನ್ನು ಸೈದ್ಧಾಂತಿಕವಾಗಿ ಹಾಗೂ ರಾಜಕೀಯವಾಗಿ ಇನ್ನಷ್ಟು ಗಟ್ಟಿಯಾಗಿ ಕಟ್ಟುವಲ್ಲಿ ಸಹಕಾರಿಯಾಗಲಿದೆ ಎಂದು ಹೇಳಿದೆ. ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿಯವರು ಟ್ವೀಟ್ ಮಾಡಿ, ಎಐಸಿಸಿ ಅಧ್ಯಕ್ಷರಾಗಿ ಚುನಾಯಿತರಾದ ರಾಜ್ಯದ ಹಿರಿಯ ರಾಜಕಾರಣಿ, ಕಾಂಗ್ರೆಸ್ ಪಕ್ಷದ ಹಿರಿಯರಾದ ಖರ್ಗೆ ಅವರಿಗೆ ಅಭಿನಂದನೆಗಳು. ಖರ್ಗೆ ಅವರದ್ದು ಸುದೀರ್ಘ ರಾಜಕೀಯ ಅನುಭವ. ಅಚಲವಾದ ಪಕ್ಷನಿಷ್ಠೆ ಅವರನ್ನು ಈ ಉನ್ನತ ಹುದ್ದೆವರೆಗೂ ತಂದಿದೆ. ಖರ್ಗೆ ಅವರಿಂದ ಆ ಪಕ್ಷಕ್ಕೆ ಒಳ್ಳೆಯದಾಗಲಿ ಎಂದು ಹಾರೈಸುತ್ತೇನೆಂದು ಹೇಳಿದ್ದಾರೆ.

ಯುವಕರಿಗೆ ಹೃದಯಾಘಾತ ಆತಂಕಕಾರಿ ಬೆಳವಣಿಗೆ: ಡಾ.ಕೆ.ಎಸ್.ಸದಾನಂದ

ಜಯದೇವ ಹೃದ್ರೋಗ ಆಸ್ಪತ್ರೆ ವೈದ್ಯರು, ಸಿಬ್ಬಂದಿಯಿಂದ ಕೇಕ್ ಕತ್ತರಿಸಿ ಡಾ.ಸದಾನಂದರ ಹುಟ್ಟುಹಬ್ಬ ಆಚರಣೆ



ಮೈಸೂರು, ಅ.19– ಹೃದಯ ಕಾಯಿಲೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು 25 ರಿಂದ 30 ವರ್ಷದ ಯುವ ಜನರಿಗೂ ಹೃದಯಾಘಾತ ಸಂಭವಿಸುತ್ತಿರುವುದು ಆತಂಕಕಾರಿ ಬೆಳವಣಿಗೆ ಎಂದು ಮೈಸೂರು ಜಯದೇವ ಹೃದ್ರೋಗ ಸಂಸ್ಥೆಯ ವೈದ್ಯಕೀಯ ಅಧೀಕ್ಷಕ ಡಾ. ಕೆ.ಎಸ್. ಸದಾನಂದ ತಿಳಿಸಿದರು.

ಅವರ ಹುಟ್ಟುಹಬ್ಬದ ಅಂಗವಾಗಿ ಆಸ್ಪತ್ರೆಯ ವೈದ್ಯರು, ಸಿಬ್ಬಂದಿ ವರ್ಗದ ವತಿಯಿಂದ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಕೇಕ್ ಕತ್ತರಿಸಿ, ಶುಭಾಶಯ ಸ್ವೀಕರಿಸಿ ಮಾತನಾಡಿದ ಅವರು, ವೈದ್ಯರಿಗೆ ಈಗ ಹೆಚ್ಚಿನ ಒತ್ತಡವಿದ್ದು, ನಿಗದಿತ ಸಮಯಕ್ಕಿಂತ ಹೆಚ್ಚಾಗಿ ಕೆಲಸ ಮಾಡುತ್ತಿದ್ದಾರೆ. ಪ್ರತಿದಿನ ಆಸ್ಪತ್ರೆಗೆ 700 ಜನ ಹೊರ ರೋಗಿಗಳು ಬರುತ್ತಿದ್ದು, 50 ರಿಂದ 60 ಕ್ಯಾಥ್‌ಲ್ಯಾಬ್ ಪ್ರೊಸಿಜರ್‌ಗಳು ನಡೆಯುತ್ತಿವೆ. 280 ಜನ ಒಳರೋಗಿಗಳಾಗಿ ಚಿಕಿತ್ಸೆ ಪಡೆಯುತ್ತಿ ದ್ದರೂ, 20 ರಿಂದ 25 ರೋಗಿಗಳಿಗೆ ಟ್ರಾಲಿ ಮೇಲೆಯೇ ಚಿಕಿತ್ಸೆ ನೀಡುತ್ತಿದ್ದೇವೆ. ನಮ್ಮ ನಿರ್ದೇಶಕರಾದ ಡಾ॥ ಸಿ.ಎನ್. ಮಂಜುನಾಥ್ ಅವರ ಆದೇಶದ ಮೇರೆಗೆ 30 ಬೆಡ್‌ನ ಗಂಡಸರ ವಾರ್ಡ್, 12 ಬೆಡ್‌ನ ಐಸಿಯು ಈ ತಿಂಗಳಲ್ಲಿ ಪ್ರಾರಂಭವಾಗುತ್ತಿದೆ ಎಂದ ಅವರು, ಜನರು ಖಾಯಿಲೆ ಬರುವುದಕ್ಕಿಂತ ಮುಂಚೆ ಜಾಗೃತರಾಗಿ ಆರೋಗ್ಯವನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಉತ್ತಮ ಆಹಾರ, ವ್ಯಾಯಾಮ, 7 ಗಂಟೆ ನಿದ್ರೆ ಮಾಡಬೇಕು. ಸಾಮಾಜಿಕ ಜಾಲತಾಣಗಳಿಂದ ದೂರವಿದ್ದು, ಒತ್ತಡಗಳನ್ನು ಕಡಿಮೆ ಮಾಡಿಕೊಂಡು ಸಂತೋಷವಾಗಿದ್ದು, ವರ್ಷಕೊಮ್ಮೆ ಆರೋಗ್ಯ ತಪಾ ಸಣೆ ಮಾಡಿಸಿಕೊಳ್ಳಿ ಎಂದರು. ಈ ಸಂದರ್ಭದಲ್ಲಿ ಡಾ॥ ಹರ್ಷಬಸಪ್ಪ, ಡಾ॥ ಸಂತೋಷ್, ಡಾ॥ ರಾಜೀತ್, ಡಾ॥ ವೀಣಾನಂಜಪ್ಪ, ಡಾ॥ ಹೇಮಾರವೀಶ್, ಡಾ॥ ದೇವರಾಜ್, ಡಾ॥ ಪಾಂಡುರಂಗ, ಡಾ॥ ಶ್ರೀನಿಧಿಹೆಗ್ಗಡೆ, ಡಾ॥ ಚಂದ್ರಶೇಖರ್, ಡಾ॥ ಶರತ್, ಡಾ॥ ನಿತೀಶ್, ಡಾ॥ ಸಚಿನ್‌ರಾವ್, ಡಾ॥ ಶಿಶಿರ್‌ಮೀರಜ್, ಡಾ॥ ವಿನಾಯಕ, ಡಾ॥ ನಿಖಿಲ್, ನರ್ಸಿಂಗ್ ಅಧೀಕ್ಷಕ ಹರೀಶ್‌ಕುಮಾರ್, PRO. ವಾಣಿಮೋಹನ್, ಚಂಪಕಮಾಲ ಹಾಜರಿದ್ದರು.




ಜಯದೇವ ಹೃದ್ರೋಗ ಆಸ್ಪತ್ರೆಯ ಅಧೀಕ್ಷಕರಾದ ಡಾ.ಕೆ.ಎಸ್.ಸದಾನಂದ ಅವರ ಹುಟ್ಟುಹಬ್ಬದ ಅಂಗವಾಗಿ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕಿನ ಮಾಜಿ ಅಧ್ಯಕ್ಷ ಕೆ.ಉಮಾಶಂಕರ್, ನಿರ್ದೇಶಕ ಪಡುವಾರಹಳ್ಳಿ ಎಂ ರಾಮಕೃಷ್ಣ, ರಾ.ಸಿದ್ದರಾಮು, ಮೈಸೂರು ಲೋಕಸಭಾ ಕ್ಷೇತ್ರದ ವಿಜಿಲೆನ್ಸ್ ಕಮಿಟಿಯ ಸದಸ್ಯ ಎಂ. ಶಿವಪ್ರಕಾಶ್, ಮನೋಜ್, ಪುನೀತ್ ಅಭಿನಂದಿಸಿ, ಶುಭಾಶಯ ಕೋರಿದರು.

ರಾಷ್ಟ್ರೀಯ ಆಯುರ್ವೇದ ದಿನದ ಪ್ರಯುಕ್ತ ವಿಚಾರ ಸಂಕಿರಣ

ಪ್ರಸ್ತುತ ಆಯುರ್ವೇದ ವೈದ್ಯಕೀಯ ಪದ್ಧತಿ ಹೆಚ್ಚು ಪ್ರಾಮುಖ್ಯತೆ ಪಡೆಯುತ್ತಿದೆ

ವಿಟಿಯು ಕುಲಪತಿ ಡಾ.ಎಸ್.ವಿದ್ಯಾಶಂಕರ್

ಮೈಸೂರು,ಅ.19(ಪಿಎಂ)– ಪ್ರಸ್ತುತ ಅಲೋಪತಿ ಪದ್ಧತಿಯಂತೆಯೇ ಆಯುರ್ವೇದ ವೈದ್ಯಕೀಯ ಪದ್ಧತಿಯೂ ಪ್ರಾಮುಖ್ಯತೆ ಪಡೆದುಕೊಳ್ಳುತ್ತಿದೆ ಎಂದು ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯದ (ವಿಟಿಯು) ಕುಲಪತಿ ಡಾ.ಎಸ್.ವಿದ್ಯಾಶಂಕರ್ ಹೇಳಿದರು. ಮೈಸೂರಿನ ಶಾರದಾವಿಲಾಸ ಫಾರ್ಮಸಿ ಕಾಲೇಜಿನ ಪ್ರೊ.ಚಿನ್ನಸ್ವಾಮಿಶೆಟ್ಟಿ ಸಮ್ಮೇಳನ ಸಭಾಂಗಣದಲ್ಲಿ ಕಾಲೇಜಿನ ವತಿಯಿಂದ ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ ಮತ್ತು ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜಿನ ಸಹಯೋಗದಲ್ಲಿ ರಾಷ್ಟ್ರೀಯ ಆಯುರ್ವೇದ ದಿನದ ಪ್ರಯುಕ್ತ 'ಗಿಡಮೂಲಿಕೆಗಳ ಔಷಧೀಯ ಚಿಕಿತ್ಸೆ ಮತ್ತು ಮಾನಸಿಕ ಆರೋಗ್ಯಕ್ಕಾಗಿ ಆಯುಸ್ಯುಟಿಕಲ್ಸ್' ಕುರಿತು ಬುಧವಾರ ಹಮ್ಮಿಕೊಂಡಿದ್ದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದರು.



ಮೈಸೂರಿನ ಶಾರದಾವಿಲಾಸ ಫಾರ್ಮಸಿ ಕಾಲೇಜಿನ ಪ್ರೊ.ಚಿನ್ನಸ್ವಾಮಿಶೆಟ್ಟಿ ಸಮ್ಮೇಳನ ಸಭಾಂಗಣದಲ್ಲಿ ಬುಧವಾರ ಹಮ್ಮಿಕೊಂಡಿದ್ದ ವಿಚಾರ ಸಂಕಿರಣವನ್ನು ವಿಟಿಯು ಕುಲಪತಿ ಡಾ.ಎಸ್.ವಿದ್ಯಾಶಂಕರ್ ಉದ್ಘಾಟಿಸಿದರು.

ಮನುಷ್ಯನಿಗೆ ಆರೋಗ್ಯ ಮುಖ್ಯ. ಎಷ್ಟೇ ಸಂಪಾದಿಸಿದರೂ ಆರೋಗ್ಯ ಇಲ್ಲವಾದರೆ ಎಲ್ಲವೂ ವ್ಯರ್ಥ. ಜೀವನದಲ್ಲಿ ಸಾಧನೆಗೆ ಪರಿಶ್ರಮದೊಂದಿಗೆ ಉತ್ತಮ ಆರೋಗ್ಯವೂ ಅತ್ಯಗತ್ಯ. ಪ್ರಸ್ತುತ ಯುವ ಸಮೂಹದಲ್ಲಿ ಬಹುತೇಕ ಮಂದಿ ತಮ್ಮ ಆರೋಗ್ಯದ ಕಡೆಗೆ ಹೆಚ್ಚಿನ ಗಮನ ನೀಡುತ್ತಿಲ್ಲ. ತಡರಾತ್ರಿವರೆಗೆ ಸಿನಿಮಾ ನೋಡಿ ಮಲಗುವ ಪರಿಪಾಠ ಬೆಳೆಸಿಕೊಂಡಿದ್ದಾರೆ. ಯುವ ಜನರು ಅಥವಾ ಹಿರಿಯರೇ ಆಗಲಿ ಬೆಳಗ್ಗೆ ವ್ಯಾಯಾಮದ ಅಭ್ಯಾಸ ರೂಢಿಸಿಕೊಳ್ಳಬೇಕು ಎಂದರು. ಪೌಷ್ಟಿಕ ಆಹಾರ ಸೇವಿಸಿ, ದೇಹ ದಂಡಿಸದಿದ್ದರೆ, ಅನಗತ್ಯ ಕೊಬ್ಬಿನಾಂಶ ದೇಹದಲ್ಲಿ ಬೆಳವಣಿಗೆ ಕಾಣಲಿದೆ. ಇದು ಅನೇಕ ರೋಗ–ರುಜಿನಗಳಿಗೆ ಮೂಲವಾಗಲಿದೆ. ಹಾಗಾಗಿ ಮನಸ್ಸನ್ನು ನಿಗ್ರಹಿಸಿಕೊಂಡು ದೈಹಿಕ ಆರೋಗ್ಯ ಕಾಪಾಡಿಕೊಳ್ಳುವುದು ಅಗತ್ಯವಾಗಿದೆ. ಹೀಗೆ ಪ್ರತಿಯೊಬ್ಬರು ಆರೋಗ್ಯದತ್ತ ಕಾಳಜಿ ವಹಿಸಿದರೆ ಆಸ್ಪತ್ರೆಗಳ ಮೇಲಿನ ಒತ್ತಡ ಕಡಿಮೆಯಾಗಲಿದೆ. ಅನಾರೋಗ್ಯ ಹೆಚ್ಚಾದಂತೆ ಹೆಚ್ಚು ಹೆಚ್ಚು ಆಸ್ಪತ್ರೆ ನಿರ್ಮಿಸಿದರೂ ಸಾಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ನಾವು ನಮ್ಮ ಮನಸ್ಸು ನಿಗ್ರಹಿಸಿಕೊಂಡು ಆರೋಗ್ಯ ಕಾಪಾಡಿಕೊಳ್ಳಬೇಕು ಎಂದು ತಿಳಿಸಿದರು. ಇಂದು ನಮ್ಮೆಲ್ಲರ ಮೊದಲ ಗುರು ಗೂಗಲ್ ಆಗಿದ್ದು, ಇದರ ಪರಿಣಾಮ ಕಲಿಕೆಯ ಸಂಪನ್ಮೂಲಗಳು ಇಂದು ವಿಫಲವಾಗಿವೆ.

45 ವರ್ಷಗಳ ಹಿಂದೆ ನಾನು ವಿದ್ಯಾರ್ಥಿಯಾಗಿದ್ದ ಸಂದರ್ಭದಲ್ಲಿ ಶಿಕ್ಷಕರು ಹಾಗೂ ತರಗತಿಯ ಕೊಠಡಿಯೇ ನಮ್ಮ ಕಲಿಕೆಯ ಸಂಪನ್ಮೂಲವಾಗಿತ್ತು. ಆದರೆ ಇಂದು ಕಲಿಕೆಗೆ ಗೂಗಲ್ ಮೂಲಕ ಹಲವು ಮಾರ್ಗಗಳು ದೊರೆಯುತ್ತಿವೆ. ಜೊತೆಗೆ ಮೊಬೈಲ್ ಮೂಲಕ ಬೆರಳ ತುದಿಯಲ್ಲೇ ಕಲಿಕೆಗೆ ಸಂಪನ್ಮೂಲಗಳು ಲಭ್ಯವಾಗುತ್ತಿವೆ. ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕೇ ಹೊರತು ದುರ್ಬಳಕೆ ಮಾಡಿಕೊಳ್ಳಬಾರದು ಎಂದು ಸಲಹೆ ನೀಡಿದರು.

ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಪ್ರಾಂಶುಪಾಲ ಡಾ.ಗಜಾನನ ಹೆಗಡೆ ಮಾತನಾಡಿ, ಒಂದು ಕಾಲದಲ್ಲಿ ಆಯುರ್ವೇದ ವೈದ್ಯರು ಹಾಗೂ ಸಂಸ್ಥೆಗಳು ಸಮಾಜದಲ್ಲಿ ಗುರುತಿಸಿಕೊಳ್ಳಲು ಹಿಂಜರಿಕೆ ಇತ್ತು ಆದರೆ ಇಂದು ಆಯುರ್ವೇದ ವೈದ್ಯಕೀಯ ಶಾಸ್ತ್ರ ಮುಖ್ಯವಾಹಿನಿಗೆ ಬರುತ್ತಿದೆ. ಭಾರತೀಯ ವೈದ್ಯಕೀಯ ಶಾಸ್ತ್ರದ ಪ್ರಾಮುಖ್ಯತೆ ಇಂದು ನಮಗೆ ಗೊತ್ತಾಗ ತೊಡಗಿದೆ. ಕಳೆದ 8 ವರ್ಷಗಳಿಂದ ಈ ವೈದ್ಯಕೀಯ ಪದ್ಧತಿ ಪ್ರಯೋಜನದ ಬಗ್ಗೆ ಅರಿವು ಹೆಚ್ಚಾಗುತ್ತಿದೆ. ಇಂದು ಯೋಗ ವಿಶ್ವವ್ಯಾಪಿಯಾಗುತ್ತಿದ್ದು, ಆಯುರ್ವೇದ ವೈದ್ಯ ಪದ್ಧತಿಯೂ ಆ ಮಟ್ಟಕ್ಕೆ ತಲುಪಬೇಕಿದೆ ಎಂದು ಹೇಳಿದರು.

ಜೆಎಸ್‌ಎಸ್ ಆಯುರ್ವೇದ ಕಾಲೇಜಿನ ಪ್ರಾಧ್ಯಾಪಕ ಡಾ.ಗುರುಬಸವರಾಜು ಹಾಗೂ ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜಿನ ಡಾ.ವರ್ಷಾ ಕುಲಕರ್ಣಿ ವಿಷಯ ಮಂಡಿಸಿದರು. ಶಾರದಾವಿಲಾಸ ಶಿಕ್ಷಣ ಸಂಸ್ಥೆಗಳ ಗೌರವ ಕಾರ್ಯದರ್ಶಿ ಎನ್. ಚಂದ್ರಶೇಖರ್, ಆರೋಗ್ಯ ಭಾರತಿ ಅಧ್ಯಕ್ಷ ಡಾ.ಎ.ಎಸ್.ಚಂದ್ರಶೇಖರ್, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ.ಲಕ್ಷ್ಮೀನಾರಾಯಣ ಶೆಣೈ, ಶಾರದಾ ವಿಲಾಸ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ಡಾ.ಹನುಮಂತಚಾರ್ ಜೋಶಿ ಮತ್ತಿತರರು ಹಾಜರಿದ್ದರು.

ಅ.21ರಂದು ಸಿರಿಧಾನ್ಯ ಆಹಾರಗಳ ಪ್ರದರ್ಶನ

ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜಿನಲ್ಲಿ ರಾಷ್ಟ್ರೀಯ ಆಯುರ್ವೇದ ದಿನದ ಪ್ರಯುಕ್ತ ಅ.21 ರಂದು ಸಿರಿಧಾನ್ಯ ಆಹಾರಗಳ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಪ್ರದರ್ಶನವು ಸ್ಪರ್ಧೆಯಾಗಿ ನಡೆಯಲಿದ್ದು, ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಆಸಕ್ತ ಸಾರ್ವಜನಿಕರು ಭಾಗವಹಿಸಲು ಅವಕಾಶ ನೀಡಲಾಗುವುದು. ಸಿರಿಧಾನ್ಯ ಆಹಾರ ಕ್ರಮದಿಂದ ಪಡೆಯಬಹುದಾದ ಆರೋಗ್ಯದ ಪ್ರಯೋಜನ ತಿಳಿಸುವ ಉದ್ದೇಶದಿಂದ ಈ ಪ್ರದರ್ಶನ ಹಮ್ಮಿಕೊಳ್ಳುತ್ತಿದ್ದು, ಪ್ರದರ್ಶಕರು ಆಹಾರದ ಜೊತೆಗೆ ಅದರ ವಿವರ ಒಳಗೊಂಡ ಫಲಕವನ್ನೂ ಪ್ರದರ್ಶಿಸಬೇಕು.

–ಡಾ.ಗಜಾನನ ಹೆಗಡೆ, ಪ್ರಾಂಶುಪಾಲರು, ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು

ತಂಬಾಕು ದರ ಏಕಾಏಕಿ ಕುಸಿತ

ಕಗ್ಗುಂಡಿ ತಂಬಾಕು ಮಾರುಕಟ್ಟೆಯಲ್ಲಿ ರೈತರ ಪ್ರತಿಭಟನೆ

● ಹರಾಜು ಸ್ಥಗಿತಗೊಳಿಸಿ, ರಸ್ತೆ ತಡೆದು ಆಕ್ರೋಶ ● ಪ್ರತಿಭಟನೆ ಕೈ ಬಿಡದ ರೈತರ ಮೇಲೆ ಲಘು ಲಾಠಿ ಪ್ರಹಾರ ● ರೈತರ ಪ್ರತಿಭಟನೆಗೆ ಮಾಜಿ ಶಾಸಕರ ಬೆಂಬಲ



ಬೆಟ್ಟದಪುರ, ಅ.19– ತಂಬಾಕು ಬೆಲೆ ದಿಢೀರ್ ಕುಸಿತಗೊಂಡ ಹಿನ್ನೆಲೆಯಲ್ಲಿ ಆಕ್ರೋಶಗೊಂಡ ರೈತರು ಉತ್ತಮ ಬೆಲೆ ನೀಡುವಂತೆ ಆಗ್ರಹಿಸಿ ತಾಲೂಕಿನ ಕಗ್ಗುಂಡಿ ತಂಬಾಕು ಹರಾಜು ಮಾರುಕಟ್ಟೆಯನ್ನು ಸ್ಥಗಿತಗೊಳಿಸಿ, ರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಈ ವೇಳೆ ಪ್ರತಿಭಟನೆ ಕೈ ಬಿಡಲು ನಿರಾಕರಿಸಿದ ರೈತರ ಮೇಲೆ ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದ್ದು, ಇದರಿಂದ ಪರಿಸ್ಥಿತಿ ಮತ್ತಷ್ಟು ಬಿಗುವಿನಿಂದ ಕೂಡಿ ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು.

ತಾಲೂಕಿನ ಕಗ್ಗುಂಡಿ ಹರಾಜು ಮಾರುಕಟ್ಟೆಯಲ್ಲಿ ಬುಧವಾರ ಎಂದಿನಂತೆ ಹರಾಜು ಪ್ರಕ್ರಿಯೆ ಆರಂಭವಾಗುತ್ತಿದ್ದಂತೆ ಉತ್ತಮ ದರ್ಜೆಯ (ಗ್ರೇಡ್ ಒನ್)ತಂಬಾಕಿಗೆ 230 ರೂ. ಹಾಗೂ ಮಧ್ಯಮ ದರ್ಜೆ ತಂಬಾಕಿಗೆ 180 ರೂ.ಗಳಿಗೆ ಖರೀದಿಸಲಾಗುವುದು ಎಂದು ತಿಳಿಸಲಾಯಿತು. ಇದರಿಂದ ಪ್ರತಿ ಕೆಜಿಗೆ 30 ರಿಂದ 70 ರೂ.ಗಳವರೆಗೆ ದರ ಕುಸಿಯಾಗಿ ರೈತರಿಗೆ ನಷ್ಟವಾಗುವ ಪರಿಸ್ಥಿತಿ ನಿರ್ಮಾಣಗೊಂಡಿತ್ತು. ಈ ಸಂದರ್ಭದಲ್ಲಿ ಆಕ್ರೋಶಗೊಂಡ ರೈತರು ಏಕಾಏಕಿ ತಂಬಾಕು ಬೆಲೆಯನ್ನು ಕಡಿಮೆ ಮಾಡಿರುವುದನ್ನು ವಿರೋಧಿಸಿ ಹರಾಜು ಪ್ರಕ್ರಿಯೆಯನ್ನು ತಡೆದು ಆಕ್ರೋಶ ವ್ಯಕ್ತಪಡಿಸಿದರು.

ಆಕ್ರೋಶಗೊಂಡ ರೈತರನ್ನು ಸಮಾಧಾನಪಡಿಸಲು ಯತ್ನಿಸಿದ ತಂಬಾಕು ಹರಾಜು ಅಧೀಕ್ಷಕರ ಮಾತಿಗೂ ಕ್ಯಾರೆ ಎನ್ನದ ರೈತರು ರಸ್ತೆ ತಡೆದು ಪ್ರತಿಭಟನೆ ನಡೆಸಲು ಮುಂದಾದರು. ಯಾವುದೇ ಸಬೂಬು ಹೇಳದೆ ಹಿಂದಿನ ದಿನದ ದರವನ್ನು ನೀಡಿ, ಇಲ್ಲದಿದ್ದರೆ ಹರಾಜು ಪ್ರಕ್ರಿಯೆಯನ್ನು ನಿಲ್ಲಿಸಿ ಎಂದು ರೈತರು ಆಗ್ರಹಿಸಿದರು.

ಮಾಜಿ ಶಾಸಕರ ಬೆಂಬಲ: ಪ್ರತಿಭಟನೆ ತೀವ್ರವಾಗುತ್ತಿದ್ದಂತೆ ಸ್ಥಳಕ್ಕೆ ಕಾಂಗ್ರೆಸ್ ಪಕ್ಷದ ಮಾಜಿ ಶಾಸಕ ಕೆ.ವೆಂಕಟೇಶ್ ಹಾಗೂ ಮಂಡಳಿಯ ಉಪಾಧ್ಯಕ್ಷ ಎಚ್.ಸಿ. ಬಸವರಾಜ್ ಆಗಮಿಸಿ ರೈತರನ್ನು ಸಮಾಧಾನಪಡಿಸಲು ಮುಂದಾದರು. ಈ ವೇಳೆ ಮಾಜಿ ಶಾಸಕ ಕೆ. ವೆಂಕಟೇಶ್ ರೈತರ ಪ್ರತಿಭಟನೆಗೆ ಬೆಂಬಲ ವ್ಯಕ್ತಪಡಿಸಿ ಮಾತನಾಡಿ, ಅತಿವೃಷ್ಟಿಯಿಂದ ತಂಬಾಕು ಉತ್ಪಾದನೆ ಕಡಿಮೆಯಾಗಿದ್ದು ರೈತರಿಗೆ ಉತ್ಪಾದನಾ ವೆಚ್ಚವೂ ಹೆಚ್ಚಾಗಿದೆ. ರೈತರನ್ನು ಉಳಿಸುವ ನಿಟ್ಟಿನಲ್ಲಿ ತಂಬಾಕು ಮಂಡಳಿಯು ರೈತರಿಗೆ ಸಹಕರಿಸಬೇಕು. ಸರಿಯಾದ ಬೆಲೆ ಕೊಡದೆ ಇರುವ ಕಾರಣಕ್ಕೆ ರೈತರು ಪ್ರತಿಭಟನೆಗೆ ಮುಂದಾಗಿದ್ದಾರೆ. ಇದಕ್ಕೆ ನನ್ನ ಸಂಪೂರ್ಣ ಬೆಂಬಲ ಇದೆ. ಹಿಂದಿನ ದಿನಗಳಲ್ಲಿ ಇದ್ದ ಬೆಲೆಯನ್ನು ನೀಡಬೇಕು. ಏಕಾಏಕಿ ಬೆಲೆ ಕಡಿಮೆ ಮಾಡಿರುವುದು ಸರಿಯಲ್ಲ. ಮಾರುಕಟ್ಟೆ ಆರಂಭವಾದ ಕೆಲವೇ ದಿನಗಳಲ್ಲಿ ಏಕಾಏಕಿ ತಂಬಾಕು ಬೆಲೆಯನ್ನು 80 ರಿಂದ 90 ರೂ.ಗಳ ಆಸುಪಾಸಿನಷ್ಟು ಕಡಿಮೆ ಮಾಡಿ, ತಂಬಾಕು ಕೈಗೊಳ್ಳಲು ಮುಂದಾಗಿರುವ ಕಂಪನಿಗಳ ಧೋರಣೆ ಸರಿ ಇಲ್ಲ. ಇದರಿಂದ ರೈತರು ಸಂಕಷ್ಟಕ್ಕೆ ಒಳಗಾಗುತ್ತಾರೆ ಎಂದರು.

ಪ್ರಾದೇಶಿಕ ವ್ಯವಸ್ಥಾಪಕ ಲಕ್ಷ್ಮಣ್ ರಾವ್ ಮಾತನಾಡಿ, ಮಂಡಳಿಯು ಇಂದಿಗೂ ರೈತರಿಗೆ ಅನ್ಯಾಯವಾಗಲು ಬಿಡುವುದಿಲ್ಲ. ರೈತರ ಸಂಕಷ್ಟವನ್ನು ಅರ್ಥಮಾಡಿಕೊಂಡು ಉತ್ತಮ ದರ ದೊರಕಿಸಿಕೊಡುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ. ಇಂದು ಕಂಪನಿಗಳ ಜೊತೆ ಮೈಸೂರಿನ ಕಚೇರಿಯಲ್ಲಿ ಸಭೆ ನಡೆಸಿ ಎಲ್ಲರಿಗೂ ಪರಿಸ್ಥಿತಿ ಅರ್ಥ ಮಾಡಿಸಿ ಹಿಂದಿನ ದಿನದ ದರ ವನ್ನು ನೀಡುವಂತೆ ಮನವೊಲಿಸುವುದಾಗಿ ತಿಳಿಸಿದರು ಹಾಗೂ ನಾಳೆ ಎಂದಿನಂತೆ ಮಾರುಕಟ್ಟೆ ನಡೆಯಲಿದೆ ಎಂದು ರೈತರಿಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ತಂಬಾಕು ಮಂಡಳಿಯ ಉಪಾಧ್ಯಕ್ಷ ಎಚ್.ಸಿ. ಬಸವರಾಜ್, ತಂಬಾಕು ಹರಾಜು ಅಧೀಕ್ಷಕ ಪ್ರಭಾಕರನ್, ಶಂಭುಲಿಂಗೇಗೌಡ, ರಾಮಮೋಹನ್, ಸೂರಿ, ರೈತರಾದ ಶ್ರೀನಿವಾಸ್, ತುಂಗಾ, ಹರೀಶ್, ಪ್ರತಾಪ್, ನಂದೀಶ, ರಾಮೇಗೌಡ, ಸೋಮಣ್ಣ ಕಾಳನಾಯ್ಕ, ಮಹಮದ್, ಯೋಗಣ್ಣ ಸೇರಿದಂತೆ ಸಾವಿರಾರು ರೈತರು ಹಾಜರಿದ್ದರು.

ತಂಬಾಕು ಮಂಡಳಿಯಲ್ಲಿ ನಡೆದಿರುವ ತಂಬಾಕು ಬೆಲೆ ಕುಸಿತ ರೈತರ ಹೋರಾಟಕ್ಕೆ ಪ್ರತಿಭಟನೆಯನ್ನು ತೀವ್ರ ಮಾಜಿ ಮುಖ್ಯ ಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರು ನಾಳೆ (ಗುರುವಾರ) ಪಿರಿಯಾಪಟ್ಟಣದ ತಂಬಾಕು ಮಂಡಳಿಗೆ ಭೇಟಿ ನೀಡಲಿದ್ದಾರೆ ಎಂದು ಶಾಸಕ ಕೆ ಮಹದೇವ್ ತಿಳಿಸಿದ್ದಾರೆ.

ರೈತರಿಗೆ ಲಾಠಿ ಏಟು

ವಿಷಯ ತಿಳಿದು ಸರ್ಕಲ್ ಇನ್ಸ್‌ಪೆಕ್ಟರ್ ಜಗದೀಶ್ ನೇತೃತ್ವದಲ್ಲಿ ಪೊಲೀಸರು ಸ್ಥಳಕ್ಕೆ ಆಗಮಿಸಿದರು. ಈ ವೇಳೆ ರೈತರು ಪ್ರತಿಭಟನೆಯನ್ನು ನಿಲ್ಲಿಸುವಂತೆ ಪೊಲೀಸರು ತಿಳಿಸಿದರು. ಆದರೆ ರೈತ ಮುಖಂಡರು ನಮಗೆ ಅನ್ಯಾಯವಾಗಿದೆ ಎಂದು ಹೇಳಿ ಪ್ರತಿಭಟನೆ ಮುಂದುವರಿಸಿದರು. ಆಗ ಪೊಲೀಸರು ರೈತರನ್ನು ಚದುರಿಸಲು ಲಾಠಿ ಬೀಸಿದರು. ಈ ವೇಳೆ ಕೆಲವು ರೈತರಿಗೆ ಲಾಠಿ ಏಟು ಬಿದ್ದವು. ಆಗ ರೈತರು ಪೊಲೀಸರ ವಿರುದ್ಧ ಪ್ರತಿಭಟನೆ ನಡೆಸಿದರು. ರೈತರ ಮೇಲೆ ಲಾಠಿ ಚಾರ್ಜ್ ಮಾಡಿದ ಪೊಲೀಸರ ವಿರುದ್ಧ ರೈತ ಸಂಘ ಆಕ್ರೋಶ ವ್ಯಕ್ತಪಡಿಸಿ, ಈ ಬಾರಿ ಮಳೆಯಿಂದಾಗಿ ತಂಬಾಕು ಬೆಳೆ ತೀವ್ರ ಕುಸಿತ ಕಂಡಿದ್ದು, ಸಂಕಷ್ಟದಲ್ಲಿ ತಂಬಾಕು ಬೆಳೆದಿದ್ದೇವೆ. ನಮಗೆ ನ್ಯಾಯಯುತವಾದ ಬೆಲೆ ಸಿಗದಿದ್ದಾಗ ಹೋರಾಟ ಮಾಡುವ ರೈತರ ಮೇಲೆ ಪೊಲೀಸರು ಲಾಠಿ ಚಾರ್ಜ್ ಮಾಡಿರುವುದನ್ನು ರೈತಸಂಘ ಖಂಡಿಸಲಿದೆ ಎಂದರು.

ರೈತರು ಬೆಳೆದ ಫಸಲನ್ನು ಸಾಗಿಸಲು ರಸ್ತೆಯೇ ಇಲ್ಲ

ಮೊರ್ಕನ ಕಾಲುವೆ ಪಕ್ಕದ ರಸ್ತೆಯ ಅಭಿವೃದ್ಧಿ ಯಾವಾಗ?



ಬನ್ನೂರು, ಅ.19– ರೈತರು ಸಾಲ–ಸೋಲ ಮಾಡಿ ಕಷ್ಟ ಪಟ್ಟು ಬೆಳೆದ ಫಸಲನ್ನು ಸಾಗಿಸಲು ಇಲ್ಲಿ ರಸ್ತೆಯೇ ಇಲ್ಲ..., ಇದ್ದಂತ ಹಳೆಯ ಕಾಲದ ಮಣ್ಣಿನ ರಸ್ತೆ ಗಿಡಗಂಟೆಯಿಂದ ಮುಚ್ಚಿ ಹೋಗಿದ್ದು, ಹಳ್ಳ–ಕೊಳ್ಳದಿಂದ ಓಡಾಡಲು ಆಗದಂತ ಪರಿಸ್ಥಿತಿ ನಿರ್ಮಾಣವಾಗಿದೆ.

ಪಟ್ಟಣದ ಟೌನ್‌ನ ಮಧ್ಯಭಾಗದಲ್ಲಿರುವ ಎಂ.ಎಂ.ರಸ್ತೆಯ ಪೂರ್ಣಿಮಾ ಬಾರ್ ಸಮೀಪದ ಮೊರ್ಕನ ಕಾಲುವೆ ಪರಿಸ್ಥಿತಿ ಇದು. ಹಲವಾರು ವರ್ಷಗಳಿಂದ ಸಂಬಂಧಿಸಿದ ಅಧಿಕಾರಿಗಳು ಸೇರಿದಂತೆ ಶಾಸಕರ ಗಮನಕ್ಕೆ ತಂದರೂ ಯಾವುದೇ ಪ್ರಯೋಜನ ಆಗಿಲ್ಲ ಎಂದು ರೈತ ಮುಖಂಡರು ಆರೋಪಿಸುತ್ತಾರೆ.

ಚಿಕ್ಕಮಾದನಾಯಕರು ಶಾಸಕರಾಗಿದ್ದಾಗ ಈ ರಸ್ತೆಯನ್ನು ಅಭಿವೃದ್ಧಿಪಡಿಸಿ ರೈತರಿಗೆ ಸುಗಮ ಮಾಡಿಕೊಟ್ಟಿದ್ದರು. ಆ ನಂತರದ ದಿನದಲ್ಲಿ ಯಾರೂ ಗಮನ ಹರಿಸದ ಹಿನ್ನಲೆಯಲ್ಲಿ ಈ ರಸ್ತೆ ಸಂದಿಯಾಗಿ ಮಾರ್ಪಟ್ಟು ರೈತರು ಹರಸಾಹಸದಿಂದ ತಮ್ಮ ಫಸಲನ್ನು ಹಾಗೂ ಪಶುಗಳ ಮೇವನ್ನು ಸಾಗಿಸುವಂತಾಗಿದೆ. ಈ ವ್ಯಾಪ್ತಿಯಲ್ಲಿ ಸುಮಾರು ಸಾವಿರಾರು ಹೆಕ್ಟೇರ್ ವ್ಯವಸಾಯ ಭೂಮಿ ಇದ್ದು, ಬನ್ನೂರು, ಅತ್ತಳ್ಳಿ, ಕುಂತನಹಳ್ಳಿ, ಗಾಣಿಗನಕೊಪ್ಪಲು ಸೇರಿದಂತೆ ಹಲವಾರು ರೈತರು ಇದೇ ಮಾರ್ಗವಾಗಿ ತಮ್ಮ ಫಸಲನ್ನು ಸಾಗಿಸಬೇಕಿದೆ.

ಈ ರಸ್ತೆ ಸಂಪೂರ್ಣವಾಗಿ ಓಡಾಡದಂತ ಕನಿಷ್ಟ ಪರಿಸ್ಥಿತಿಗೆ ತಲುಪಿರುವುದರಿಂದ ಫಸಲನ್ನು ಹಲವಾರು ಕಿಲೋ ಮೀಟರ್‌ಗಳಿಂದ ಹೊತ್ತು ತಂದು ವಾಹನಗಳಿಗೆ ಹಾಕುವಂತ ಪರಿಸ್ಥಿತಿ ಇದೆ.

" ಮೊರ್ಕನ ಕಾಲುವೆ ತುಂಬಾ ಹಳೆಯದಾದ ಕಾಲುವೆಯಾಗಿದ್ದು, ಈ ಭಾಗದ ರೈತರ ಜೀವನಾಡಿಯಾಗಿದೆ. ಇದರ ಪಕ್ಕದ ರಸ್ತೆ ರೈತರ ಓಡಾಟಕ್ಕೆ ಅಸಮರ್ಪಕವಾಗಿದ್ದು, ಈ ರಸ್ತೆಯಲ್ಲಿ ಪಾದಚಾರಿಗಳು ಸಹ ಓಡಾಡಲು ಹೆದರುವಂತ ಸ್ಥಿತಿಯಲ್ಲಿ ಹದಗೆಟ್ಟಿದೆ. ಇಲ್ಲಿ ಸುಮಾರು 1500 ಎಕರೆ ವ್ಯವಸಾಯ ಭೂಮಿ ಇದ್ದು, ಇದರಿಂದ ರೈತರು ತಾವು ಬೆಳೆದ ಭತ್ತ, ಕಬ್ಬು ಫಸಲನ್ನು ಸಾಗಿಸಲು ಕಷ್ಟ ಪಡುವಂತಾಗಿದೆ. ಸುಮಾರು 20 ವರ್ಷದಿಂದ ರಸ್ತೆ ಪರಿಸ್ಥಿತಿ ಹೀಗೆ ಇದ್ದರು ಯಾರೂ ಈ ಬಗ್ಗೆ ಗಮನ ಹರಿಸಿಲ್ಲ. ಅಧಿಕಾರಿಗಳು, ಸ್ಥಳೀಯ ಶಾಸಕರು ಈ ಬಗ್ಗೆ ಗಮನ ಹರಿಸಿ ಸಾವಿರಾರು ರೈತರ ಜೀವನ ಉಳಿಸಬೇಕಿದೆ.

–ಹುಚ್ಚೇಗೌಡ, ರಾಜ್ಯ ರೈತ ಸಂಘದ ಹೋಬಳಿ ಅಧ್ಯಕ್ಷ

ಪುನೀತ್‌ಗೆ ನಿಂದನೆ; ಆರೋಪಿ ಮೇಲೆ ಕ್ರಮಕ್ಕೆ ಆಗ್ರಹಿಸಿ ಪ್ರತಿಭಟನೆ



ನಂಜನಗೂಡು, ಅ.19– ನಟ ಪುನೀತ್ ರಾಜಕುಮಾರ್ ಅವರನ್ನು ಅವಹೇಳನವಾಗಿ ನಿಂದಿಸಿರುವ ಲಿಂಗದೇವರುಕೊಪ್ಪಲಿನ ಯುವಕ ಪುಟ್ಟು ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಪುನೀತ್ ರಾಜಕುಮಾರ್ ಅಭಿಮಾನಿ ಬಳಗದ ಕಾರ್ಯಕರ್ತರು ಬುಧವಾರ ನಗರದಲ್ಲಿ ಪ್ರತಿಭಟನೆ ನಡೆಸಿ ಪೊಲೀಸರಿಗೆ ಮನವಿ ಸಲ್ಲಿಸಿದರು.

ನಗರದ ವಿಶ್ವೇಶ್ವರಯ್ಯ ವೃತ್ತದಲ್ಲಿ ಸಂಘಟಿತರಾದ ಪುನೀತ್ ಅಭಿಮಾನಿಗಳು ಆರೋಪಿ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಪುಟ್ಟು ಭಾವಚಿತ್ರವನ್ನು ದಹಿಸಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ನಂಜನಗೂಡು ಪಟ್ಟಣ ಪೊಲೀಸ್ ಠಾಣೆಗೆ ತೆರಳಿ ದೂರು ಸಲ್ಲಿಸಿದರು.

ಈ ಸಂದರ್ಭ ಪುನೀತ್ ಅಭಿಮಾನಿ ಬಳಗದ ಅಧ್ಯಕ್ಷ ನಾರಾಯಣ್ ಮಾತನಾಡಿ, ರಾಜ್ಯದ ಜನರ ಅಚ್ಚುಮೆಚ್ಚಿನ ನಟ ಪುನೀತ್ ರಾಜಕುಮಾರ್ ತಮ್ಮ ಸಮಾಜಮುಖಿ ಸೇವಾ ಕಾರ್ಯಗಳಿಂದ ಭೌತಿಕವಾಗಿ ಮರೆಯಾಗಿದ್ದರೂ ಜನರ ಮನಸ್ಸಿನಲ್ಲಿ ಸದಾ ಇದ್ದಾರೆ. ಆದರೆ ಮೈಸೂರಿನ ಲಿಂಗದೇವರುಕೊಪ್ಪಲು ಗ್ರಾಮದ ನಿವಾಸಿ ಮಲ್ಲಿಕಾರ್ಜುನ ಅಲಿಯಾಸ್ ಪುಟ್ಟು ಎಂಬಾತ ಸಾಮಾಜಿಕ ಜಾಲತಾಣದಲ್ಲಿ ಪುನೀತ್ ರಾಜಕುಮಾರ್ ಅವರ ಕುರಿತು ಅವಮಾನಕಾರಿ ಹೇಳಿಕೆ ನೀಡಿರುವುದು ಕನ್ನಡಿಗರಿಗೆ ಅಪಮಾನ ಮಾಡಿದಂತಾಗಿದೆ. ಇದರಿಂದಾಗಿ ಅಪ್ಪು ಅಭಿಮಾನಿಗಳ ಮನಸ್ಸಿಗೆ ಬಹಳ ನೋವುಂಟಾಗಿದ್ದು, ಕೂಡಲೇ ಆತನನ್ನು ಬಂಧಿಸಿ ಗಡಿಪಾರು ಮಾಡುವ ಮೂಲಕ ಇಂತಹ ಘಟನೆಗಳು ಪುನರಾವರ್ತನೆಯಾಗದಂತೆ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು. ಪ್ರತಿಭಟನೆಯಲ್ಲಿ ಪುನೀತ್ ರಾಜಕುಮಾರ್ ಅಭಿಮಾನಿಗಳಾದ ಸತ್ಯನಾರಾಯಣ, ಮಂಜು, ಆನಂದ್, ಕಿರಣ್, ಮಂಜುನಾಥ, ನಾಗರಾಜು, ಗೌತಮ್, ಪುನೀತ್ ಮತ್ತಿತರರಿದ್ದರು.

ಅ.28, ಕನ್ನಡ ಕವಿಗೋಷ್ಠಿ, ನನ್ನ ನಾಡು, ನನ್ನ ಹಾಡು ಕಾರ್ಯಕ್ರಮ



ತಿ.ನರಸೀಪುರ, ಅ.19– ಕನ್ನಡ ರಾಜ್ಯೋತ್ಸವದ ಅಂಗವಾಗಿ ಕನ್ನಡ ಕವಿ ಗೋಷ್ಠಿ ಹಾಗೂ ನನ್ನ ನಾಡು–ನನ್ನ ಹಾಡು ಎಂಬ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪುಟ್ಟಸ್ವಾಮಿ ಹೇಳಿದರು.

ಪಟ್ಟಣದ ತಾಲೂಕು ಪತ್ರಕರ್ತರ ಸಂಘದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಕಾರ್ಯಕ್ರಮದ ಬಗ್ಗೆ ವಿವರ ನೀಡಿದ ಅವರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯ ಸಂಯುಕ್ತಾಶ್ರಯದಲ್ಲಿ ಪಟ್ಟಣದ ಗುರು ಭವನದಲ್ಲಿ ಅ.28 ರಂದು ಈ ಕಾರ್ಯಕ್ರಮಗಳು ನಡೆಯಲಿದ್ದು ಕವಿಗೋಷ್ಠಿಯಲ್ಲಿ ಭಾಗವಹಿಸುವವರು ತಾವು ರಚಿಸಿದ ಎರಡು ಕವನಗಳನ್ನು ಸಾಹಿತ್ಯ ಪರಿಷತ್ ಕಚೇರಿಗೆ ಕಳುಹಿಸಬಹುದಾಗಿದೆ. ಆಯ್ಕೆಯಾದ ಕವನ ವಾಚಿಸಲು 3 ನಿಮಿಷಗಳ ಸಮಯವನ್ನು ವೇದಿಕೆಯಲ್ಲಿ ನೀಡಲಾಗುತ್ತದೆ ಎಂದು ತಿಳಿಸಿದರು.

ನನ್ನ ನಾಡು–ನನ್ನ ಹಾಡು ಕಾರ್ಯಕ್ರಮದಲ್ಲಿ ಹಾಡಲು ಬಯಸುವ ಗಾಯಕರು ಕಚೇರಿಗೆ ಅರ್ಜಿ ಸಲ್ಲಿಸಬಹುದು. ಸ್ಪರ್ಧೆಯಲ್ಲಿ ಕುವೆಂಪು ರಚಿಸಿರುವ ಭಾರತ ಜನನಿಯ ತನುಜಾತೆ, ಬಾರಿಸು ಕನ್ನಡ ಡಿಂಡಿಮವ, ಉಯಲಗೋಳ ನಾರಾಯಣರಾವ್ ಅವರ ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು, ಡಿ.ಎಸ್.ಕರ್ಕಿಯವರ ಹಚ್ಚೇವು ಕನ್ನಡದ ದೀಪ, ಚನ್ನವೀರ ಕಣವಿಯವರ ವಿಶ್ವ ವಿನೂತನ ವಿದ್ಯಾಚೇತನ ಹಾಗೂ ಹಂಸಲೇಖ ರಚನೆಯ ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು ಹಾಡುಗಳನ್ನು ಮಾತ್ರವೇ ಹಾಡಲು ಅವಕಾಶ ಇರುತ್ತದೆ. ಎರಡೂ ಕಾರ್ಯಕ್ರಮದಲ್ಲಿ ಭಾಗವಹಿಸಿ ವಿಜೇತರಾದ ಸ್ಪರ್ಧಿಗಳಿಗೆ ಕನ್ನಡ ರಾಜ್ಯೋತ್ಸವದಂದು ಗೌರವಿಸಿ ಪ್ರಶಸ್ತಿ ಪತ್ರ ನೀಡಲಾಗುತ್ತದೆ. ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಚಿಸುವವರು ಅ.26ರೊಳಗೆ ಕನ್ನಡ ಸಾಹಿತ್ಯ ಪರಿಷತ್ತು, ತಿ.ನರಸೀಪುರ ಶಾಖೆ, ಬಿಇಓ ಕಚೇರಿ ಪಕ್ಕ, ತಿ.ನರಸೀಪುರ ಈ ವಿಳಾಸದಲ್ಲಿ ಅರ್ಜಿ ಸಲ್ಲಿಸಬಹುದು ಎಂದು ತಿಳಿಸಿದರು.

ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು ಹಾಗೂ ಸಮಿತಿಯ ಪ್ರೋತ್ಸಾಹಕರು ಆದ ಡಾ.ಎಂ.ಮಾದೇಶ್ ಮಾತನಾಡಿ, ಕನ್ನಡಿಗರ ಸ್ವಾಭಿಮಾನದ ಪ್ರತೀಕವಾದ ಕನ್ನಡ ಧ್ವಜವನ್ನು ರಾಜ್ಯೋತ್ಸವದಂದು ಮನೆ ಮನೆಯ ಮೇಲೆ ಹಾರಿಸಿ ಬಿ.ಎಂ.ಶ್ರೀಕಂಠಯ್ಯ ರಚಿಸಿದ ಏರಿಸಿ ಹಾರಿಸಿ ಕನ್ನಡದ ಬಾವುಟ ತೋರಿಸಿ ಕೆಚ್ಚೆದೆಯ ಬಾವುಟ ಎಂಬ ಗೀತೆಯನ್ನು ಅರ್ಥ ಪೂರ್ಣ ವಾಗಿಸೋಣ ಎಂದು ಮನವಿ ಮಾಡಿ, ಪಟ್ಟಣದ ಎಲ್ಲ ವರ್ತಕರು ಅಂದು ತಮ್ಮ ಅಂಗಡಿ ಮಳಿಗೆಗಳ ಮೇಲೆ ಕನ್ನಡ ಬಾವುಟವನ್ನು ಸ್ವಇಚ್ಛೆಯಿಂದ ಹಾರಿಸಲು ನಿರ್ಧರಿಸಿದ್ದಾರೆ ಎಂದು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ ಉಪಾಧ್ಯಕ್ಷ ಡಾ.ಪ್ರದೀಪ್, ಟೌನ್ ಅಧ್ಯಕ್ಷ ಕೃಷ್ಣಮೂರ್ತಿ, ಕಾರ್ಯದರ್ಶಿ ಎಚ್.ಎಸ್. ನಾಗೇಂದ್ರ, ಸಾಂಸ್ಕೃತಿಕ ಘಟಕ ಅಧ್ಯಕ್ಷ ಹೆಚ್.ಎಸ್ .ಬಸವರಾಜು, ಸಂಘ ಸಂಸ್ಥೆಗಳ ಪ್ರತಿನಿಧಿ ಡಿ. ಮಾದೇಶ್, ತಾಲೂಕು ಕಲಾವಿದ ಸಂಘದ ಉಪಾಧ್ಯಕ್ಷ ಎಂ.ಮೂರ್ತಿ, ಸಂಘಟನಾ ಕಾರ್ಯದರ್ಶಿ ಶ್ರೀಕಾಂತರಾಜ ಅರಸ್, ಸಂಚಾಲಕ ಚೌಹಳ್ಳಿ ಮಲ್ಲೇಶ್, ಕಾರ್ಮಿಕ ಘಟಕದ ಅಧ್ಯಕ್ಷ ಬಸಪ್ಪ, ಸಹ ಕಾರ್ಯದರ್ಶಿ ಹರೀಶ್, ವಿದ್ವಾಂಸ ಎಸ್.ಮಹದೇವ ಶೆಟ್ಟಿ, ಕಾರ್ಯಾಧ್ಯಕ್ಷ ಪ್ರಸಾದ್, ಕೋಶಾಧ್ಯಕ್ಷ ಮಹದೇವ ಪ್ರಸಾದ್, ರಿಯಾಜ್ ಅಹಮದ್, ಸಾಮಾಜಿಕ ಜಾಲತಾಣ ಘಟಕದ ರವೀಂದ್ರ, ನಟೇಶ್, ಬಸವರಾಜು, ಕೊಳತ್ತೂರು ಮಹದೇವಸ್ವಾಮಿ ಉಪಸ್ಥಿತರಿದ್ದರು.

ತಿ.ನರಸೀಪುರ: ಹಸುಗಳಿಗೆ ಚರ್ಮಗಂಟು ರೋಗ

ಲಸಿಕೆ ಹಾಕಿಸಿಕೊಂಡು, ರೋಗದಿಂದ ಪಾರಾಗಲು ಮನವಿ

ತಿ.ನರಸೀಪುರ, ಅ.19– ತಾಲೂಕಿನಲ್ಲಿ ಹಸುಗಳಿಗೆ ಚರ್ಮ ಗಂಟು ರೋಗ ಹರಡುತ್ತಿದ್ದು, ತಾಲೂಕಿನ ರೈತಬಾಂಧವರು ತಮ್ಮ ಡೈರಿಗಳಲ್ಲಿ ಲಸಿಕೆಗಳನ್ನು ಹಾಕಿಸಿ ಹಸುಗಳನ್ನು ರೋಗದಿಂದ ಕಾಪಾಡಿಕೊಳ್ಳ ಬೇಕೆಂದು ಬಿಳಿಗೆರೆ ಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾದ ಬಿ. ಮಂಟೇಲಿಂಗಪ್ಪ



ಕರೆ ನೀಡಿದರು. ತಾಲೂಕಿನ ಬಿಲಿಗೆರೆಹುಂಡಿ ಡೈರಿ ಅವರಣದಲ್ಲಿ ತಾಲೂಕಿನಲ್ಲಿ ಪ್ರಥಮ ಬಾರಿಗೆ ಲಸಿಕೆಯನ್ನು ತರಿಸಿ ಚರ್ಮ ಗಂಟು ರೋಗಕ್ಕೆ ಲಸಿಕೆ ನೀಡಿದ್ದಾರೆ. ರೈತ ಬಾಂಧವರೇ ಹಸುಗಳ ಮೇಲೆ ನಿರ್ಲಕ್ಷತನ ತೋರದೆ ತಮ್ಮ ತಮ್ಮ ಡೈರಿಗಳಲ್ಲಿ ಕಡ್ಡಾಯವಾಗಿ ಲಸಿಕೆ ಹಾಕಿಸಿಕೊಳ್ಳುವ ಮೂಲಕ ಚರ್ಮ ಗಂಟು ರೋಗವನ್ನು ತಡೆಗಟ್ಟಿ ಮತ್ತು ಹಾಲು ಸಹ ಕೆಡುತ್ತದೆ. ಹಾಗೂ ಮನುಷ್ಯನಿಗೂ ತಗಲುವ ಸಾಧ್ಯತೆಯಿದೆ ಎಚ್ಚರಿಕೆಯಿಂದ ರೈತಬಾಂಧವರು ಕಡ್ಡಾಯವಾಗಿ ತಮ್ಮ ತಮ್ಮ ಡೈರಿಗಳಲ್ಲಿ ಲಸಿಕೆಯನ್ನು ಹಾಕಿಸಿ ಎಂದು ಹೇಳಿದರು. ಕಾರ್ಯದರ್ಶಿ ಪುರುಷೋತ್ತಮ್. ಪಶು ಇಲಾಖೆಯ ಸಹಾಯಕ ನಿರ್ದೇಶಕ ಮಹೇಶ್ ರೈತಬಾಂಧವರು ಹಾಜರಿದ್ದರು.

ಪ್ರತಿ 2000 ಮಂದಿಗೆ ಒಂದು ಆರೋಗ್ಯ ಕೇಂದ್ರ



ಹೆಚ್.ಡಿ.ಕೋಟೆ, ಅ.19– ಪಟ್ಟಣದಲ್ಲಿ ಸಾರ್ವಜನಿಕ ಆಸ್ಪತ್ರೆ ವ್ಯಾಪ್ತಿಗೆ ಬರುವ ಮುಸ್ಲಿಂ ಬ್ಲಾಕ್, ಹೌಸಿಂಗ್ ಬೋರ್ಡ್, ಹನುಮಂತ ನಗರ, ಉಪ ಕೇಂದ್ರಗಳ ಆರೋಗ್ಯ ಮತ್ತು ಕ್ಷೇಮ ಕೇಂದ್ರದ ಕಾರ್ಯಕ್ರಮವನ್ನು ಪುರಸಭೆ ಅಧ್ಯಕ್ಷೆ ಅನಿತಾ ಉದ್ಘಾಟಿಸಿದರು.


ಕಾರ್ಯಕ್ರಮವನ್ನು ಕುರಿತು ಆರೋಗ್ಯಾಧಿಕಾರಿ ಡಾ. ಟಿ.ರವಿಕುಮಾರ್ ಮಾತನಾಡಿ, 2000 ಜನ ಸಂಖ್ಯೆಗೆ ಒಂದು ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳನ್ನಾಗಿ ಮಾಡಿ ಅಲ್ಲಿಗೆ ಒಬ್ಬ ಸಮುದಾಯ ಆರೋಗ್ಯ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ, ಈ ಆರೋಗ್ಯ ಮತ್ತು ಕ್ಷೇಮ ಕೇಂದ್ರದಲ್ಲಿ ಸಾರ್ವಜನಿಕರಿಗೆ ಸೌಲಭ್ಯಗಳಾದ ರಕ್ತದೊತ್ತಡ, ಸಕ್ಕರೆ ಕಾಯಿಲೆ, ಗರ್ಭಿಣಿಯರ ತಪಾಸಣೆ ಹಾಗೂ ಸಣ್ಣಪುಟ್ಟ ಕಾಯಿಲೆಗಳಿಗೆ ಚಿಕಿತ್ಸೆ ಸಿಗಲಿದೆ. ತಾಯಿ ಮಕ್ಕಳ ಹಾಗೂ ಸಾಂಕ್ರಾಮಿಕ ಮತ್ತು ಅಸಾಂಕ್ರಾಮಿಕ ರೋಗಗಳ ಪತ್ತೆ ಹಚ್ಚುವಿಕೆ ಮತ್ತು ಉಚಿತ ಚಿಕಿತ್ಸೆ, ಹಿರಿಯ ನಾಗರಿಕರ ಆರೋಗ್ಯ ತಪಾಸಣೆ, ಆಪ್ತ ಸಮಾಲೋಚನೆ, ಯೋಗ ಶಿಕ್ಷಣ ಸೇವೆಗಳು, ಈ ಆರೋಗ್ಯ ಮತ್ತು ಕ್ಷೇಮ ಕೇಂದ್ರದಲ್ಲಿ ಸಿಗುತ್ತದೆ ಆದುದರಿಂದ ಸಾರ್ವಜನಿಕರು, ಸದುಪಯೋಗಪಡಿಸಿಕೊಳ್ಳಬೇಕೆಂದು ತಿಳಿಸಿದರು.

ಸಾರ್ವಜನಿಕ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿಗಳಾದ ಡಾ. ಸೋಮಣ್ಣ ಮಾತನಾಡಿ, ಉಚಿತವಾಗಿ ರಕ್ತದೊತ್ತಡ ಮತ್ತು ಸಕ್ಕರೆ ಕಾಯಿಲೆಯನ್ನೂ ಉಚಿತವಾಗಿ ಪರೀಕ್ಷೆ ಮಾಡುತ್ತಾರೆ. ಆದುದರಿಂದ ಎಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ತಪಾಸಣೆ ಮಾಡಿಸಿಕೊಳ್ಳಿ ಎಂದು ತಿಳಿಸಿದರು.

ಪುರಸಭೆ ಮುಖ್ಯಾಧಿಕಾರಿ ಸುರೇಶ್ ಮಾತನಾಡಿ ಆರೋಗ್ಯ ಮತ್ತು ಕ್ಷೇಮ ಕೇಂದ್ರವನ್ನು ತೆರೆದಿರುವುದು ಒಳ್ಳೆಯ ಉದ್ದೇಶವಾಗಿದೆ, ಇದರಿಂದ ಜನರಿಗೆ ಹೆಚ್ಚು ಅನುಕೂಲವಾಗುತ್ತದೆ. ಇದರ ಹೆಚ್ಚು ಪ್ರಚಾರವನ್ನು ಪುರಸಭೆ ವತಿಯಿಂದ ಜನರಿಗೆ ತಲುಪಿಸುತ್ತೇವೆ ಎಂದು ತಿಳಿಸಿದರು, ಪುರಸಭಾ ಸದಸ್ಯರುಗಳಾದ ಆಸೀಫ್, ಮಧುಕುಮಾರ್, ಪ್ರೇಮ್‌ಸಾಗರ್, ಪುರಸಭೆ ಮುಖ್ಯ ಅಧಿಕಾರಿ ಸುರೇಶ್, ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ. ಸೋಮಣ್ಣ ಆರೋಗ್ಯ ಇಲಾಖೆ ಸಿಬ್ಬಂದಿಗಳಾದ ನಾಗೇಂದ್ರ, ರವಿರಾಜ್, ಹನುಮಂತು, ಅಶೋಕ್, ಸರಳ, ಸುನಿಲ್, ಅರ್ಚನಾ, ಪ್ರತಾಪ್, ಸಮುದಾಯ ಆರೋಗ್ಯ ಅಧಿಕಾರಿಗಳಾದ ರೀನಾ, ದೇವಿಂದ್ರಮ್ಮ, ವಿದ್ಯಾ, ಸರಸ್ವತಿ, ನಾಗಮ್ಮ, ಶಿವು ಸಂತೋಷ್, ರಾಜು, ಸುಷ್ಮಾ, ಆಶಾ ಚಕ್ರವರ್ತಿ ಮತ್ತು ಮುಂತಾದವರು ಹಾಜರಿದ್ದರು.

ಮಕ್ಕಳಿಗೆ ಮುಗ್ಗಲು ಆಹಾರ ಪದಾರ್ಥಗಳ ಪೂರೈಕೆ

● ಆಹಾರ ಸೇವಿಸಿದ ಮಕ್ಕಳಿಗೆ ವಾಂತಿ, ಹೊಟ್ಟೆ ನೋವು
● ಅಂಗನವಾಡಿಗೆ ಕೊಳೆತ ಆಹಾರ ಪದಾರ್ಥಗಳ ಸರಬರಾಜು



ಮಲ್ಲುಂಡಿ, ಅ.19– ಮುಗ್ಗಲು ಆಹಾರ ಪದಾರ್ಥಗಳ ಪೂರೈಕೆಯಿಂದ ಮಕ್ಕಳಿಗೆ ವಾಂತಿ, ಹೊಟ್ಟೆ ನೋವು ಕಾಣಿಸಿಕೊಂಡಿರುವ ಘಟನೆ ನಂಜನಗೂಡು ತಾಲೂಕಿನ ಹೆಡಿಯಾಲ ಗ್ರಾಮದಲ್ಲಿ ನಡೆದಿದೆ,

ಹೆಡಿಯಾಲ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಮಕ್ಕಳಿಗೆ ಮುಗ್ಗಲು ಆಹಾರ ಪದಾರ್ಥಗಳನ್ನು ಪೂರೈಕೆ ಮಾಡಲಾಗುತ್ತಿದ್ದು, ಆಹಾರ ಸೇವಿಸಿದ ಮಕ್ಕಳಿಗೆ ಹೊಟ್ಟೆ ನೋವು, ವಾಂತಿಯಾಗಿದೆ. ಗ್ರಾಮದ 3ನೇ ಅಂಗನವಾಡಿ ಕೇಂದ್ರದಲ್ಲಿ ಕಳಪೆ ಆಹಾರ ಪದಾರ್ಥಗಳ ಪೂರೈಕೆ ಮಾಡುತ್ತಿರುವುದು ಬೆಳಕಿಗೆ ಬಂದಿದೆ.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಶಿಶು ಅಭಿವೃದ್ಧಿ ಇಲಾಖೆಯಿಂದ ಮಕ್ಕಳಲ್ಲಿ ಅಪೌಷ್ಟಿಕತೆ ಹೋಗಲಾಡಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪುಟಾಣಿ ಮಕ್ಕಳಿಗೆ, ಗರ್ಭಿಣಿ, ಬಾಣಂತಿಯರಿಗೆ ಅಂಗನವಾಡಿ ಕೇಂದ್ರಗಳ ಮೂಲಕ ನೀಡುತ್ತಿರುವ ಪೌಷ್ಠಿಕ ಆಹಾರ ಈಗ ಅಪೌಷ್ಟಿಕತೆಯಿಂದ ಕೂಡಿದೆ. ಗ್ರಾಮದಲ್ಲಿರುವ 3ನೇ ಅಂಗನವಾಡಿ ಕೇಂದ್ರದಲ್ಲಿ ಸುಮಾರು 25 ಕ್ಕೂ ಹೆಚ್ಚು ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಮಕ್ಕಳು, ಗರ್ಭಿಣಿ ಮತ್ತು ಬಾಣಂತಿಯರಿಗೆ ನೀಡಿದ ಆಹಾರ ಪ್ಯಾಕೆಟ್‌ನಲ್ಲಿ ಅವಧಿ ಮುಗಿದ ಕಳಪೆ ಗುಣಮಟ್ಟದ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಿರುವುದು ಬೆಳಕಿಗೆ ಬಂದಿದೆ. ಪ್ಯಾಕೇಟ್ ಬಿಚ್ಚಿ ನೋಡಿದ್ರೆ ಮುಗ್ಗಲು ಅಕ್ಕಿ, ಕಡಲೆ ಬೀಜ, ಕಡಲೆ ಮಿಠಾಯಿ ಸೇರಿದಂತೆ ಇನ್ನುಳಿದ ಪದಾರ್ಥಗಳು ಕೊಳೆತ ಸ್ಥಿತಿಯಲ್ಲಿ ಕಂಡುಬಂದಿದೆ. ಈ ಆಹಾರ ಪದಾರ್ಥಗಳನ್ನು ಸೇವಿಸಿ ಮೂರು ಮಕ್ಕಳಿಗೆ ಹೊಟ್ಟೆ ನೋವು, ವಾಂತಿ ಕಾಣಿಸಿಕೊಂಡಿದೆ ತಕ್ಷಣ ಅವರನ್ನು ಸರಗೂರಿನ ಸ್ವಾಮಿ ವಿವೇಕಾನಂದ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲು ಮಾಡಲಾಯಿತು.

ನಂಜನಗೂಡು ಎಂಎಸ್‌ಪಿಸಿ ನಂಜನಗೂಡು ತಾಲೂಕು, ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಪ್ರಾಯೋಜಿಸಲ್ಪಟ್ಟಿದೆ ಎಂದು ಪ್ಯಾಕೆಟ್‌ನಲ್ಲಿ ನಮೂದಿಸಿದೆ. ಮಕ್ಕಳಿಗೆ ವಿಷಕಾರಿ ಆಹಾರ ಪದಾರ್ಥಗಳನ್ನು ಪೂರೈಕೆ ಮಾಡುತ್ತಿರುವ ಈ ಏಜೆನ್ಸಿ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಗ್ರಾಪಂ ಮಾಜಿ ಅಧ್ಯಕ್ಷ ನೆಮಂತ್ ಖಾನ್ ಒತ್ತಾಯ ಮಾಡಿದ್ದಾರೆ.

ಸ್ಥಳಕ್ಕೆ ಗ್ರಾಪಂ ಅಧ್ಯಕ್ಷೆ ಮಂಜುಳಾ, ಗ್ರಾ.ಪಂ ಸದಸ್ಯರಾದ ನೆಮಂತ್ ಖಾನ್, ಅಶ್ರಫ್ ಪಾಲಿ, ಶಿಲ್ಪಾ ಪರಶಿವಪ್ಪ, ಮರಿಂಬೇಬಿ, ಹಲವರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕಳಪೆ ಆಹಾರ ಪೂರೈಕೆ ಮಾಡಿ ಮಕ್ಕಳ ಪ್ರಾಣದ ಜೊತೆ ಚೆಲ್ಲಾಟವಾಡುತ್ತಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.



ಹುಣಸೂರಿನ ಅಂಬೇಡ್ಕರ್ ಭವನದಲ್ಲಿ ಕಾರ್ಮಿಕ ಇಲಾಖೆಯಿಂದ ಕಟ್ಟಡ ಕಾರ್ಮಿಕರಿಗೆ ಉಚಿತವಾಗಿ ನೀಡಿದ ಟೂಲ್ಸ್ ಕಿಟ್ ಅನ್ನು ಶಾಸಕ ಹೆಚ್.ಪಿ. ಮಂಜುನಾಥ್ ವಿತರಿಸಿದರು. ಈ ವೇಳೆ ತಾಪಂ ಇಓ ಮನು, ಕಾರ್ಮಿಕ ಇಲಾಖೆ ನಿರೀಕ್ಷಕರಾದ ಲಕ್ಷ್ಮೀಶ್, ನಗರಸಭೆ ಅಧ್ಯಕ್ಷೆ ಗೀತಾ, ಉಪಾಧ್ಯಕ್ಷೆ ಆಶಾ ಹಾಜರಿದ್ದರು.

ನಂಜುಂಡ ನಿಧನ



ಹೆಚ್.ಡಿ.ಕೋಟೆ, ಅ.19– ಪಟ್ಟಣದ ಸ್ಟೇಡಿಯಂ ಬಡಾವಣೆ ನಿವಾಸಿ ಅಂಚೆ ಇಲಾಖೆ ನೌಕರ ಎಚ್.ಎನ್.ನಂಜುಂಡ (50) ಅನಾರೋಗ್ಯದಿಂದ ಬುಧವಾರ ಮೃತಪಟ್ಟಿದ್ದಾರೆ. ಮೃತರು ಪತ್ನಿ ಹಾಗೂ ಇಬ್ಬರು ಮಕ್ಕಳು, ಕುಟುಂಬ ವರ್ಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೂಕು ಕೊಟಗೇರೆ ಗ್ರಾಮದಲ್ಲಿ ಗುರುವಾರ ನೆರವೇರಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಲೋಕೇಶ್



ಹೆಚ್.ಡಿ.ಕೋಟೆ, ಅ.19– ಪಟ್ಟಣದ ಸಿದ್ದಪ್ಪಾಜಿ ರಸ್ತೆಯ ಲೋಕೇಶ್ (30) ಕೆಲ ತಿಂಗಳಿನಿಂದ ಕಿಡ್ನಿ ವೈಫಲ್ಯದಿಂದ ಬಳಲುತ್ತಿದ್ದು, ಬುಧವಾರ ನಿಧನರಾಗಿದ್ದಾರೆ. ಮೃತರು ತಾಯಿ, ಪತ್ನಿ, ಇಬ್ಬರು ಹೆಣ್ಣು ಮಕ್ಕಳು ಮತ್ತು ಕುಟುಂಬ ವರ್ಗ ಅಗಲಿದ್ದಾರೆ. ಮೃತನ ಅಂತ್ಯಕ್ರಿಯೆಯನ್ನು ಪಟ್ಟಣದ ರುದ್ರಭೂಮಿ ಯಲ್ಲಿ ಬುಧವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಈರಮ್ಮ



ಕಂಪಲಾಪುರ, ಅ.19– ಇಲ್ಲಿನ ಮಡಿವಾಳರ ಬೀದಿ ನಿವಾಸಿ ಈರಮ್ಮ (71) ಬುಧವಾರ ಮಧ್ಯಾಹ್ನ ನಿಧನರಾಗಿದ್ದಾರೆ.

ಮೃತರು ಪುತ್ರ, ಪುತ್ರಿ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ (ಗುರುವಾರ) ಮಧ್ಯಾಹ್ನ 12 ಗಂಟೆಗೆ ಕಂಪಲಾಪುರದ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿದೆ.

ಕುಶಾಲನಗರ ಬಳಿಯ ರೆಸಾರ್ಟ್‌ನಲ್ಲಿ ಗುಜರಾತ್ ಪ್ರವಾಸಿಗಳ ವಜ್ರ, ಚಿನ್ನಾಭರಣ, ನಗದು ಕಳವು

ಕುಶಾಲನಗರ,ಅ.19–ಪ್ರವಾಸಕ್ಕಾಗಿ ಕೊಡಗಿಗೆ ಬಂದಿದ್ದ ಗುಜರಾತ್ ಪ್ರವಾಸಿಗರ 9.84 ಲಕ್ಷ ರೂ. ಮೌಲ್ಯದ ವಜ್ರ, ಚಿನ್ನಾಭರಣ ಹಾಗೂ ನಗದನ್ನು ರೆಸಾರ್ಟ್‌ವೊಂದರಲ್ಲಿ ಕಳವು ಮಾಡಿರುವ ಬಗ್ಗೆ ವರದಿಯಾಗಿದೆ.

ವಿವರ: ಗುಜರಾತ್‌ನ ಅಬ್ಬಾ (52) ಎಂಬುವರು ತಮ್ಮ ಮಕ್ಕಳು ಹಾಗೂ ಸ್ನೇಹಿತರೊಂದಿಗೆ ಕೊಡಗು ಪ್ರವಾಸಕ್ಕೆ ಆಗಮಿಸಿ, ಕುಶಾಲನಗರ ಬಳಿಯಿರುವ ಅಮ್ಮನ ವನ ರೆಸಾರ್ಟ್‌ನಲ್ಲಿ ಸೆ.15ರಂದು ಸಂಜೆಯಿಂದ ವಾಸ್ತವ್ಯ ಹೂಡಿದ್ದರು. 2 ರೂಂಗಳನ್ನು ಬುಕ್ ಮಾಡಿದ್ದ ಅವರು ಸೆ.16ರಂದು ಮಡಿಕೇರಿಯ ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಿಸಿದ ನಂತರ ಅಂದು ಸಂಜೆ ರೆಸಾರ್ಟ್‌ಗೆ ಆಗಮಿಸಿ ವಿಶ್ರಾಂತಿ ಪಡೆದರು.

ಮರುದಿನ ಬೆಳಗ್ಗೆ ರೆಸಾರ್ಟ್‌ನಲ್ಲೇ ಇರುವ ರೆಸ್ಟೋರೆಂಟ್‌ನಲ್ಲಿ ಉಪಾಹಾರ ಸೇವಿಸಿ, ಮತ್ತೆ ಪ್ರೇಕ್ಷಣೀಯ ಸ್ಥಳಕ್ಕೆ ತೆರಳಲು ರೂಂನ ಟೇಬಲ್ ಮೇಲೆ ಇಟ್ಟಿದ್ದ ಪರ್ಸ್‌ಗಳನ್ನು ನೋಡಿದಾಗ ಅಬ್ಬಾ ಅವರ ಪರ್ಸ್‌ನಲ್ಲಿದ್ದ 2 ವಜ್ರದ ಬಳೆ, 1 ವಜ್ರದ ಉಂಗುರ, 1 ವಜ್ರದ ಪೆಂಡೆಂಟ್ ಇರುವ ಚಿನ್ನದ ಚೈನ್ ಮತ್ತು 75 ಸಾವಿರ ರೂ. ನಗದು, ಅವರ ಸ್ನೇಹಿತೆ ಮೋನಿಕಾ ಅವರ ಪರ್ಸ್‌ನಲ್ಲಿದ್ದ 1 ಜೊತೆ ವಜ್ರದ ಓಲೆ, 1 ವಜ್ರದ ಪೆಂಡೆಂಟ್ ಇರುವ ಚಿನ್ನದ ಚೈನ್, 1 ವಜ್ರದ ಉಂಗುರ ಹಾಗೂ 45 ಸಾವಿರ ರೂ. ನಗದು, ಮತ್ತೋರ್ವ ಸ್ನೇಹಿತೆ ಪ್ರತೀಕ್ಷ ಅವರ ಪರ್ಸ್‌ನಲ್ಲಿದ್ದ 10 ಸಾವಿರ ನಗದು ಸೇರಿದಂತೆ ಒಟ್ಟು 9.84 ಲಕ್ಷ ಮೌಲ್ಯದ ವಜ್ರಾಭರಣ ಹಾಗೂ ನಗದನ್ನು ಕಳವು ಮಾಡಲಾಗಿದೆ. ರೆಸಾರ್ಟ್ ರೂಂನ ಕಿಟಕಿಗೆ ಯಾವುದೇ ರೀತಿಯ ಸರಳುಗಳನ್ನು ಅಳವಡಿಸದೆ ಗ್ಲಾಸ್ ಡೋರ್ ಮಾತ್ರ ಇದ್ದು, ಖದೀಮರು ಕಿಟಕಿ ಮೂಲಕ ಒಳನುಗ್ಗಿ ವಜ್ರಾಭರಣ ಹಾಗೂ ನಗದನ್ನು ಕಳವು ಮಾಡಿರಬಹುದೆಂದು ಅವರು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಕುಶಾಲನಗರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅನುಮಾನಾಸ್ಪದವಾಗಿ ಸಾವಿಗೀಡಾಗಿದ್ದ ಯುವಕನ ಕೊಲೆ ಸಾಬೀತು: ಮೂವರ ವಿರುದ್ಧ ಪ್ರಕರಣ ದಾಖಲು

ಸೋಮವಾರಪೇಟೆ, ಅ.19– ನಾಲ್ಕು ತಿಂಗಳ ಹಿಂದೆ ಅನುಮಾನಾಸ್ಪದವಾಗಿ ಸಾವನ್ನಪ್ಪಿದ ಯುವಕ ಕೊಲೆಯಾಗಿದ್ದಾನೆ ಎಂದು ಮರಣೋತ್ತರ ಪರೀಕ್ಷಾ ವರದಿಯಿಂದ ಬೆಳಕಿಗೆ ಬಂದ ಹಿನ್ನೆಲೆಯಲ್ಲಿ ಸೋಮವಾರಪೇಟೆ ಪೊಲೀಸರು ಮೂವರ ವಿರುದ್ಧ 304(2) (ಉದ್ದೇಶವಲ್ಲದ ಕೊಲೆ) ಮತ್ತು 34 ಐಪಿಸಿ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಿದ್ದಾರೆ.

ಸೋಮವಾರಪೇಟೆ ತಾಲೂಕು ಬಿಳಿಗೆರೆ ಗ್ರಾಮದ ಕುಮಾರ (25) ಎಂಬಾತ ಕೊಲೆಯಾದವನಾಗಿದ್ದು, ಆತನ ಸ್ನೇಹಿತರಾದ ಕಿರಗಂದೂರು ಗ್ರಾಮದ ಕೆ.ಕೆ. ರವಿಕುಮಾರ್ (31), ಡಿ.ಎಸ್.ದೇವರಾಜು (59) ಮತ್ತು ಬಿಳಿಗೆರೆ ಗ್ರಾಮದ ಗಿರೀಶ್ (38) ಆರೋಪಕ್ಕೆ ಗುರಿಯಾದವರು.

ವಿವರ: ಕೂಲಿ ಕೆಲಸ ಮಾಡುವ ಕುಮಾರ ಕೆಲಸಕ್ಕೆ ಹೋಗುವುದಾಗಿ ತಿಳಿಸಿ, ಜೂ.21ರಂದು ಮನೆಯಿಂದ ತೆರಳಿದವನು ಮತ್ತೆ ವಾಪಸ್ಸಾಗಿಲ್ಲ. ಆದರೆ, ಜು.1ರಂದು ಕಿರಗಂದೂರು ಗ್ರಾಮದ ರೋಷನ್ ಎಂಬುವರ ಕಾಫಿ ತೋಟದಲ್ಲಿ ಕೊಳೆತ ಸ್ಥಿತಿಯಲ್ಲಿ ಆತನ ಶವ ಪತ್ತೆಯಾಗಿತ್ತು. ಈ ಸಂಬಂಧ ಅನುಮಾನಾಸ್ಪದ ಸಾವು ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು ತನಿಖೆ ಮುಂದುವರೆಸಿದ್ದರು.

ಮರಣೋತ್ತರ ಪರೀಕ್ಷಾ ವರದಿಯಲ್ಲಿ ಆತ ಮದ್ಯಪಾನ ಮಾಡಿರುವುದು ಹಾಗೂ ತಲೆಯಲ್ಲಿ ಗಾಯವಾಗಿರುವುದರ ಬಗ್ಗೆ ಉಲ್ಲೇಖವಾಗಿದೆ. ಈ ಹಿನ್ನೆಲೆಯಲ್ಲಿ ಆತನೊಂದಿಗೆ ಮದ್ಯ ಸೇವನೆ ಮಾಡಿದವರು ಯಾರು ಎಂಬುದನ್ನು ಪತ್ತೆ ಹಚ್ಚಿ ಮೂವರು ಆರೋಪಿಗಳನ್ನು ವಶಕ್ಕೆ ಪಡೆದುಕೊಂಡ ಸಬ್‌ಇನ್ಸ್‌ಪೆಕ್ಟರ್ ರಮೇಶ್‌ಕುಮಾರ್ ವಿಚಾರಣೆ ಗೊಳಪಡಿಸಿದಾಗ ಮದ್ಯ ಸೇವನೆ ಮಾಡಿದ ನಂತರ ರವಿಕುಮಾರ್ ಮತ್ತು ದೇವರಾಜು ಮಕ್ಕಳಗುಡಿ ಬೆಟ್ಟದ ಕಲ್ಲು ಕ್ವಾರೆಯ ಮೇಲೆ ಕುಮಾರನನ್ನು ಎತ್ತಿ ಎತ್ತಿ ಕೆಳಕ್ಕೆ ಹಾಕಿ ಪಲ್ಟಿ ಹೊಡೆಸಿದ್ದಾರೆ. ಹಾಗೂ ಗಿರೀಶ್ ಕುಡಿದ ಅಮಲಿನಲ್ಲಿ ಕುಮಾರನ ಕಪಾಳಕ್ಕೆ ಹೊಡೆದಿದ್ದಾನೆ. ಈ ವೇಳೆ ಕುಮಾರ ಸಾವನ್ನಪ್ಪಿದ್ದಾನೆ ಎಂದು ತಿಳಿದುಬಂದಿದೆ. ಸಬ್‌ಇನ್ಸ್‌ಪೆಕ್ಟರ್ ರಮೇಶ್ ಕುಮಾರ್ ಅವರು ಅ.17ರಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.


ಅ.23ರಂದು ವಾರ್ಷಿಕ ಮಹಾಸಭೆ

ಮೈಸೂರು, ಅ. 19– ಮೈಸೂರಿನ ಜೆ.ಪಿ.ನಗರದ ಸ್ನೇಹನಿಧಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆಯು ಸಂಘದ ಅಧ್ಯಕ್ಷ ಚಲುವಯ್ಯ ಅವರ ಅಧ್ಯಕ್ಷತೆಯಲ್ಲಿ ಅ. 23 ರಂದು ಬೆಳಗ್ಗೆ 11 ಗಂಟೆಗೆ ಸಂಘದ ಆವರಣದಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಅ. 19– ಮೈಸೂರಿನ ದಟ್ಟಗಳ್ಳಿ 3ನೇ ಹಂತದಲ್ಲಿರುವ ನಯನ ಕುಮಾರ್ಸ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಅ.22ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 3 ಗಂಟೆಯವರೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.





ಸಾರ್ವಜನಿಕ ಪ್ರಕಟಣೆ

ಮಧೂಸ್ ಟೈರ್ಸ್

(Since 1951)

ಗೋಪಾಲಗೌಡ ಆಸ್ಪತ್ರೆ / ನಜರ್‌ಬಾದ್‌ನಲ್ಲಿ ನಮ್ಮ ಯಾವುದೇ ಶಾಖೆ (Branch) ಇರುವುದಿಲ್ಲ





ತಾಲ್ಲೂಕು ಪಂಚಾಯತ್, ತಿ.ನರಸೀಪುರ

ವಾಹನ ಟೆಂಡರ್ ಪ್ರಕಟಣೆ

2022–23ನೇ ಸಾಲಿನಲ್ಲಿ ದಿ: 01.11.2022 ರಿಂದ 31.10.2023ರ ತಾತ್ಕಾಲಿಕ ಅವಧಿಗೆ ತಾಲ್ಲೂಕು ಪಂಚಾಯಿತಿ ತಿ.ನರಸೀಪುರ ಕಛೇರಿಯ ಸಹಾಯಕ ನಿರ್ದೇಶಕರು (ಗ್ರಾ.ಉ) ರವರ ಕಛೇರಿ ಉಪಯೋಗಕ್ಕಾಗಿ ಹೊರಗುತ್ತಿಗೆ ಆಧಾರದ ಮೇಲೆ ವಾಹನ ಸೇವೆಯನ್ನು ಪಡೆಯಲು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ.

1) ಟೆಂಡರ್ ಪ್ರಕಟಣೆ: 14.10.2022 2) ಅರ್ಜಿ ಸಲ್ಲಿಸಲು ಕೊನೆಯ ದಿ: 28.10.2022 3) ತಾಂತ್ರಿಕ ಲಕೋಟೆ ತೆರೆಯುವ ದಿ: 29.10.2022 (ಬೆ.11.30 ಗಂಟೆಗೆ). 4) ಆರ್ಥಿಕ ಲಕೋಟೆ ತೆರೆಯುವ ದಿ: 29.10.2022 (ಮ.3.30 ಗಂಟೆಗೆ). 5) ಟೆಂಡರ್ ಮೊತ್ತ 4.80 (ಲಕ್ಷಗಳಲ್ಲಿ).

ಸಹಿ/– ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ತಿ.ನರಸೀಪುರ

DIPR/DDMYS/MCA/579/2022-23

ಗುಂಡ್ಲುಪೇಟೆ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ

ಅಸಲು ದಾವ ಸಂಖ್ಯೆ 283/2021

ವಾದಿ: ಟಿ.ಪಿ.ನಟರಾಜು, S/o ಲೇಟ್. ಪುಟ್ಟನಂಜಪ್ಪ, ತೆರಕಣಾಂಬಿ ಗ್ರಾಮ, ಗುಂಡ್ಲುಪೇಟೆ ತಾಲ್ಲೂಕು

ವಿರುದ್ಧ

ಪ್ರತಿವಾದಿಗಳು : ಡಿ2 – ಪಿ.ಚಂದ್ರಶೇಖರ, S/o ಲೇಟ್ ಪುಟ್ಟನಂಜಪ್ಪ C/o ಅಡಿಗೆರಾಜು, 58 ವರ್ಷ 'ಎ' ಬ್ಲಾಕ್, ಜೆ.ಪಿ.ನಗರ, ಮೈಸೂರು ಸಿಟಿ.

ಪತ್ರಿಕಾ ಪ್ರಕಟಣೆ

ಮೇಲ್ಕಂಡ ವಾದಿ ಟಿ.ಪಿ. ನಟರಾಜುರವರು ಮೇಲ್ಕಂಡ ಪಿ.ಚಂದ್ರಶೇಖರ ಆದ ನಿಮ್ಮ ಮೇಲೆ ಮೇಲ್ಕಂಡ ಅಸಲು ದಾವೆಯನ್ನು ದಾವಾ ಸ್ವತ್ತುಗಳ ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನ ಕೋರಿ ಸಲ್ಲಿಸಿರುತ್ತಾರೆ. ಸದರಿ ಪ್ರಕರಣವು ದಿನಾಂಕ 05.11.2022 ರಂದು ವಿಚಾರಣೆಗೆ ಇರುತ್ತದೆ ಸದರಿ ದಿನಾಂಕ ಮುಖಾಂತರ ಹಾಜರಾಗತಕ್ಕದ್ದು, ತಪ್ಪಿದರೆ ನಿಮ್ಮ ಹಾಜರಾತಿಯನ್ನು ಗೈರು ಹಾಜರಾತಿ ಎಂದು ಪರಿಗಣಿಸಿ 'ಏಕಪಕ್ಷೀಯಾ' ವಿಚಾರಣೆ ಮುಂದುವರೆಯುತ್ತದೆ ತಿಳಿಯುವುದು.

ಸಹಿ/– ಶಿರಸ್ತೇದಾರರು, ಪ್ರಧಾನ ಸಿವಿಲ್ ಜಡ್ಜ್ ನ್ಯಾಯಾಲಯ, ಗುಂಡ್ಲುಪೇಟೆ

ಸಹಿ/– ಆರ್.ಎನ್. ನಂಜುಂಡಸ್ವಾಮಿ, ವಕೀಲರು

100% NEEM WOOD PLYWOOD & DOORS @ FACTORY DEPOT RATES

NEEM BOND PLATINUM™ 10 YEAR WARRANTY

9901291267
9845426862
www.ssbuildmart.com

ಬೇಕಾಗಿದ್ದಾರೆ

Hero Electric ಮತ್ತು Exide ಕಂಪನಿಗಳ ಬ್ಯಾಟರಿ ಚಾಲಿತ ಸ್ಕೂಟರ್‌ಗಳು, ಬ್ಯಾಟರಿಗಳು ಹಾಗೂ UPS ಗಳ 'ಸರ್ವಿಸ್ ಸೆಂಟರ್' ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.

ವಿದ್ಯಾರ್ಹತೆ : PUC / ITI

(ಇಲೆಕ್ಟ್ರಾನಿಕ್ ಉಪಕರಣಗಳ ರಿಪೇರಿ ತಿಳಿದವರಿಗೆ/ ಮೈಸೂರಿನಲ್ಲಿ ವಾಸವಿರುವವರಿಗೆ ಆದ್ಯತೆ)

– ಉತ್ತಮ ಬೆಳವಣಿಗೆಯ ಅವಕಾಶಗಳು –

ಕೂಡಲೆ ಸಂಪರ್ಕಿಸಿ

ಶ್ರೀಧರ್ 98451 97718

ಶ್ರೀವರ್ಧಿನಿ ವೆಂಚರ್ಸ್, ಕುವೆಂಪುನಗರ



GOLD COMPANY

ಗಿರವಿ ಚಿನ್ನಾಭರಣ ಖರೀದಿ

ಒಂದು ಗ್ರಾಂ ಚಿನ್ನಕ್ಕೆ **5100**

ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಳ್ಳುತ್ತೇವೆ

ಕೂಡಲೇ ಸಂಪರ್ಕಿಸಿ – (T&C)

9964522225

ಮೈಸೂರು ಮಿತ್ರ 43 ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸಾಲ ಸೌಲಭ್ಯ

* ಕೃಷಿ ಸಾಲ
* ವ್ಯವಹಾರ ಸಾಲ
* ವೈಯಕ್ತಿಕ ಸಾಲ
* ಸ್ಥಿರಾಸ್ತಿ ಸಾಲ
* ವಿದ್ಯಾ ಸಾಲ
* ಮಾರ್ಟ್‌ಗೇಜ್ ಸಾಲ

ಆಕರ್ಷಕ ಬಡ್ಡಿದರ ಹಾಗೂ ಸಬ್ಸಿಡಿ ನೀಡಲಾಗುತ್ತದೆ.

ಸಂಪರ್ಕಿಸಿರಿ

7290953522

